ಶ್ರೀ ಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾಯನಮಃ

ಅಥ ಶ್ರೀಮದ್ಭಗವದ್ಗೀತಾ ಮೂರನೇ ಅಧ್ಯಾಯ ಕನ್ನಡಾನುವಾದದೊಂದಿಗೆ.

ಶ್ರೀಗುರುಭ್ಯೋನಮಃ । ಹರಿಃ ಓಂ।

ಗೀತಾ:: ಅರ್ಜುನ ಉವಾಚ-- ಜ್ಯಾಯಸೀ ಚೇತ್ಕರ್ಮಣಸ್ತೇ ಮತಾ ಬುದ್ಧಿರ್ಜನಾರ್ದನ ।

ತತ್ಕಿಂ ಕರ್ಮಣಿ ಘೋರೇ ಮಾಮ ನಿಯೋಜಯಸಿ ಕೇಶವ ॥1॥

ವ್ಯಾಮಿಶ್ರೇಣೈವ ವಾಕ್ಯೇನ ಬುದ್ಧಿಂ ಮೋಯಹಸೀವ ಮೇ ।

ತದೇಕಂ ವದ ನಿಶ್ಚಿತ್ಯ ಯೇನ ಶ್ರೇಯೋ್ರಹಮಾಪ್ನುಯಾಮ್॥ 2 ॥

ಕನ್ನಡಾರ್ಥ:- ''ಅಥ ತೃತೀಯೋಧ್ಯಾಯ''

ಪೂರ್ವಾಧ್ಯಾಯದಲ್ಲಿ ಬ್ರಹ್ಮಜ್ಞಾನಿಗಳ ದೃಷ್ಟಾಂತ ಕೊಟ್ಟು ಇಂದ್ರಿಯಜಯಾದಿಗಳನ್ನು ಕೊಡಿಸಿ ಬ್ರಹ್ಮಾಪರೋಕ್ಷ ಜ್ಞಾನವನ್ನು ಹುಟ್ಟಿಸುವ ನಿಷ್ಕಾಮಕರ್ಮಾನುಷ್ಠಾನವನ್ನೇ ನೀನು ಮಾಡು ಎಂದು ಹೇಳಿದನು. ಹಾಗೆ ಹೇಳುವಾಗ ರಾಗದ್ವೇಷಾದಿಗಳಿಗೆ ಕಾರಣವಾಗುವ ವಿಷಯಧ್ಯಾನವನ್ನು ಮಾಡಬೇಡ ಎಂದು ಬೋಧಿಸಿದನು. ಮತ್ತೂ ಸರ್ವಕಾಮಗಳನ್ನು ತ್ಯಜಿಸಿ ಶ್ರವಣ,ಮನನ- ಗಳೆಂಬ ಉತ್ತಮ ನಿಷ್ಕಾಮ ಕರ್ಮಗಳನ್ನು ಪುನಃ ಪುನಃ ನಿಖಿಲ ರಾಗದ್ವೇಷಗಳ ತ್ಯಾಗ ಪೂರ್ವಕ ಅನುಷ್ಠಿಸುತ್ತಿರಬೇಕು ಎಂದೂ ನಿರೂಪಿಸಿದನು. ಹಾಗೆಯೇ ಬ್ರಹ್ಮಜ್ಞಾನವು ಉಭಯವಿಧಕರ್ಮಕ್ಕಿಂತ ಅತಿ ಉತ್ತಮವು ಮತ್ತೂ ನಿಷ್ಕಾಮಕರ್ಮಗಳಲ್ಲೂ ಶ್ರವಣಮನನಗಳೆಂಬ ಪರೋಕ್ಷ ಜ್ಞಾನಸಾಧನಗಳು ಬಹುಶಾಂತವಾದ ಸಮೀಚೀನವಾದ ಬ್ರಹ್ಮಜ್ಞಾನಿಗಳಿಂದಲೂ ಅನುಷ್ಠಿತವಾದ ಸಾಧನಗಳು ಎಂದು ಶ್ರೀಕೃಷ್ಣನೇ ಅನುಮೋದಿಸಿ ಹೇಳಿದನು. ಗುರುಗಳ ರಕ್ತವನ್ನು ನೆಲಕ್ಕೆ ಬಸಿಯುವ ಯುದ್ಧವನ್ನು ತಪ್ಪಿಸಿ- ಕೊಳ್ಳುವುದಕ್ಕೆ ಏನಾದರೂ ಉಪಾಯ ಸಿಕ್ಕಿದರೆ ಸಾಕೆಂದಿದ್ದ ಅರ್ಜುನನು ಬ್ರಹ್ಮಜ್ಞಾನಿಗಳ ಶಾಂತಸ್ಥಿತಿ, ಪರತತ್ವಜ್ಞಾನದಲ್ಲಿ ಆಸಕ್ತಿ ಇದನ್ನೆಲ್ಲಾ ಕೇಳಿದ ಮೇಲೆ ತಾನೂ, ಅವರಂತೆ ಎಲ್ಲಾದರೂ ಗುಹೆಯಲ್ಲಿ ಕೃಷ್ಣಧ್ಯಾನ ಮಾಡಿಕೊಂಡು ಇರಬಾರದೇ ಎಂಬ ಭಾವದಿಂದ ಜಗದ್ಗುರುವಾದ ಮುಕುಂದನನ್ನು ಕುರಿತು ಪ್ರಶ್ನೆ ಮಾಡುತ್ತಾನೆ.

ಅರ್ಥ:- ಎಲೈ ಜನಾರ್ದನನೇ! (ಜನಿರಹಿತನಾಗಿ ಭಕ್ತರ ಸಂಸಾರವನ್ನು ನಾಶಮಾಡುವ ಹರಿಯೇ!) ''ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ'' ಎಂದು ನೀನೇ ಹೇಳಿದಂತೆ ಬ್ರಹ್ಮಜ್ಞಾನವೆಂಬ ಮೋಕ್ಷೋಪಾಯವು ಕರ್ಮಕ್ಕಿಂತ ಅಧಿಕವಾದರೆ ಅಂಥಾ ಬ್ರಹ್ಮಾಪರೋಕ್ಷಕ್ಕೆ ಸಾಧನವಾದ ಉತ್ತಮವಾದ ಜ್ಞಾನಕಾರ್ಯಗಳಲ್ಲಿ (ಹರಿಕಥಾಶ್ರವಣಾದಿಗಳಲ್ಲಿ) ನನ್ನನ್ನು ಪ್ರೇರಿಸದೆ ಕಾಮ್ಯಕರ್ಮವಾದ ತುಚ್ಛವಾದ ಕರ್ಮಮಾರ್ಗದಲ್ಲಿ ಅದರಲ್ಲೂ ಅತಿಭಯಂಕರವಾದ ಯುದ್ಧಕರ್ಮದಲ್ಲಿ ಏಕೆ ಪ್ರೇರಿಸುವೆ? ''ಅರ್ಜುನಾ! ಕರ್ಮಮಾರ್ಗವನ್ನು ಬಿಡು. ಅದು ತುಚ್ಛವು. ಭಯಂಕರ ಯುದ್ಧಬೇಡ. ಜ್ಞಾನೋಪಾಯವಾದ ನಿಷ್ಕಾಮ ಶ್ರವಣಮಾಡು'' ಎಂದು ಹೇಳಬೇಕಾಗಿತ್ತು.

ಯುದ್ಧವು ನಿಷ್ಕಾಮ ಕರ್ಮವು, ಜ್ಞಾನೋಪಾಯವೇ ಆಗುವುದು ಎಂದು ಇಟ್ಟುಕೊಂಡರೂ ನಿಷ್ಕಾಮ ಕರ್ಮರೂಪವಾದ ಉಪಾಯಕ್ಕಿಂತ ನಿಷ್ಕಾಮಜ್ಞಾನರೂಪವಾದ ಧ್ಯಾನಾದಿ ಉಪಾಯಗಳು ನೀನೇ ಹೇಳಿರುವಂತೆ ಶ್ರೇಷ್ಠವಾದ್ದರಿಂದ, ನನಗೆ ಯತ್ಯಾಶ್ರಮವನ್ನು ಸ್ವೀಕರಿಸಿ ಧ್ಯಾನಾದಿ ಉತ್ತಮ ಸಾಧನೆಗಳಲ್ಲಿ ಪ್ರವರ್ತನಾಗು ಎಂದು ಬೋಧಿಸದೇ ಜ್ಞಾನೋಪಾಯಗಳಲ್ಲಿ ಅಧಮವಾದ ಘೋರಕರ್ಮವೆಂಬ ಯುದ್ಧದಲ್ಲಿ ಸನ್ನದ್ಧನಾಗು ಎಂದು ಏತಕ್ಕೆ ಹೇಳುತ್ತಿ?

ಪರಸ್ಪರ ವಿರುದ್ಧಾರ್ಥಗಳಿಂದ ಸಹಿತವಾದ ಸಂದೇಹ ಜನಕವಾದ ವಾಕ್ಯದಿಂದ ನನ್ನ ಬುದ್ಧಿಯನ್ನು ಮೋಹಮಾಡು- ವವನಂತೆ ತೋರುತ್ತೀಯೆ. ಆದುದರಿಂದ ಎಲೈ ಕೇಶವನೇ! ಯಾವ ಒಂದು ಆಚರಣೆಯಿಂದ ನಾನು ನಿಶ್ಚಯವಾಗಿ ಶ್ರೇಯಸ್ಸನ್ನು ಹೊಂದುವೆನೋ ಅಂಥಾ ಮುಖ್ಯ ಶ್ರೇಯಸ್ಸಾಧನವನ್ನು ನಿರ್ಣಯವಾಗಿ ನನಗೆ ಹೇಳು.

ವಿಶೇಷ: (1) ಕೃಷ್ಣನ ಮಾತುಗಳಲ್ಲಿ ಆಪಾತತಃ ವಿರೋಧವಿತ್ತು. ಅದೇನೆಂದರೆ. (ಅ) ರಾಗದ್ವೇಷಗಳನ್ನು ಬಿಡು, ವಿಷಯಧ್ಯಾನ ಮಾಡಬೇಡ. ಲಾಭಾಲಾಭ, ಜಯಾಪಜಯ ಎಲ್ಲವನ್ನೂ ಸಮವಾಗಿ ತಿಳಿ. ಜಿತೇಂದ್ರಿಯನಾಗಿ ಮನಃ ಪ್ರಸಾದವನ್ನು ಸಂಪಾದಿಸಿ ಬ್ರಹ್ಮಧ್ಯಾನವನ್ನು ಮಾಡು ಎಂದು ಹೇಳಿ , ಅದೇ ಬಾಯಿಯಿಂದ '' ಜಯಕ್ಕೆ ಕಾರಣವಾದ, ರಾಜ್ಯಪ್ರಾಪ್ತಿಗೆ ಉಪಾಯವಾದ ಯುದ್ಧಕರ್ಮವನ್ನು ಮಾಡು, ಕೀರ್ತಿಯನ್ನು ಕಾಪಾಡಿಕೋ'' ಎಂದು ಹೇಳಿಬಿಟ್ಟನು. ರಾಜ್ಯ ಕಾಮುಕರಷ್ಟೇ ಯುದ್ಧಮಾಡುವವರು, ರಾಗದ್ವೇಷವಿಲ್ಲದೇ ಗುರ್ವಾದಿಗಳ ತಲೆಯನ್ನು ಯಾರು ಕಡಿಯುವರು? ''ಕೃದ್ಧೋಹನ್ಯಾತ್

ಗುರೂನಪಿ'' ಕ್ರೋಧವಿಲ್ಲದೇ ಯುದ್ಧವನ್ನು ಹೇಗೆ ಮಾಡುವುದಕ್ಕಾಗುತ್ತೆ? ಆದ್ದರಿಂದ ಕರ್ಮಮಾರ್ಗವೇ ಕೆಟ್ಟದ್ದು. ಎಲ್ಲಾ ಕರ್ಮವೂ ಬಂಧಕವೇ ಸರಿ. ಅದರಲ್ಲೂ ಯುದ್ಧವು ಕೆಟ್ಟಕರ್ಮ. ಕಾಮ್ಯ ಕರ್ಮ ಮತ್ತೂ ಘೋರಕಾಮ್ಯಕರ್ಮ ಹೀಗೆಂದು ಆಲೋಚಿಸಿ ರಾಗದ್ವೇಷಗಳನ್ನು ಬಿಟ್ಟು ನಿಷ್ಕಾಮಕರ್ಮವೆಂದು ಉಪದೇಶಿಸಿದ ನೀನೇ ರಾಗದ್ವೇಷವನ್ನು ವೃದ್ಧಿಮಾಡುವ ಬಂಧಕವಾದ ಕಾಮ್ಯಕರ್ಮವಾದ ತುಚ್ಛಕರ್ಮಮಾರ್ಗಕ್ಕೆ ಸೇರಿದ ಘೋರಯುದ್ಧವನ್ನು ಮಾಡೆಂದು ಹೇಗೆ ಪ್ರೇರಿಸುವಿ ಎಂದು ಅರ್ಜುನನ ಪ್ರಶ್ನೆಯ ಆಶಯ. ಇದು ಒಂದು ಪ್ರಶ್ನೆ.

(2) ಇನ್ನೊಂದು ಪ್ರಶ್ನೆ ಏನೆಂದರೆ, ಕೃಷ್ಣನು ಹೀಗೆ ಹೇಳಿಬಿಡಬಹುದು. '' ಯುದ್ಧವು ಭಯಂಕರವಾದರೂ ಅದನ್ನು ಪರಮಾತ್ಮನಿಗೆ ಸಮರ್ಪಿಸಿ ಬಿಟ್ಟು ಫಲಾಪೇಕ್ಷೆಯನ್ನು ಬಿಟ್ಟುಬಿಟ್ಟರೆ ಅದು ನಿಷ್ಕಾಮ ಕರ್ಮವೇ ಆಗುತ್ತೆ'' ಎಂದು. (ಉದಾ:- ಮುಸುರೆ ತೊಳೆದರೂ ಅದು ಪತಿಯ ಸೇವೆಯೇ ಆಗುತ್ತೆ.) ಹೀಗೆ ಕೃಷ್ಣನು ಹೇಳಿದರೂ ಯುದ್ಧಮಾಡುವುದಕ್ಕೆ ಕಾರಣವಿಲ್ಲವೆಂದು ಅರ್ಜುನನ ಆಶಯ. ಹೇಗೆಂದರೆ:- ರಾಜಸೇವೆಯು ಹತ್ತಾರು ಬಗೆ ಇದೆ. ರಾಜನಿಗೆ ಬರವಣಿಗೆ ಸಹಾಯ ಮಾಡುವುದು, ಉಡಿಗೆ ಹೊಲೆಯುವುದು, ಅರಮನೆ ಗುಡಿಸುವುದು, ಹುಜೂರುಸೆಕ್ರೆಟರಿ ಕೆಲಸ ಮಾಡುವುದು. ಇವುಗಳ ಪೈಕಿ ಹುಜೂರ್ ಸೆಕ್ರೆಟರಿ ಕೆಲಸವು ಶಾಂತವು. ಉತ್ತಮ ಸೇವೆಯು. ಅದನ್ನು ಮಾಡುವ ಯೋಗ್ಯತೆಯುಳ್ಳವನಿಗೆ ಗುಡಿಸುವ ಕೆಲಸವನ್ನು ಕೊಟ್ಟರೆ ಸರಿಯಾಗುವುದೇ? ಹೀಗೆ ಪರಮಾತ್ಮನಿಗೆ ಪ್ರಿಯವಾದ ನಿಷ್ಕಾಮಕರ್ಮಗಳು ಅನೇಕವಿಧವಾಗಿವೆ. (ಅ) ಜ್ಞಾನರೂಪವಾದುವು ಕೆಲವು. ಉದಾ:- ವೇದಾರ್ಥಗಳನ್ನೊಳಗೊಂಡ ಪುಸ್ತಕ ಬರೆಯುವುದು, ಧ್ಯಾನ ಮಾಡುವುದು, ಪ್ರವಚನ ಮಾಡುವುದು, ಉಪನ್ಯಾಸ ಮಾಡುವುದು ಮುಂತಾದುವು. (ಆ) ಕರ್ಮರೂಪವಾದುವು ಕೆಲವು. ಉದಾ:- ವೇದಗಳನ್ನು ಪ್ರತಿಮಾಡಿ ದಾನಮಾಡುವುದು, ತೀರ್ಥಸಂಚಾರ, ಸುವರ್ಣದಾನ, ಚಾಂದ್ರಾಯಣಾದಿ ತಪಸ್ಸು, ಯತ್ಯಾಶ್ರಮ ಇವೆಲ್ಲಾ ನಿಷ್ಕಾಮವಾಗಿ ಮಾಡಲ್ಪಡಬಹುದಾದ ಶಾಂತಕರ್ಮಗಳು. ಇನ್ನು ಯುದ್ಧ, ಶತ್ರುಗಳಲ್ಲಿ ಭೇದ ಕಲ್ಪನೆ ಇವೆಲ್ಲಾ ನಿಷ್ಕಾಮವಾಗಿ ಮಾಡಲ್ಪಡಬಹುದಾದರೂ ಘೋರಕರ್ಮಗಳು. ಹೀಗಿರುವಲ್ಲಿ ಉತ್ತಮ ಅಧಿಕಾರಿಯಾದ, ನಿನ್ನ ಅನುಗ್ರಹಕ್ಕೆ ಪಾತ್ರನಾದ ನನಗೆ ಅಧಮ ನಿಷ್ಕಾಮಧರ್ಮಾನುಷ್ಠಾನ ರೂಪವಾದ ಘೋರ ಯುದ್ಧವನ್ನು ಮಾಡಬೇಕೆಂದು ಏಕೆ ಹೇಳುವಿ? ಪ್ರವಚನ ಮಾಡು, ಬ್ರಹ್ಮಸೂತ್ರವ್ಯಾಖ್ಯಾನ ಮಾಡು ಎಂದು ಹೇಳಬಾರದೇ? ಎಂದು ಪ್ರಶ್ನೆಯ ಅಭಿಪ್ರಾಯ. ಹುಜೂರು ಸೆಕ್ರೆಟರಿಯಾದರೂ ಅಪರಾಧ ಮಾಡಿದರೆ ಕಸಗುಡಿಸೆಂದು ರಾಜನು ಹೇಳಬಹುದು. ಆದರೆ ನಾನು ಅಂಥಾ ಅಪರಾಧವನನ್ನೇನು ಮಾಡಿದ್ದೇನೆ. ಏನೂ ಇಲ್ಲ. ಪ್ರತ್ಯುತ ನಿನ್ನ ಭಕ್ತನಾಗಿದ್ದೇನಲ್ಲಾ ಎಂದು ಭಾವ.

(3) ನನಗೆ ಯಾತರಿಂದ ನಿಶ್ಚಯವಾಗಿ ಶ್ರೇಯಸ್ಸಾಗುವುದೋ ಅದನ್ನು ನೀನು ''ನಿಶ್ಚಿತ್ಯ ವದ'' ನಿಶ್ಚಯಿಸಿ ಹೇಳು ಎಂದು ಅರ್ಜುನನು ಕೇಳಿದ್ದಾನೆ. ಪರಮಾತ್ಮನು ಹೊಸ ನಿಶ್ಚಯವನ್ನು ಏನೂ ಮಾಡಬೇಕಾಗಿಲ್ಲ. ಅರ್ಜುನನಿಗೂ ಅದು ಗೊತ್ತು. ಅವನ ಅರ್ಥವೇನೆಂದರೆ:- ನೀನು ನಿರ್ಣಯವನ್ನು ಹೇಳು. ನನ್ನ ಮನಸ್ಸಿನಲ್ಲೂ ನಿಂತು ''ಅದೇ ಸರಿ'' ಎಂದು ನಿಶ್ಚಯ ಮಾಡು. ನನಗೆ ನಿಶ್ಚಯ ಬುದ್ಧಿಯು ನೀನು ಒಳಗೆ ನಿಂತು ಬುದ್ಧಿಯಲ್ಲಿ ನಿಶ್ಚಯ ಮಾಡಿದರೇನೆ ಆಗುವುದು ಎಂದು ಭಾವ. ಇದಕ್ಕೆ ಪ್ರಮಾಣ

( ಹರಿಕಥಾಮೃತಸಾರ)

ವಿದ್ಯತಾನೆಂದೆನಿಸಿಕೊಂಬನಿ ।ರುದ್ಧದೇವನು, ಸರ್ವಜೀವರ । ಬುದ್ಧಿಯೊಳು ನೆಲೆಸಿದ್ದು ಕೃತಿಪತಿ ಬುದ್ಧಿಯೆನಿಸುವನು॥
ಸಿದ್ಧಯೆನಿಸುವ ಸಂಕರುಷಣ, ಪ್ರಸಿದ್ಧ ನಾಮಕ ವಾಸುದೇವನನವದ್ಯ ರೂಪ ಚತುಷ್ಟಯಗಳನರಿತವನೆ ಕೋವಿದನು॥6/3॥

ಅಥವಾ ಯಾವ ರೀತಿ ನೀನು ನಿರೂಪಿಸಿದರೆ ನಾನು ಸರಿಯಾಗಿ ಬುದ್ಧಿಯಲ್ಲಿ ನಿಶ್ಚಯಿಸಿಕೊಂಡು ಶ್ರೇಯಸ್ಸನ್ನು ಹೊಂದಲು ಅರ್ಹನಾಗುತ್ತೇನೆಯೋ ಆ ರೀತಿ ಪ್ರಶ್ನೆಗೆ ಉತ್ತರವನ್ನು ಹೇಳು ಎಂದು ಭಾವ. ( ಬುದ್ಧಿ ಎಂದರೆ ಜ್ಞಾನಸಾಧನ ಎಂದು ಒಂದರ್ಥ. ಬುದ್ಧಿ ಎಂದರೆ ಸಾಂಖ್ಯ ಎಂದರೆ ಪರೋಕ್ಷಜ್ಞಾನ ಎಂದು ಇನ್ನೊಂದರ್ಥ.)

(4) ''ವ್ಯಾಮಿಶ್ರೇಣೇವ ವಾಕ್ಯೇನ'' , ''ಮೋಹಯಸೀವ'' ಎಂಬಲ್ಲಿ ಎರಡು 'ಇವ' ಪದಗಳಿವೆ. ಸರ್ವಜ್ಞನಾದ ನೀನು ನಿಜವಾದ ವಿರುದ್ಧಾರ್ಥಗಳನ್ನು ಬೋಧಿಸುವ ವಾಕ್ಯಗಳನ್ನು ಹೇಳುವವನಲ್ಲ. ಆಪ್ತನಾದ ನೀನು ನಿಜವಾಗಿಯೂ ನನ್ನ ಬುದ್ಧಿಯನ್ನು ಮಂಕು ಮಾಡುವವನಲ್ಲ. ಶೋಕದಿಂದ ದುರ್ಬಲವಾದ ನನ್ನ ಮನಸ್ಸು ನಿನ್ನ ವಾಕ್ಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದು. ಆದರಿಂದ ಇನ್ನೂ ನಿರ್ಣೀತಜ್ಞಾನಹೀನವಾಗಿದೆ ಎಂದು ಭಾವ)

ಗೀತಾ:: ಶ್ರೀಭಗವಾನುವಾಚ--ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾ ಪ್ರೋಕ್ತಾ ಮಯಾಽನಘ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್॥ 3॥

ಕನ್ನಡಾರ್ಥ:-ಎಲೈ ಪಾಪರಹಿತನಾದ ಅರ್ಜುನನೇ! ಈ ಲೋಕದಲ್ಲಿ ಎಂದರೆ ಪ್ರಪಂಚದ ಅಧಿಕಾರವರ್ಗದಲ್ಲಿ, ಮೋಕ್ಷೋಪಾಯವನ್ನು ಅನುಷ್ಠಾನ ಮಾಡುವ ನಿಷ್ಕಾಮಭಕ್ತರ ಸ್ಥಿತಿಯು ಎರಡು ಪ್ರಕಾರವಾಗಿದೆ ಎಂದು ಪೂರ್ವದಲ್ಲಿಯೇ ನನ್ನಿಂದ ಬ್ರಹ್ಮಾದಿಗಳಿಗೆ ಹೇಳಲ್ಪಟ್ಟಿದೆ. (1) ಸಾಂಖ್ಯರು ಎಂದರೆ ಸಾಕ್ಷಾತ್ ಬ್ರಹ್ಮಜ್ಞಾನಸಾಧನವಾದ ಧ್ಯಾನಪ್ರವಚನಾದಿ ಜ್ಞಾನಕಾರ್ಯಗಳಲ್ಲಿ ವಿಶೇಷರತರಾದವರು (ನಾರದ ಸನಕಾದಿಗಳು). ಅವರು ಜ್ಞಾನಯೋಗದಿಂದ ಎಂದರೆ ಯತ್ಯಾಶ್ರಮ ಸ್ವೀಕಾರಮಾಡಿ ವಿಶೇಷವಾಗಿ ಧ್ಯಾನಪ್ರವಚನಾದಿ ರೂಪವಾದ ಉಪಾಸನೆಯಿಂದ ಸಹಿತವಾದ ಸ್ಥಿತಿಯಲ್ಲಿರುತ್ತಾರೆ. (2) ಜನಕ, ಪ್ರಿಯವ್ರತಾದಿ ಆಧಿಕಾರಿಕ ಚೇತನರು ಕರ್ಮಯೋಗಿಗಳು ಎಂದರೆ ನಿಷ್ಕಾಮವಾಗಿ ರಾಜ್ಯಪರಿಪಾಲನಾದಿ ಕರ್ಮರೂಪವಾದ ಮೋಕ್ಷಸಾಧನೋಪಾಯ ದಿಂದ ಸಹಿತವಾದ ಸ್ಥಿತಿಯಲ್ಲಿರುತ್ತಾರೆ.

ವಿಚಾರ:-- ಈ ವಾಕ್ಯದಲ್ಲಿ ಶ್ರೀಕೃಷ್ಣನು ಅರ್ಜುನನ ಪೂರ್ವಪಕ್ಷವನ್ನು ಅರ್ಧಾಂಗೀಕಾರದಿಂದ ಒಪ್ಪಿಕೊಂಡು, ಅವನ ಎರಡನೆಯ ಪ್ರಶ್ನೆಗೆ ಸರಿಯಾದ ಸಮಾಧಾನವನ್ನು ಹೇಳಿರುವನು. ''ನಿಷ್ಕಾಮಕರ್ಮಗಳು ಅನೇಕವಿಧವಾಗಿ ಇರುವುದು ನಿಜ. ಶ್ರವಣಮನನಧ್ಯಾನ ಪ್ರವಚನಾದಿಗಳು ಜ್ಞಾನರೂಪನಿಷ್ಕಾಮಧರ್ಮಗಳು. ಯುದ್ಧ ದಾನ, ವ್ರತಾನುಷ್ಠಾನ, ಮುಂತಾದುವು ಕರ್ಮರೂಪ ನಿಷ್ಕಾಮಕರ್ಮಗಳು. ನಾನು ನಿನಗೆ ಬ್ರಹ್ಮಸಾಕ್ಷಾತ್ಕಾರವನ್ನು ಹೊಂದುವುದಕ್ಕಾಗಿ ಜ್ಞಾನರೂಪ ಉಪಾಯಗಳನ್ನು ಹೇಳದೇ, ಯುದ್ಧಾದಿ ಕರ್ಮರೂಪ ಸಾಧನೆಗಳಲ್ಲೇ ಪ್ರೇರಣೆ ಮಾಡುತ್ತಿರುವುದೂ ನಿಜ. ಆದರೇನು? ಅದರಿಂದ ನೀನು ಉತ್ತಮನೆಂದೇ ತಿಳಿಯುವವನಾಗು. ಲೋಕದಲ್ಲಿ ಚೇತನರು ಎರಡುವಿಧ:-- (1) ಆಧಿಕಾರಿಕ ಚೇತನರು (2) ಅನಾಧಿಕಾರಿಕ ಚೇತನರೆಂದು. ಆಧಿಕಾರಿಕ ಚೇತನರು ಬ್ರಹ್ಮಜ್ಞಾನಿಗಳಾದರೂ ಕೂಡ ಮುಕ್ತಿಪರ್ಯಂತವೂ ನಾರಾಯಣನಿಗೆ ಪ್ರಿಯವಾದ ಅವನು ಕೊಟ್ಟ ಅಧಿಕಾರವನ್ನು ಹೊಂದಿ ಅದಕ್ಕೆ ತಕ್ಕ ಕರ್ಮಗಳನ್ನೇ ಮಾಡುತ್ತಿರಬೇಕು. ಬ್ರಹ್ಮ, ರುದ್ರ ಚಂದ್ರ ವರುಣಾದಿ ದಿಕ್ಪಾಲಕರು ಇನ್ನೂ ಸಕಲ ತತ್ವನಿಯಾಮಕ ಚೇತನರೂ (ದೇವತೆಗಳೂ) ಆಧಿಕಾರಿಕ ಚೇತನರು. ಅವರು ದೇವಲೋಕವನ್ನು ಬಿಟ್ಟು ಭೂಮಿಯಲ್ಲಿ ಅವತರಿಸಿದರೂ ಏನಾದರೂ ವಿಷ್ಣುಕಾರ್ಯಕ್ಕೆ ಅಂಗವಾಗಿ ಲೋಕಶಿಕ್ಷೆಗೆ ಉಪಯೋಗಿಯಾದಕಾರ್ಯವನ್ನು ಮಾಡಬೇಕೆಂದೇ ಬರುವರು. ಅಂಥವರು ಆಧಿಕಾರಿಕ ಕರ್ಮಯೋಗಿಗಳು. ಅನಾಧಿಕಾರಿಕ ಸಾಂಖ್ಯಯೋಗಿಗಳು ಸನಕಾದಿಗಳು. ಇವರು ಮಹಾಜ್ಞಾನಿಗಳು. ಆದರೆ ನಿಯತಕಾರ್ಯವಿಲ್ಲ. ಆದ್ದರಿಂದ ಇವರು ಲೋಕಕ್ಕೆ ಉಪದೇಶಮಾಡುತ್ತಾ ಕಾಲವನ್ನು ಕಳೆಯುವರು. ಇವರು ಜ್ಞಾನಯೋಗಿಗಳಾದರೂ ಇಂದ್ರಾದಿ ಆಧಿಕಾರಿಕ ಕರ್ಮಯೋಗಿಗಳು ಇವರಿಗಿಂತಲೂ ಉತ್ತಮರು. ಯಾತಕ್ಕೆಂದರೆ, ಯಾರಿಗೆ ಯಾವ ಕಾರ್ಯವಿಹಿತವಾಗಿದೆಯೋ ಅಂಥಾ ಕಾರ್ಯವನ್ನು ಅವನು ತನಗೆ ಬರುವ ಉತ್ತಮಕಾರ್ಯವನ್ನು ಬಿಟ್ಟು ಮಾಡುತ್ತಿದ್ದರೂ ಅವನು ಉತ್ತಮನೆಂದೇ ಎನ್ನಿಸಿಕೊಳ್ಳುವನು. ಉದಾ:: - ಆಳು ಮನೆಯನ್ನು ಕಾಯುತ್ತಾನೆ. ಅವನಿಗೆ 10ರೂ ಸಂಬಳ. ಒಂದುದಿನ ಅವನು ಮನೆಯಲ್ಲಿ ಇಲ್ಲದಿದ್ದಾಗ ತಂದೆಯು ಮಗನಿಗೆ ಆ ಕೆಲಸವನ್ನು ವಿಧಿಸುತ್ತಾನೆ. '' ನೀನು ಈ ಮನೆಯನ್ನು ನಾನು ಕಛೇರಿಯಿಂದ ಬರುವವರೆಗೂ ಕಾಯುತ್ತಿರು, ನಾಳೆ ಓದುವಿಯಂತೆ'' ಎಂದು ಹೇಳುತ್ತಾರೆ. ಅವನು ಓದುವುದನ್ನು ಬಿಟ್ಟು ಆಳಿನ ಕೆಲಸವನ್ನು ಮಾಡಿದರೂ ಅವನು ಆಳಿನಂತೆ ಅಧಮನಾಗುವುದಿಲ್ಲ. ಯಜಮಾನಪುತ್ರ ಎಂಬುವ ಅವನ ಉತ್ತಮತ್ವವು ಹೋಗುವುದಿಲ್ಲ. ಅವನು ಕೊಟ್ಟಕೆಲಸವನ್ನು ಮಾಡದೇ ಓದುತ್ತಾ ಕುಳಿತು ಮನೆಯನ್ನು ಕಳ್ಳರು ದೋಚಿಕೊಂಡು ಹೋದರೆ, ಅವನು ಆಳಿಗಿಂತಲೂ ಅಧಮನೆಂದು ಕರೆಸಲ್ಪಡುವನು. ಹೀಗೆ ಆಧಿಕಾರಿಕ ಚೇತನರಿಗೆ ಅಧಿಕಾರಕ್ಕಿರುವ ಕಾರ್ಯ ಮಾಡುವುದೇ ಹಿತವಾದದ್ದು. ತ್ರೈಲೋಕ್ಯ ರಕ್ಷಣ ಕಾರ್ಯದಲ್ಲಿ ಶ್ರೀಪರಮಾತ್ಮನಿಂದ ನಿಯುಕ್ತನಾದ ಇಂದ್ರಾವತಾರನಾದ ಅರ್ಜುನನು ಮಹಾಧಿಕಾರ ಹೊಂದಿದ ಚೇತನನು. ಭೂಭಾರಹರಣ ಮಾಡುವ ವಿಷ್ಣುವಿಗೆ ಸಹಾಯ ಮಾಡಲೋಸುಗ ಹುಟ್ಟಿದವನು ಎಂಬುದನ್ನು ಶ್ರೀಕೃಷ್ಣನು ತಿಳಿದವನಾದ್ದರಿಂದ ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಅರ್ಜುನನಿಗೆ ಹೇಳಿದ್ದಾನೆ. ''ಅರ್ಜುನಾ! ನೀನು ಆಧಿಕಾರಿಕ ಕರ್ಮಯೋಗಿ ಯಾಗಿದ್ದಿ. ನಿನಗೆ ಪರಮಾತ್ಮನ ಉತ್ತಮ ಪ್ರಸಾದ ಪ್ರಾಪ್ತಿಗೆ ಉಪಾಯವು ಯುದ್ಧಾದಿ ಆಧಿ ಕಾರಿಕ ಕರ್ಮವು. ಜ್ಞಾನರೂಪವಾದ ಧ್ಯಾನ ಪ್ರವಚನಾದಿಗಳು ನಿನಗೆ ಅರ್ಹವಲ್ಲ. ಅಸಂಪ್ರಜ್ಞಾತ ಸಮಾಧಿಯು ನಿನಗೆ ಉಚಿತವಲ್ಲ. ನೀನು ನಿನ್ನ ಯೋಗ್ಯತೆಗೆ ಅನುಗುಣವಾದ ಕರ್ಮಯೋಗವನ್ನೇ ಮಾಡು. ದುಷ್ಟನಿಗ್ರಹವನ್ನು ಮಾಡಿ ರಾಜ್ಯಪರಿಪಾಲನವನ್ನು ಮಾಡುವುದು ಆಧಿಕಾರಿಕ ಚೇತನನಾದ ನಿನಗೆ ಉಚಿತವೆಂದೇ ನಾನು ನಿನಗೆ ಘೋರವಾದ ಯುದ್ಧಕರ್ಮದಲ್ಲಿ ಪ್ರೇರಿಸಿರುತ್ತೇನೆ. ಅದರಲ್ಲೂ ರಾಜ್ಯಾದಿ ಕಾಮದಿಂದ ಮಾಡಿದ ಯುದ್ಧವು ಕ್ಷಯಿಷ್ಣುಫಲಕಾರಿಯಾದುದರಿಂದ 'ಬುದ್ಧೌ ಶರಣಮನ್ವಿಚ್ಛ' ಎಂದರೆ ಜ್ಞಾನೋಪಾಯವಾದ ನಿಷ್ಕಾಮತೆಯನ್ನು ಹೊಂದು ಎಂಬ ಭಾವದಿಂದ ಮಾತನಾಡಿದನು.

ಇದರಲ್ಲಿ ಸೂಕ್ಷ್ಮವೇನೆಂದರೆ, ಅಪರೋಕ್ಷಜ್ಞಾನಕ್ಕಿಂತ ಮುಂಚೆ ಅಧಿಕಾರಿಗಳಲ್ಲಿ ಕರ್ಮಯೋಗಿಗಳಿಗಿಂತ ಜ್ಞಾನಯೋಗಿಗಳು ಶ್ರೇಷ್ಠರು. ಪ್ರಚುರವಾದ ಕರ್ಮಯೋಗವುಳ್ಳವರು ಅಧಮರು. ಈ ವ್ಯವಸ್ಥೆ ಬ್ರಹ್ಮಾಪರೋಕ್ಷಜ್ಞಾನವನ್ನು ಹೊಂದುವುದಕ್ಕೆ ಮುಂಚೆ ಯುಕ್ತವೇ ಹೊರತು

ಬ್ರಹ್ಮಾಪರೋಕ್ಷಜ್ಞಾನವಾದಮೇಲೆ ಯುಕ್ತವಲ್ಲ. ಅಪರೋಕ್ಷಜ್ಞಾನವನ್ನು ಹೊಂದಿ ಧ್ಯಾನಾದಿಗಳನ್ನು ಮಾಡುತ್ತಾ ಪ್ರಜಾಪರಿಪಾಲನಾದಿ ವಿಶೇಷ ಕರ್ಮಗಳಲ್ಲಿ ಶ್ರೀ ಹರಿಯ ಆಜ್ಞಾನುಸಾರವಾಗಿ ಜನಕ, ಪ್ರಿಯವ್ರತ, ಇಂದ್ರಾದಿ ಮಹಾಜನರುಗಳು ಆಸಕ್ತರಾಗುತ್ತಾರೆ. ಪರಮಾತ್ಮನಿಂದ ನಿಯತವಾದ ಆಧಿಪತ್ಯವನ್ನು ಹೊಂದಿರುವುದರಿಂದಲೇ ಇವರುಗಳಿಗೆ ಆಧಿಕಾರಿಕಚೇತನರೆಂದು ಹೆಸರು. ಕರ್ಮಜ ದೇವತಾಸದೃಶರಾದ ಮಾಂಧಾತೃ ಅಂಬರೀಷಾದಿ ನೂರು ಜನ ಚಕ್ರವರ್ತಿಗಳೂ ಈ ಗುಂಪಿಗೇ ಸೇರಿದವರು. ಯಾರಿಗೆ ಈ ರೀತಿಯಾದ ವಿಶೇಷಾಧಿಪತ್ಯವನ್ನು ಶ್ರೀಹರಿಯು ಕೊಟ್ಟಿಲ್ಲವೋ, ಅವರು ಸಹಜವಾಗಿ ಧ್ಯಾನದಲ್ಲಿ ಆಸಕ್ತರಾಗಿರುತ್ತಾರೆ. ಆದ್ದರಿಂದ ಜ್ಞಾನೋತ್ತರಕಾಲದಲ್ಲಿ ಶ್ರೀಹರಿಯ ಆಜ್ಞೆಯಿಂದ ಪ್ರಾಪ್ತವಾದ ಈ ವೈಚಿತ್ರ್ಯವು ತಾರತಮ್ಯಸೂಚಕವಲ್ಲವೆಂದು ತಿಳಿಯಬೇಕು.

ಅರ್ಜುನನು ಇಂದ್ರಾಂಶನಲ್ಲದಿದ್ದರೆ ಶ್ರೀಕೃಷ್ಣನು ನಾರದಾದಿಗಳಿಗೆ ವಿಧಿಸಿರುವಂತೆ ಧ್ಯಾನಜ್ಞಾನೋಪದೇಶಾದಿ ಕಾರ್ಯಗಳಲ್ಲಿ ನಿಯೋಗಿಸುತ್ತಿದ್ದನು.

ಅಥವಾ ಈ ಶ್ಲೋಕಕ್ಕೆ ಹೀಗೂ ಅರ್ಥ ಮಾಡಬಹುದು. ಲೋಕದಲ್ಲಿ ಸಾಧನಪರಿಸ್ಥಿತಿಯು ಎರಡು ಪ್ರಕಾರವಾಗಿದೆ ಎಂದು ಹೇಳಲ್ಪಟ್ಟಿದೆ. (ವೇದದಲ್ಲಿ ಅನಾದಿಯಿಂದ ಹೇಳಲ್ಪಟ್ಟಿದೆ) ಧ್ಯಾನಪ್ರವಚನಾದಿ ಸಾಂಖ್ಯವೇ ಮುಖ್ಯಧರ್ಮವಾಗಿವುಳ್ಳ ಬ್ರಾಹ್ಮಣರಿಗೆ ಅವರಿಗೆ ಅಸಾಧಾರಣವಾಗಿ ಅಧಿಕಾರ ಪ್ರಾಪ್ತವಾದ ಧ್ಯಾನ, ಪ್ರವಚನ, ಯತ್ಯಾಶ್ರಮ ಧರ್ಮಗಳೇ ಮುಖ್ಯಮೋಕ್ಷೋಪಾಯವು. ಬ್ರಾಹ್ಮಣ ಭಿನ್ನವರ್ಣತ್ರಯದವರಿಗೆ ಧ್ಯಾನ ಹೇಳಿದ್ದಾಯ್ತು. ಇನ್ನು ಜ್ಞಾನಕ್ಕೆ ಪ್ರತಿಬಂಧಕವಾದ ಮತ್ತೂ ಸಾಧನವಾಗದ ರಾಗದ್ವೇಷಪೂರ್ಣವಾದ ಸ್ವರೂಪತಃ ಕಾಮ್ಯವೇ ಆದ ( ಉದಾ:-ಗೊಬ್ಬರವೆಂದರೆ ಕೊಳೆತವಸ್ತು. ನಿರ್ಮಲಗೊಬ್ಬರ ಎಂದು ಎಲ್ಲಾದರೂ ಇರುವುದೇ)

ನಿಂದ್ಯವಾದ ತುಚ್ಛವಾದ ಘೋರ ಕರ್ಮಮಾರ್ಗದಲ್ಲಿ ನನ್ನನ್ನು ಏತಕ್ಕೆ ಪ್ರೇರಿಸುತ್ತೀ? ಕರ್ಮವನ್ನು ತ್ಯಾಗಮಾಡೆಂದು ಹೇಳಬಾರದೇ! ಎಂಬ ಅರ್ಜುನನ ಪ್ರಥಮ ಪ್ರಶ್ನೆಗೆ ಆರು ಶ್ಲೋಕಗಳಲ್ಲಿ ಶ್ರೀಕೃಷ್ಣನು ಸಮಾಧಾನ ಹೇಳಿದ್ದಾನೆ. ಹಾಗೆ ಹೇಳುವಾಗ ''ವಿಧ್ಯುಕ್ತ ಕರ್ಮವನ್ನು ಮಾಡಬಾರದು. ಕರ್ಮಮಾರ್ಗವೇ ತ್ಯಾಜ್ಯ'' ಎಂದು ಪೂರ್ವಪಕ್ಷಮಾಡುವ ಅರ್ಜುನನು ಎಷ್ಟು ಬಗೆಯಿಂದ ಕರ್ಮತ್ಯಾಗವು ಸಾಧುವು ಎಂದು ಶಂಕೆ ಯನ್ನು ಮಾಡಬಹುದೋ ಅಷ್ಟು ಬಗೆಗಳಿಗೂ ಸ್ವಾಮಿಯು ಉತ್ತರವನ್ನು ಕೊಟ್ಟಿರುತ್ತಾನೆ. ಅರ್ಜುನನ ಅಥವಾ ಇತರ ಸರ್ವ ಅಧಿಕಾರಿಗಳ ಶಂಕೆಗಳು ಕರ್ಮಮಾರ್ಗವೇ ತ್ಯಾಜ್ಯ ಎಂಬ ವಿಷಯದಲ್ಲಿ ಮುಖ್ಯವಾಗಿ ಮೂರು ಪ್ರಕಾರವಾಗಿರಬಹುದು. (1)ಕರ್ಮಾಕರಣದಿಂದಲೇ (ಎಂದರೆ ಎಲ್ಲಾ ಕರ್ಮೇಂದ್ರಿಯಗಳ ವ್ಯಾಪಾರವನ್ನು ನಿಲ್ಲಿಸುವುದರಿಂದಲೇ) ನೈಷ್ಕರ್ಮ್ಯವೆಂಬ ಹೆಸರಿನಿಂದ ಪ್ರಸಿದ್ಧವಾದ ಮುಕ್ತಿಯು ಪ್ರಾಪ್ತವಾಗುವುದು. ಕರ್ಮವನ್ನು ಮಾಡಬೇಕಾಗಿಲ್ಲ. ಕರ್ಮಾಕರಣವೇ ಮೋಕ್ಷೋಪಾಯವಾಗಿರುವಾಗ ಯುದ್ಧಕರ್ಮವನ್ನು ಮಾಡುವುದು ವಿರುದ್ಧವಾಗುವುದು. ಉದಾ:- ರಾಜದ್ರೋಹಿಯ ಮನೆಗೆ ಹೋಗದೇ ಇರುವುದರಿಂದ ರಾಜನಿಗೆ ಸಂತೋಷವಾಗುವಾಗ ಅವನ ಮನೆಗೆ ಹೋದರೆ ರಾಜನಿಗೆ ಕೋಪಬರುವುದಿಲ್ಲವೇ?

ಏನೂ ಮಾಡದೇ ಸುಮ್ಮನಾಗಿರುವುದರಿಂದಲೇ ಕೆಲವು ಫಲಗಳು ಪ್ರಾಪ್ತವಾಗುವುವು. ಏನಾದರೂ ವ್ಯಾಪಾರ ಮಾಡಿದರೆ ಆ ಫಲವೇ ಆಗುವುದಿಲ್ಲ. ದೃಷ್ಟಾಂತ:- ಮುಟ್ಟಿದರೆ ಮುನಿ ಎಂಬ ಸೊಪ್ಪು ಸೂರ್ಯರಶ್ಮಿಯಿಂದ ಅರಳಿ ಸುಂದರ ಗರಿಗಳಿಂದ ಶೋಭಿಸುತ್ತಿರುತ್ತೆ. ಅದನ್ನು ಇನ್ನಷ್ಟು ಚೆನ್ನಾಗಿ ಅರಳಿಸಬೇಕು, ಅದರೆಲೆಗಳನ್ನು ತೆಗೆದುಕೊಂಡು ಅದನ್ನು ಕೈಯಿಂದ ಹಿಗ್ಗಲಿಸಬೇಕೆಂದು ಮುಟ್ಟಿದ ಮಾತ್ರಕ್ಕೆ ಅದು ಮುಚ್ಚಿಹೋಗುವುದು. ಮುಟ್ಟದೇ ಇರೋಣದರಿಂದಲೇ ಅದರ ಬಿಚ್ಚಿದ ಗರಿಗಳ ದರ್ಶನ. ಹೀಗೆಯೇ ಕರ್ಮಮಾಡದೆ ಸುಮ್ಮನೇ ಇದ್ದರೇನೇ ಮುಕ್ತಿಯು ಬರುತ್ತೆ. ಕರ್ಮಮಾಡಿಬಿಟ್ಟರೆ ಬರುವ ಮುಕ್ತಿಯೂ ತಪ್ಪಿ ಹೋಗುತ್ತೆ. ಕರ್ಮಮಾಡದೇ ಇರುವುದರಿಂದ, ಹೊಂದಲ್ಪಡುವುದರಿಂದಲೇ ಮುಕ್ತಿಗೆ 'ನೈಷ್ಕರ್ಮ್ಯ' ಎಂದು ಹೆಸರು. ''ನಿರ್ಗತಂ ಕರ್ಮಣಃ ನಿಷ್ಕರ್ಮ, ತದೇವ ನೈಷ್ಕರ್ಮ್ಯಂ ಕರ್ಮಸಂಬಂಧಶೂನ್ಯಂ ಇತಿ ಯಾವತ್'' ಎಂದು ಪೂರ್ವಪಕ್ಷದ ಭಾವ.

(2) ಎರಡನೆಯ ವಿಕಲ್ಪ:- ಅಥವಾ ಕರ್ಮವು ಸಂಸಾರಬೀಜಭೂತವಾದದ್ದು. ಕರ್ಮಮಾಡುವುದನ್ನು ಬಿಟ್ಟುಬಿಟ್ಟರೆ ಬೀಜರಹಿತವಾದ ವೃಕ್ಷಾದಿಗಳು ಹುಟ್ಟದಿರುವಂತೆ ಕರ್ಮಾಕರಣದಿಂದ ಸಂಸಾರನಾಶವು ಪ್ರಾಪ್ತವಾಗಿ ಮುಕ್ತಿಯಾಗುವುದು. ಸಂಸಾರ ನಾಶವಷ್ಟೇ ಮುಕ್ತಿಯು. ಸಂಸಾರಕ್ಕೆ ಕಾರಣವು ಕರ್ಮವು. ಕಾರಣ ನಾಶದಿಂದ ಕಾರ್ಯನಾಶವಾಗುತ್ತೆ. ಆದ್ದರಿಂದ ಸಂಸಾರಕ್ಕೆ ಕಾರಣವಾದ ಕರ್ಮವನ್ನು ಮಾಡದೇ ಹೋದರೆ ಆ ಸಂಸಾರವು ಹಾಳಾಗುತ್ತೆ. ಆಗ ಮುಕ್ತಿ ಕರಗತವಾಗುತ್ತೆ. ಹೀಗೆ ಎರಡನೆಯ ಪೂರ್ವಪಕ್ಷ.

(3) ಅಥವಾ ''ಕರ್ಮಣಾ ಬಧ್ಯತೇ ಜಂತುರ್ವಿದ್ಯಯಾಚ -ವಿಮುಚ್ಯತೇ'' ಎಂದು ಸ್ಮೃತಿ ಇದೆ. ಕರ್ಮವು ಮೋಕ್ಷಕ್ಕೆ ವಿರೋಧಿಯು. ಪ್ರತಿಬಂಧಕವು. ಆರೋಗ್ಯವನ್ನು ಇಚ್ಛಿಸುವವನಿಗೆ ವಿಷವು ಹೇಗೆ ವಿರೋಧಿಯೋ ಹಾಗೆ ಮೋಕ್ಷವನ್ನು ಇಚ್ಛಿಸುವವನಿಗೆ ಕರ್ಮವು ವಿರೋಧಿಯಾದ್ದರಿಂದ ಅದು ತ್ಯಾಜ್ಯವು. ( ಮೊದಲನೆಯ ವಿಕಲ್ಪಕ್ಕೂ ಮೂರನೆಯ ವಿಕಲ್ಪಕ್ಕೂ ಇರುವ ವ್ಯತ್ಯಾಸವೇನೆಂದರೆ:- ಮೊದಲನೆಯ ವಿಕಲ್ಪದಲ್ಲಿ ಕರ್ಮತ್ಯಾಗವು ಮೋಕ್ಷಕ್ಕೆ ಉಪಾಯವು ಎಂದು ಹೇಳಲ್ಪಟ್ಟಿತು. ಇಲ್ಲಿ ಕರ್ಮವನ್ನು ಮಾಡೋಣವು ಮೋಕ್ಷಕ್ಕೆ ವಿರೋಧಿಯು ಎಂದು ಹೇಳಲ್ಪಟ್ಟಿದೆ.) ಇದು ಮೂರನೆಯ ಪೂರ್ವಪಕ್ಷ.

ಹೀಗೆ ಕರ್ಮಬಿಡೋಣದರಿಂದಲೇ, ಎರಡು ರೀತಿಯಿಂದ (1. ಮುಕ್ತಿಸ್ವರೂಪ ಪರಾಮರ್ಶದಿಂದ, 2. ಕರ್ಮಬೀಜತ್ವವಿಮರ್ಶೆಯಿಂದ) ಮುಕ್ತಿ ಸಿಕ್ಕುತ್ತೆ. ಕರ್ಮಮಾಡುವುದರಿಂದ ಮುಕ್ತಿಗೆ ಪ್ರತಿಬಂಧಕವೇ ಆಗಿ ಬಂಧವೇ ಆಗುತ್ತೆ. ಆದ್ದರಿಂದ ಕರ್ಮಾನುಷ್ಠಾನವು ಯುಕ್ತವಲ್ಲ ಎಂದು ಮೂರುವಿಧವಾದ ಪಕ್ಷಗಳಿಗೂ ಶ್ರೀಕೃಷ್ಣನು ಕ್ರಮವಾಗಿ ಸಮಾಧಾನ ಹೇಳುತ್ತಾನೆ. ಮೊದಲನೆಯ ಪೂರ್ವಪಕ್ಷಕ್ಕೆ ಮೊದಲು ಸಮಾಧಾನ. ಮೊದಲನೆಯ ಪೂರ್ವಪಕ್ಷವೇನೆಂದರೆ, ಮೋಕ್ಷದ ಸ್ವರೂಪವನ್ನು ವಿಮರ್ಶೆಮಾಡಿಬಿಟ್ಟರೆ ಕರ್ಮವನ್ನು ಮಾಡಬೇಕಾದ್ದಿಲ್ಲ. ಎಂದು. (ಮುಕ್ತಿಗೆ 'ನೈಷ್ಕರ್ಮ್ಯ' ಎಂದು ಹೆಸರು. ಇದಕ್ಕೆ ಅರ್ಥ ಕರ್ಮಮಾಡದೇ ಇರೋಣದರಿಂದ ಹೊಂದಲ್ಪಡತಕ್ಕದ್ದು.) ಇದಕ್ಕೆ ಸಮಾಧಾನ ಒಂದೇ ಪಂಕ್ತಿಯಿಂದ ಶ್ರೀಕೃಷ್ಣನು ಹೇಳುತ್ತಾನೆ.

ಶ್ಲೋಕ :- ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।

ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ 4 ॥

ಕನ್ನಡಾರ್ಥ:- ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ। (4 ಪೂರ್ವ)

ಅರ್ಥ:- ಅರ್ಜುನಾ! ಕರ್ಮಾಕರಣದಿಂದ ಪುರುಷನು ಮೋಕ್ಷವನ್ನು ಹೊಂದುವುದಿಲ್ಲ.

(ಏತಕ್ಕೆ ಹೊಂದುವುದಿಲ್ಲವೆಂಬುದಕ್ಕೆ ಯುಕ್ತಿ- ಪುರುಷನಾದ್ದರಿಂದ ಎಂಬುದು- ಇಲ್ಲಿ ಪುರುಷ ಶಬ್ದವು ಹೇತುಗರ್ಭವು)

ವಿಶೇಷ:-- ಕರ್ಮತ್ಯಾಗದಿಂದ ಮೋಕ್ಷವು ಹೊಂದಲ್ಪಡುತ್ತೆ ಎಂಬುದು '' ನೀನು ಸತ್ತರೆ ಮಾವಿನಹಣ್ಣನ್ನು ಕೊಡುತ್ತೇನೆ' ಎಂದಂತೆ ಅಸಂಭಾವಿತ. ಸತ್ತಮೇಲೆ ಮಾವಿನಹಣ್ಣನ್ನು ಸ್ವೀಕರಿಸಲಾಗುವುದಿಲ್ಲ. ಕೊಡುವುದಕ್ಕೂ ಸಾಧ್ಯವಿಲ್ಲ. ಸಾಯುವ ಹಾಗಿಲ್ಲ. ಮಾವಿನ ಹಣ್ಣು ಬರುವ ಹಾಗಿಲ್ಲ. ಹೀಗೆ ಆಗುತ್ತೆ. ಕರ್ಮಾಕರಣದಿಂದ ಜೀವನು ಮುಕ್ತಿಯನ್ನು ಹೊಂದಬೇಕೆಂದು ನಿಯಮವಿದ್ದರೆ ಒಬ್ಬರಿಗೂ ಮುಕ್ತಿಯೇ ಇಲ್ಲವೆಂದಾಗುವುದು. ಏಕೆಂದರೆ ಜೀವನು ಯಾವುದಾದರೂ ಕರ್ಮವನ್ನು ಬಿಡುವ ಹಾಗಿಲ್ಲ, ಯಾತಕ್ಕೆಂದರೆ, ಜೀವನು ಪುರುಷನು ಎಂದರೆ (ಪುರಾಣಿ=ಶರೀರಾಣಿ + ಸರತಿ=ಪ್ರಾಪ್ನೋತೀತಿ ಪುರುಸಃ; ಪುರುಸ ಏವ ಪುರುಷಃ) ಸ್ಥೂಲವಾಗಲೀ ಸೂಕ್ಷ್ಮವಾಗಲೀ ಕರ್ಮೋಪಯೋಗಿಯಾದ ದೇಹವುಳ್ಳವನಾಗಿಯೇ ಶರೀರದಿಂದ ಶರೀರಕ್ಕೆ ಪ್ರಯಾಣ ಮಾಡುತ್ತಲೇ ಇರುವವನು. ಅವನಿಗೆ ಕರ್ಮಬಿಡುವುದಕ್ಕೆ ಅನುಕೂಲವಾದ ದೇಹವೇ ಬರುವುದಿಲ್ಲ. ಆದ್ದರಿಂದ ಅಂಥವನು ಕರ್ಮಾಕರಣವನ್ನು ಮಾಡಲಾರನು. ಮುಕ್ತಿಯೂ ಆಗುವ ಹಾಗಿಲ್ಲ. ಉದಾ:- ಕಾಲುಗಳನ್ನು ಉಪಯೋಗಿಸದೇ ನಡೆದುಕೊಂಡು ಬಾ. ಅಥವಾ ತಲೆಯನ್ನು ಮನೆಯಲ್ಲಿ ಇಟ್ಟು ಬಾ ದಿವಾನನಾಗುತ್ತಿ , ಒಂದೇ ಕ್ಷಣದಲ್ಲಿ ನಿನ್ನ ಛಾಯೆಯನ್ನೂ ದಾಟಿ ಹಿಂದಕ್ಕೆ ಹಾಕಿಬಿಡು ರಾಜನಾಗುವಿ, ಎಂದರೆ ಹೇಗೆ ದಿವಾನಗಿರಿಯೂ, ದೊರೆತನವೂ ಬರುವ ಹಾಗಿಲ್ಲವೋ, ಹಾಗೆಯೇ ಪುರುಷನಾದ ಜೀವನಿಗೆ ಕರ್ಮತ್ಯಾಗ ಮಾಡಿಬಿಡು ಮುಕ್ತಿ ಸಿಕ್ಕುತ್ತೆಂಬ ಮಾತು. ಕರ್ಮಾಕರಣವು ಅಸಾಧ್ಯವು. ಹಾಗಾದರೆ ನೈಷ್ಕರ್ಮ್ಯವೆಂದರೆ, ನಿಷ್ಕಾಮ ಕರ್ಮ ಲಭ್ಯವಾದ್ದರಿಂದ ನೈಷ್ಕರ್ಮ್ಯವೆಂದು ಹೆಸರು.

ಎರಡನೆಯ ಪೂರ್ವಪಕ್ಷಕ್ಕೂ ಈ ಪಂಕ್ತಿಯೇ ಉತ್ತರ. ಎರಡನೆಯ ವಿಕಲ್ಪವೇನೆಂದರೆ, ಸಂಸಾರವೃಕ್ಷಕ್ಕೆ ಬೀಜ ಕರ್ಮ. ಆ ಬೀಜವನ್ನು ಸುಟ್ಟುಬಿಟ್ಟರೆ ಸಂಸಾರ ನಾಶ ಎಂದರೆ ಅದೇ ಮುಕ್ತಿ. ಆದ್ದರಿಂದ ಕರ್ಮ ಬೇಡ ಎಂದರೆ ಸಮಾಧಾನ:- ಮತವೇ ಸರಿ. ಪ್ರಕೃತಿಜನ್ಯವಾದ ಗುಣಗಳಿಂದ ಪ್ರೇರಿತನಾಗಿ ಈ ಜೀವನು ಅವಶನಾಗಿ ನಾನಕರ್ಮಗಳನ್ನು ಮಾಡುತ್ತಲೇ ಇರುವನು. ದೇಹಧಾರಿಯಾದ ಜೀವನಿಂದ ಸರ್ವಕರ್ಮಪರಿತ್ಯಾಗವು ಶಕ್ಯವೂ ಅಲ್ಲ. ಮತ್ತೂ ಕರ್ಮಾಕರಣದಿಂದ ಶರೀರಯಾತ್ರೆಯೇ ದುರ್ಘಟವಾಗುವುದು. ಆದ್ದರಿಂದ ನೀನು ನಿಯತ ಕರ್ಮಗಳನ್ನು ಮಾಡೆಂದು ಭಾವ. 'ಕರ್ಮಾಕರಣದಿಂದ ಪೂರ್ವಕರ್ಮಗಳೂ ತಮಗೆ ತಾವೇ ಮುಗಿಯುತ್ತವೆ' ಎನ್ನು ವುದು 'ಸಮುದ್ರ ಒಣಗಿಹೋಗಲಿ ಆಮೇಲೆ ಬೀಜಬಿತ್ತಿ ಒಳ್ಳೇ ಹುಲುಸಾಗಿ ಬೆಳೆಯುವ ಪೈರನ್ನು ನೋಡಿ ಸಂತೋಷ ಪಡೋಣ ಸ್ವಲ್ಪತಾಳೆಂದು' ಗೃಹಸ್ಥನು ಮಗುವಿಗೆ ಹೇಳಿದಂತೆ ಆಗುತ್ತೆ. (ಆದ್ದರಿಂದಲೇ ''ಪ್ರಾಪ್ನೋತಿ'' ಎಂದು ಹೇಳದೇ ''ಅಶ್ನುತೇ'' ಎಂದು ಶ್ರೀಕೃಷ್ಣನು ಹೇಳಿದ್ದಾನೆ. ಮೋಕ್ಷಸುಖಭೋಗವೆಂಬ ಕರ್ಮವನ್ನು ಮಾಡುವುದಿಲ್ಲ ವೆಂದರ್ಥ. ಇಲ್ಲಿ ಕರ್ಮಮಾಡದೇ ಹೋದರೆ ಮುಂದೆ ಮುಕ್ತಿ ಸುಖಭೋಗಮಾಡುವುದೆಂಬ ಕರ್ಮವನ್ನೂ ಆ ನರನು ಮುಂದೆ ಮಾಡುವುದಿಲ್ಲ.)

ಅರ್ಜುನಾ! ಕರ್ಮಾಕರಣದಿಂದ ಮುಕ್ತಿಯಾಗುವುದಿಲ್ಲವೆಂಬಲ್ಲಿ ಒಂದು ಕೈಮುತ್ಯ ಯುಕ್ತಿಯನ್ನು ಹೇಳುವೆನು ಕೇಳು:-

ಭಗವದ್ಗೀತಾ: ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ 4॥ (ಉತ್ತರಾರ್ಧ)

ಸರ್ವಕಾಮುಗಳನ್ನೂ ತ್ಯಾಗಮಾಡಿ ಭಿಕ್ಷಾಪಾತ್ರೆಯನ್ನು ಹಿಡಿದು ವನದಿಂದ ವನಕ್ಕೆ ತಿರುಗುತ್ತಾ ಗುಹೆಯಲ್ಲಿ ವಾಸ ಮಾಡುವ ಸಂನ್ಯಾಸಾಶ್ರಮವನ್ನು

ಸ್ವೀಕರಿಸಿದ ನಿಷ್ಕಾಮಕರ್ಮಿಯೂ ಅವನ ಆಶಾತ್ಯಾಗದಿಂದಲೇ ಬ್ರಹ್ಮಜ್ಞಾನ ಮುಕ್ತಿ ಮುಂತಾದ ಸಿದ್ಧಿಯನ್ನು ಹೊಂದಲಾರನು. ಅಚ್ಯುತ ಭಾವವೂ (ಅಚ್ಯುತನಲ್ಲಿ ಭಕ್ತಿಯೂ) ಇರಬೇಕು. ಅಚ್ಯುತಭಾವವಿದ್ದರೂ ಮನಃ ಪ್ರಸಾದಾದಿಗಳ ಸಿದ್ಧಿಗಾಗಿ ಬಹುಕಾಲ ಯತ್ನಮಾಡಿ ಕಾಯಬೇಕು. ಹೀಗಿರುವಲ್ಲಿ ಕರ್ಮಾಕರಣದಿಂದ ಹೇಗೆ ಮುಕ್ತಿಯಾಗುವುದು? ಇದರಲ್ಲಿ ಪ್ರಮಾಣ (ಭೀಮಸೇನನು ಯುಧಿಷ್ಠಿರನನ್ನು ಕುರಿತು ಅನುಶಾಸನ ಪರ್ವದಲ್ಲಿ ಹೇಳುತ್ತಾನೆ) '' ಯದಿ ಸನ್ಯಾಸತಃ ಸಿದ್ಧಿಂ ರಾಜನ್ ಕಶ್ಚಿದವಾಪ್ನುಯಾತ್ । ಪರ್ವತಾಶ್ಚ ದ್ರುಮಾಶ್ಚೈವ ಕ್ಷಿಪ್ರಂ ಸಿದ್ಧಿಮವಾಪ್ನುಯುಃ ॥ ಏತೇ ಹಿ ನಿತ್ಯಸಂನ್ಯಾಸಾಃ ದೃಶ್ಯಂತೇ ನಿರುಪದ್ರವಾಃ। ಅಪರಿಗ್ರಹವಂತಶ್ಚ ಸತತಂ ಬ್ರಹ್ಮಚಾರಿಣಃ ॥

ತಸ್ಮಾತ್ಕರ್ಮೈವ ಕರ್ತವ್ಯಂ ನಾಸ್ತಿಸಿದ್ಧಿರಕರ್ಮಣಃ । ಅವೇಕ್ಷಸ್ವ ಯಥಾ ಸ್ವೈಃ ಸ್ವೈಃ ಕರ್ಮಭಿರ್ವ್ಯಾಪೃತಂ ಜಗತ್ ॥ ತಸ್ಮಾತ್ಕರ್ಮೈವ ಕರ್ತವ್ಯಂ ನಾಸ್ತಿ ಸಿದ್ಧಿರಕರ್ಮಣಃ ॥'' ಎಂದು.

ಕರ್ಮೇಂದ್ರಿಯಗಳನ್ನು ನಿಗ್ರಹಿಸಿ ಅಚ್ಯುತಭಾವವಿಲ್ಲದೇ ಆಶಾತ್ಯಾಗಮಾತ್ರದಿಂದ ಸಿದ್ಧಿಯಾಗುವುದಾದರೆ ಆಶಾ ಅಭಾವರೂಪ ಮಹಾಗುಣವೂ ವೃಕ್ಷಗಳಿಗೂ ಪರ್ವತಗಳಿಗೂ ಇರುವುದರಿಂದ ಅಂಥಾ ಸನ್ಯಾಸ ಪ್ರಭಾವದಿಂದ ಮನೋವೇದನಾ-ರಹಿತವಾದಂಥಾ ಅವುಗಳಿಗೂ ಮುಕ್ತಿಯಾಗಬೇಕಾದೀತು.

ಇಲ್ಲಿ ಸಣ್ಣಪ್ರಶ್ನೆಯು ಬರುತ್ತೆ:- ಕೃಷ್ಣಾ! ಸನ್ಯಾಸಿಗಳು ಯಾವ ಕರ್ಮಮಾಡಲಿ ಸ್ವಲ್ಪವೂ ಫಲವನ್ನು ಕೋರುವುದಿಲ್ಲ. ಫಲಾಪೇಕ್ಷೆಯಿಲ್ಲದೇ ಮಾಡಿದ ಆ ಕರ್ಮವು ಗೃಹಸ್ಥರ walking ನಂತೆ ನಿಷ್ಫಲ. ಅವರು ಅದರಿಂದ ಯಾವ ಫಲವನ್ನೂ ಕೋರುವುದಿಲ್ಲ. ಅವರು ಕರ್ಮ ಮಾಡಿದರೂ ಆ ಫಲವೆಲ್ಲಾ ಗೊಟ್ಟಕ್ಕೆ ಹಾಕಿದಂತೆ ಆಗುವುದರಿಂದ ಅವರು ಅದನ್ನು ಮಾಡದೇ ಇದ್ದಂತಾಯ್ತು. ಅವರಿಗಾದರೋ ಮುಕ್ತಿಯಾಗುತ್ತೆ. ಆಗ ಅವರಿಗೆ ಕರ್ಮಾಕರಣದಿಂದಲೇ ಮುಕ್ತಿಯಾದಂತಾಯಿತು. ಕರ್ಮಮಾಡಿ ಫಲವನ್ನು ಹಾಳುಮಾಡಿಕೊಂಡು ಕರ್ಮವನ್ನು ಮಾಡದಿದ್ದರೆ ಹೇಗೋ ಹಾಗೆ ಸ್ಥಿತಿಗೆ ಬಂದ ಸಂನ್ಯಾಸಿಗಳಿಗೆ ಮುಕ್ತಿ ಆದಮೇಲೆ ಕರ್ಮವನ್ನು ಸ್ವಲ್ಪವೂ ಮಾಡದಿದ್ದ ಫಕತ್ ಕರ್ಮತ್ಯಾಗಿಗಳಿಗೂ ಮುಕ್ತಿಯಾಗಲಿ. ಬಂದ ದುಡ್ಡನ್ನೆಲ್ಲಾ ಖರ್ಚುಮಾಡಿ ಹಾಳು ಮಾಡಿಕೊಂಡವನೂ ಪಾಪರು! ಹುಟ್ಟಿದಾಗಲಾಗಾಯ್ತು ಒಂದು ಕಾಸೂ ಇಲ್ಲದವನೂ ಪಾಪರೇ! ಮೊದಲನೆಯ ತರಹದ ಪಾಪರುಗಳನ್ನು ಅನಾಥಾಲಯಕ್ಕೆ ಸೇರಿಸಿದಮೇಲೆ ಎರಡನೇ ತರಹದ ಪಾಪರುಗಳನ್ನು ಅನಾಥಾಲಯಕ್ಕೆ ಸೇರಿಸಬಾರದೇನು? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

ಭಗವದ್ಗೀತಾ: ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ॥ 4॥ (ಉತ್ತರಾರ್ಧ)

ಅರ್ಜುನಾ! ಸಂಪಾದಿಸಿದ ಹಣವನ್ನೆಲ್ಲಾ ದುಂದುಗಾರನು ಅನ್ಯಾಯವಾಗಿ ಖರ್ಚುಮಾಡುವಂತೆ, ಪುಣ್ಯವನ್ನು ಮಾಡಿ ಏನೂ ಫಲಾಪೇಕ್ಷೆಯಿಲ್ಲದೇ, ಅನ್ಯರಿಗೆ ಉಪಕಾರವಾಗಲಿ, ನನಗೇನೂ ಬೇಡ ( ಮಂದಿ ಬದುಕಲಿ, ದೇಶ ಬದುಕಲಿ, ಪ್ರಪಂಚ ಬದುಕಲಿ - ಗಾಂಧಿತತ್ವ) ಎಂದು ಆತ್ಮತ್ಯಾಗ ಪೂರ್ವಕ ನಿಷ್ಕಾಮ ಕರ್ಮವನ್ನು ಮಾಡುವ ಸಂನ್ಯಾಧರ್ಮವುಳ್ಳವನೂ ಕೂಡ ಆ ಕೇವಲ ಆತ್ಮಕಾಮತ್ಯಾಗಮಾತ್ರದಿಂದ ಶುಭಗುಣಸಾಂದ್ರನೂ, ತನ್ನ ಉದ್ದೇಶ ಮಾಡಿ ಭಜಿಸಿದವರಿಗೇ ದರ್ಶನಕೊಡುವವನೂ ಆದ ''ಸಿದ್ಧಿ''ನಾಮಕ ಪರಮಾತ್ಮನನ್ನು ಹೊಂದುವುದಿಲ್ಲ. ಮೋಕ್ಷವನ್ನೂ ಹೊಂದುವುದಿಲ್ಲ. ಅಚ್ಯುತಭಾವದಿಂದ ಕರ್ಮಮಾಡಿದ- ರೇನೇ (ಈಶ್ವರಪ್ರೀತಿಗಾಗಿ ಕರ್ಮ ಮಾಡಿದರೇನೇ) ಆ ಸಂನ್ಯಾಸಿಗೆ ಸಿದ್ಧಿದೊರಕುವುದು. ಅನ್ಯಥಾ ಅವನು, ಗಳಿಸಿದ ಹಣವನ್ನು ಹಾಳು ಮಾಡಿದ ದುಂದುಗಾರನೇ ಸರಿ.

ಪದ್ಯ:- ಏನಮಾಡಿದಡೇನು ಕರ್ಮವ । ನೀನೊಲಿಯದಿನ್ನಿಲ್ಲವಿದಕನು । ಮಾನವುಂಟೇ ಭ್ರಮರಕೀಟ ನ್ಯಾಯದಿಂದಲಿ ॥ (ಭ್ರಮರವನ್ನು ಕೀಟವು ಧ್ಯಾನಿಸುವಂತೆ) ನೀನೊಲಿಯೆ ತೃಣಪರ್ವತವು ಪುಸಿ ।ಯೇನು ನೀಪತಿಕರಿಸಿ ಬಳಿಕಿನ್ನೇನು ಚಿಂತಿಸಲೇಕೆ ರಕ್ಷಿಸು ನಮ್ಮನನವರತ॥40॥

ವಿಶೇಷ: ಸಂನ್ಯಾಸಿಗಳಿಗೆ ಮೋಕ್ಷಫಲವನ್ನು ದೇವರು ಕೊಡುವುದು ನಿಜ. ಅದಕ್ಕೆ ಕಾರಣವಿದೆ. ಅವರು ದುಂದುಗಾರರಂತೆ ಪಾಪರಾದವರಲ್ಲ. 15ಲಕ್ಷರೂ ಸಂಪಾದನೆ ಮಾಡಿ ಅರ್ಧವೆಲ್ಲಾ ಆಸ್ಪತ್ರೆ ಕಟ್ಟಿಸಲು ರಾಜನ ಕೈಗೆ ಕೊಟ್ಟು ತಾನು ನಿಸ್ಪೃಹನಾಗಿ ಭಿಕ್ಷಾ ಮಾಡಿದವನಿದ್ದರೆ ರಾಜನು ಅವನನ್ನು ಕರೆಸಿ ಟೈಟಲ್ (ಪ್ರಶಸ್ತಿ) ಕೊಡುತ್ತಾನೆ. ಹುಟ್ಟಿದಾಗಿನಿಂದಲೂ ನಿರ್ಗತಿಕನಾಗಿ ಭಿಕ್ಷಾ ಮಾಡಿದರೆ ರಾಜನು ಆ ಭಿಕ್ಷುಕನನ್ನು ಕುರಿತು ಮುಂದೆ ಹೋಗು ಕೆಲಸ ಮಾಡಿಕೊಂಡು ಜೀವಿಸು ಎಂದು ಹೇಳುವನು. ಅದರಂತೆ ಸಂನ್ಯಾಸಿಯು ಅಚ್ಯುತಪ್ರೀತನಾಗಲಿ ಎಂದು ನಿವೃತ್ತ ಕರ್ಮವನ್ನು ಅನುಷ್ಠಾನ ಮಾಡಿ ತನಗೆ ಅರ್ಪಿಸುವುದರಿಂದ ಹರಿಯು ಅವರಿಗೆ ಯಾವ ಫಲವನ್ನು ಕೊಟ್ಟರೂ ಸಾಲದೆಂದು ತನ್ನನ್ನೇ ಕೊಡುವನು. ಹೀಗಿರುವಲ್ಲಿ ಸ್ವಲ್ಪವೂ ಕರ್ಮವನ್ನು ಮಾಡದ

ಜನ್ಮದರಿದ್ರರಂಥಾ ಮೂಢರಿಗೆ ಹರಿಯು ಮುಕ್ತಿಯನ್ನು ಹೇಗೆ ಕೊಡುವನು? ಇಲ್ಲವೇ ಇಲ್ಲ. ಆದ್ದರಿಂದ ಕರ್ಮಾಕರಣದಿಂದ ಮುಕ್ತಿಯಾಗಲಾರದು.

ಶ್ಲೋಕ : ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್।

ಕಾರ್ಯತೇ ಹ್ಯವಶಃ ಕರ್ಮಸರ್ವಃಪ್ರಕೃತಿಜೈರ್ಗುಣೈಃ ।।5।।

ಕನ್ನಡಾರ್ಥ:- ಅವತಾರಿಕೆ:- ಕರ್ಮಪರಿತ್ಯಾಗವು ಶಕ್ಯವಲ್ಲವೆಂದು ಶ್ರೀಕೃಷ್ಣನು ಹಿಂದಿನಶ್ಲೋಕದಲ್ಲಿ ಸೂಚಿಸಿದ್ದನು. ಈಗ ಅದನ್ನೇ ಸ್ಪಷ್ಟವಾಗಿ ಉಪಪಾದಿಸುತ್ತಾನೆ.

''ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ । ಕಾರ್ಯತೇ ಹ್ಯವಶಃ ಕರ್ಮಸರ್ವಃಪ್ರಕೃತಿಜೈರ್ಗುಣೈಃ ।।''

ಪಾರ್ಥನೇ! ಜೀವನು ಯಾವುವೊಂದು ಅವಸ್ಥೆಯಲ್ಲೂ ಯಾವ ಕರ್ಮವನ್ನೂ ಮಾಡದೇ ಸುಮ್ಮನೆ ಕೂಡಲಾರನು. ಪ್ರತಿಯೊಬ್ಬ ಪುರುಷನೂ ಅವಶನಾಗಿ ಪ್ರಕೃತಿಜನ್ಯಗುಣಗಳಿಂದ ಪ್ರೇರಿತನಾಗಿ ಯಾವುದಾದರೂ ಕರ್ಮವನ್ನು ಮಾಡುತ್ತಲೇ ಇರುವನು.

ವಿಶೇಷ:- 'ಕ್ಷಣಮಪಿ ನ ಜಾತು ತಿಷ್ಠತಿ' ಎಂಬ ಯಾವನೊಬ್ಬ ಚೇತನನೂ ಕರ್ಮಶೂನ್ಯನಾಗಿ ಯಾವ ಒಂದು ಕ್ಷಣದಲ್ಲೂ ಇರಲಾರನು. ಏತಕ್ಕೆಂದರೆ. ಕೂಡೋಣವೇ ಒಂದು ಕ್ರಿಯೆ. ಸರ್ವಕ್ರಿಯಾಶೂನ್ಯನಾಗಿ ಚೇತನನು ಇರಲಾರನು ಎಂದು ಯುಕ್ತಿಯನ್ನು ತೋರಿಸಿದ್ದಾನೆ.ಪರಮಾತ್ಮ ಮೊದಲುಗೊಂಡು ತೃಣಾಂತ ಸರ್ವಚೇತನರೂ ಜ್ಞಾನ, ಇಚ್ಛಾ ಕ್ರಿಯಾವಂತರು. ಕ್ರಿಯಾಶೂನ್ಯನಾದ ಚೇತನನೇ ಇಲ್ಲ. ಎಲ್ಲರೂ ಪ್ರಕೃತಿಜ ಗುಣಗಳಿಂದ ಎಂದರೆ ಅವರವರ ಸ್ವಭಾವದ ಜೊತೆಯಲ್ಲಿ ಹುಟ್ಟಿದ ಗುಣಗಳಿಂದ ಯಾವುದಾದರೂ ಕೂಡುವುದೋ, ಏಳುವುದೋ ಏನಾದರೂ ಕ್ರಿಯಾವುಳ್ಳವರಾಗಿರುವರು. ಇದರ ಮೇಲೆ ಪ್ರಕೃತಿ ನಿರ್ಮಿತ ದೇಹವುಳ್ಳವರಾಗಿ ಅದಕ್ಕೆ ಪ್ರೇರಕ- ತತ್ವಾಭಿಮಾನಿದೇವತೆಗಳಿಗೆ ವಶರಾದ ಬ್ರಹ್ಮಾದಿ ಜೀವರಾಶಿಯು ಕರ್ಮವನ್ನು ಮಾಡದೇ ಹೇಗಿರುವುದು? ಎಂದು ಕೈಮುತ್ಯಯುಕ್ತಿಯನ್ನು ''ಪ್ರಕೃತಿಜೈಃ ಗುಣೈಃ'' = ಪ್ರಕೃತಿನಿರ್ಮಿತ, ಈಶ್ವರಪ್ರೇರಿತ, ಸ್ಥೂಲದೇಹಗಳಿಂದ ಎಂಬ ಅರ್ಥಕೊಡುವ ಪದಗಳಿಂದ ಸೂಚಿಸಿದ್ದಾನೆ. ಈಶ್ವರನು ಸ್ವಭಾವಸಿದ್ಧವಾದ ಗುಣವನ್ನು ಬದಲಾಯಿಸುವುದಿಲ್ಲ. ಅಂಥಾದ್ದೇ ಅವನ ಸ್ವಭಾವ ಎಂಬದೂ 'ಪ್ರಕೃತಿಜೈಃ ಗುಣೈಃ ಕಾರ್ಯತೇ' ಎಂಬ ಪದಗಳಿಂದ ಸೂಚಿತವಾಗಿ ಇರುವುದು. ಹೇಗೆಂದರೆ, ಆ ವಾಕ್ಯದ ಅರ್ಥ:- ಈಶ್ವರನ ಸ್ವತಂತ್ರೇಚ್ಛೆಯಿಂದ ವ್ಯಕ್ತವಾದ ಜ್ಞಾನೇಚ್ಛಾಕ್ರಿಯಾದಿ ನಿತ್ಯಗುಣಗಳಿಂದ ಜೀವನೂ ಹಾಗೆಯೇ ಜ್ಞಾನೇಚ್ಛಾಕ್ರಿಯಾದಿಗಳನ್ನು ಯಾವಾಗಲೂ ಉಳ್ಳವನಾಗುವಂತೆಯೇ ಮತ್ತು ಅವನ ದೇಹವು ವಿಕಾರವುಳ್ಳದ್ದಾಗುವಂತೆಯೇ ಪ್ರೇರಿಸಲ್ಪಡುವವನು. ಆದ್ದರಿಂದ ಜೀವನಿಗೆ ಸ್ವಲ್ಪವಾದರೂ ಕರ್ಮವನ್ನು ಮಾಡದೇ ಇರುವುದಕ್ಕೆ ಆಗುವುದೇ ಇಲ್ಲ ಎಂದು ಭಾವ.

( ಜೀವ ಮತ್ತು ಪ್ರಾಕೃತಗುಣಗಳು ಅಸ್ವತಂತ್ರರೆಂದು ತೋರಿಸುವುದಕ್ಕಾಗಿ ಕರ್ಮಣಿ ಪ್ರಯೋಗ ಮಾಡಿದ್ದಾನೆ.)

ಶ್ಲೋಕ ।। ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾಸ್ಮರನ್ ।

ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ।। 6 ।।

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ।

ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ ।। 7/3 ।।

ಕನ್ನಡಾರ್ಥ: ಅವತಾರಿಕೆ।। ''ಹೇ ಕೃಷ್ಣಾ! ಜೀವ ಮತ್ತು ಅವನ ದೇಹಸ್ವಭಾವ ಅವರುಗಳ ಪ್ರೇರಕನಾದ ಪರಮಾತ್ಮನ ಇಚ್ಛೆಇವರುಗಳ ಪರ್ಯಾಲೋಚನೆಯಿಂದ ಕರ್ಮಾಕರಣವು ಯಾವ ಅಧಿಕಾರಿಯಿಂದಲೂ ಶಕ್ಯವಲ್ಲ ಎಂದು ಹೇಳಿದೆ. ಸ್ವಭಾವದಿಂದ ಆಗದೇ ಹೋದರೂ ಪ್ರಯತ್ನದಿಂದ ಕರ್ಮಾಕರಣವು ಏಕೆ ಆಗಬಾರದು? ಉದಾ:- ಸ್ವಭಾವದಿಂದ ಸ್ಫಟಿಕವು ಬಿಳುಪಾಗಿದ್ದರೂ ಜಪಾಕುಸುಮಸಂಬಂಧದಿಂದ ಕೆಂಪಾಗುತ್ತೆ. ಹಾಗೆಯೇ ಸ್ವಭಾವದಿಂದ ಕರ್ಮಬಿಡಲಾಗದಿದ್ದರೂ ಯತ್ನಮಾಡಿ ಮೂಗುಬಾಯಿ- ಕಿವಿ ಎಲ್ಲವನ್ನೂ ಅದುಮಿಕೊಂಡು ಜೀವನು ಏಕೆ ಕರ್ಮಮಾಡದೇ ಇರುವ ಸ್ಥಿತಿಗೆ ತನ್ನನ್ನು ತಂದು ಕೊಳ್ಳಬಾರದು?'' ಎಂದರೆ ಶ್ರೀಕೃಷ್ಣನು ಹೇಳುತ್ತಾನೆ. '' ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾಸ್ಮರನ್ । ಇಂದ್ರಿಯಾರ್ಥಾನ್ ವಿಮೂಢಾತ್ಮಾ ಮಿಥ್ಯಾಚಾರಃ ಸ ಉಚ್ಯತೇ ।।''

ಅರ್ಥ:- ಅರ್ಜುನನೇ ! ಕರ್ಮೇಂದ್ರಿಯಗಳನ್ನು (ಜ್ಞಾನೇಂದ್ರಿಯಗಳನ್ನೂ ) ನಿಗ್ರಹಮಾಡಿ ರೂಪಾದಿ ವಿಷಯಗಳನ್ನು ಮನಸ್ಸಿನಿಂದ ಸ್ಮರಿಸುವವನು ಭ್ರಾಂತನು, ಕಪಟಾಚಾರವುಳ್ಳವನು, ಮತ್ತು ಡಾಂಭಿಕನೆನ್ನಿಸುವನು.

ವಿಶೇಷ:- ಅರ್ಜುನಾ ! ಕರ್ಮೇಂದ್ರಿಯಗಳನ್ನೂ ಜ್ಞಾನೇಂದ್ರಿಯಗಳನ್ನೂ ಮನಸ್ಸಿನಿಂದ ನಿಗ್ರಹಿಸಿ ನಾನು ಕರ್ಮತ್ಯಾಗಮಾಡಿದವನು ಎಂದು ತಿಳಿದರೆ ಅವನು ಅತ್ಯಂತಮೂಢನೆಂದೆನಿಸುವನು. ಹೇಗೆಂದರೆ:- ಮನೋಯತ್ನವು ಕ್ರಿಯೆಯಲ್ಲವೇ? ಮನಸ್ಸಿನಿಂದ ಕರ್ಮ ಮಾಡುತ್ತಾ ನಾನು ಮಾಡಲಿಲ್ಲ ''ನಿಷ್ಕ್ರಿಯ'' ಎನ್ನುವವನು ಭ್ರಾಂತನಲ್ಲವೇ? ಮತ್ತೂ ಆ ಮನಸ್ಸಿನಿಂದ ಇಂದ್ರಿಯಾರ್ಥಗಳಿಂದ ಪೂರ್ವಾನುಭೂತರೂಪಾದಿ ವಿಷಯಗಳನ್ನು ಚಿಂತಿಸಿಬಿಟ್ಟರೆ ಕಪಟಾಚಾರಿಯು ಡಾಂಭಿಕನು, ಬಿಡಾಲವ್ರತಧಾರಿಯು ಮುಂತಾದ ಬಿರುದನ್ನು ಹೊಂದುವನು. ಯಾತಕ್ಕೆಂದರೆ :- ಇಂದ್ರಿಯಗಳನ್ನೆಲ್ಲಾ ಮನಸ್ಸಿನಿಂದ ತಡೆದರೆ ಆ ಮನಸ್ಸನ್ನು ತಡೆಯುವವರು ಯಾರು? ಯಾರೂ ಇಲ್ಲದ ಮೇಲೆ ಅದು, ಅರಸನಂಕೆಯಿಲ್ಲದ ಭೃತ್ಯನಂತೆ ಪೂರ್ವಾನುಭೂತ ವಿಷಯಗಳನ್ನು ಸ್ಮರಿಸುವುದಕ್ಕಾರಂಭಿಸುತ್ತೆ. ಮನಸ್ಸು ಇಂದ್ರಿಯಗಳ ಸಂಗಡ ಆಸಕ್ತವಾಗಿದ್ದಾಗ ಮನೋಗತ ಅನಂತಾನಂತಸಂಸ್ಕಾರಗಳು ಮೇಲೆದ್ದು ತೋರುತ್ತಿರುವುದಿಲ್ಲ. ಯಾವಾಗ ಇಂದ್ರಿಯಗಳನ್ನೂ ನಿಗ್ರಹಿಸಿ, ನಿರ್ವ್ಯಾಪಾರವಾಗಿರುವ ಮನಸ್ಸು ನಿಲ್ಲುವುದೋ ಆಗ ಆ ಮನಸ್ಸಿನಲ್ಲೇ ಇರುವ ಪೂರ್ವಾನುಭವ ಜನಿತ ಅನಂತಾನಂತ ಸಂಸ್ಕಾರಗಳು ಇವನ ಸ್ಮೃತಿಪಥಕ್ಕೆ ಬರುತ್ತಲೇ ಇರುವುವು. ಅವಷ್ಟು ಸಂಸ್ಕಾರವನ್ನು (ನಿಗ್ರಹಿಸು) ಅಳಿಸಿಬಿಡುವುದಕ್ಕೆ ನಿಷ್ಕಾಮಯೋಗಲಭ್ಯ ಹರಿಪ್ರಸಾದ ಹೊರತು ಬೇರೆ ಉಪಾಯವಿಲ್ಲ. ಹರಿಪ್ರಸಾದಹೀನನಾದ ಕರ್ಮತ್ಯಾಗಿಯು ಈ ಸಂಸ್ಕಾರಗಳನ್ನು ಅಳಿಸಲಾರನು. ಆದ್ದರಿಂದ ಅವುಗಳ ಸ್ಮರಣಕರ್ಮವನ್ನು ಇವನು ತಪ್ಪದೇ ಮಾಡಬೇಕಾಗುವುದು. (ದೃಷ್ಟಾಂತ :- ಹತ್ತು ಸವಾರರಿಂದ ಪರಿವೃತನಾದ ರಾಜನನ್ನು ನೋಡಬೇಕೆಂದು ನೂರಾರು ಅರ್ಜಿದಾರರು ಕಾದುಕೊಂಡಿದ್ದರು. ಸವಾರರು ಜೊತೆಯಲ್ಲಿ ಇದ್ದುದರಿಂದ ರಾಜಭೇಟಿಗೇ ಅವಕಾಶವಿರಲಿಲ್ಲ. ಒಂದುದಿನ ದೈವಾತ್ ರಾಜನೊಬ್ಬನೇ ಪಟ್ಟಣದ ಮಧ್ಯೆ ಬಂದನು. ಆಗ ಸಾವಿರಾರು ಜನರು ''ನನ್ನ ಅರ್ಜಿನೋಡು, ನನ್ನ ಅರ್ಜಿನೋಡು ಎಂದು ಮುತ್ತಿದರು. ಅವನಿಗೆ ಅವರಿಂದ ತಪ್ಪಿಸಿಕೊಳ್ಳಲು ಅಸಾಧ್ಯವಾಯ್ತು. ಹಾಗೆ ಕರ್ಮತ್ಯಾಗಿ ಕರ್ಮೇಂದ್ರಿಯ ನಿಗ್ರಹ ಮಾಡಿದರೆ ತನ್ನ ಮನೋಗತವಾಸನೆಗಳ ಕಾಟ ತಪ್ಪಿಸಿಕೊಳ್ಳಲಾರ. ಅನುಭವಿಸುವ ಇಂದ್ರಿಯಗಳನ್ನು ಮುಚ್ಚಿಬಿಟ್ಟಿರುವುದರಿಂದ ಇದರಿಂದ ಸ್ಮರಣೆ ಕ್ರಿಯೆಯು ಬಂದಿತು. ಜೊತೆಗೆ ಕಪಟವೂ ಬಂದಿತು. ಮನಸ್ಸಿನಲ್ಲಿ ರೂಪಾದಿ ಸ್ಮರಣೆ- ಮೇಲೆ ಕಣ್ಣುಮುಚ್ಚಿದ್ದಾನೆ. ಇದಷ್ಟೇ ಅರ್ಜುನನ ಸನ್ಯಾಸ.

ಪದ:- ಕರದಲಿ ಜಪಮಣಿ ಬಾಯಲಿ ಮಂತ್ರವು। ಅರಿವೆಯ ಮೊರೇಗೆ ಮುಸುಗ ಹಾಕಿ। ಪರಸತಿ ಪರಧನ ಮನದಲಿ ಸ್ಮರಿಸುತ
ಪರಮವೈರಾಗ್ಯಶಾಲಿಯೆಂದೆನಿಸುವುದು ॥ 2 ॥ ಉದರವೈರಾಗ್ಯವಿದು॥
ಬೂಟಕತನದಲಿ ಬಹಳಭಕುತಿಮಾಡಿ ।ದಿಟನೀತ ಸರಿಯಾರಿಲ್ಲೆನಿಸಿ । ನಾಟಕಸ್ತ್ರೀಯಂತೆ ಬಯಲ ಡಂಭವ ತೋರಿ । ಊಟದ ಮಾರ್ಗದ ಜ್ಞಾನವಿದಲ್ಲದೇ ॥ 3 ॥

ಇದನ್ನು ಜ್ಞಾಪಿಸುವುದಕ್ಕಾಗಿ ''ಮಿಥ್ಯಾಚಾರಃ ಸ ಉಚ್ಯತೇ'' ಎಂದು ಶ್ರೀಕೃಷ್ಣನು ಸೇರಿಸಿದ್ದಾನೆ.

ಕನಕದಾಸರು :- ಸಾವೇರಿ ಅಟತಾಳ
ಕಾಲಕರ್ಮದೊಳುಪೇಕ್ಷೆಯಮಾಡಿ ಹರಿಭಕುತಿ । ಶೀಲರಹಿತ ಬ್ರಾಹ್ಮಣನಾಗಲೊಲ್ಲೆ । ಕೀಲನರಿತು ಹರಿಭಕುತಿಮಾಳ್ಪ ಚಂ । ಡಾಲನ ಮನೆಯ ಬಾಗಿಲ ಕಾಯಿಸೆನ್ನನು ॥ 4 ॥ ದೇಶಾಧಿಪತಿ ನರಹರಿಯೆ ನಿನ್ನಯ ಪಾದ । ದಾಸರದಾಸನೆಂದೆನಿಸಬೇಕೆನ್ನ ॥ ಪ ॥

2) ಇದರಮೇಲೆ ಇನ್ನೊಂದು ವಿಷಯವನ್ನು ಈ ಶ್ಲೋಕದಲ್ಲಿ ಹೇಳಿದ ಹಾಗಾಯ್ತು. ಏನೆಂದರೆ:- ಮನಸ್ಸು ಸರ್ವೇಂದ್ರಿಯಗಳಿ-ಗಿಂತ ಶ್ರೇಷ್ಠವು. ಕರ್ಮವನ್ನು ಮಾಡದಂತೆ ಎಲ್ಲಾ ಇಂದ್ರಿಯಗಳನ್ನೂ ತಡೆಯುವ ಯತ್ನವನ್ನು ಮನಸ್ಸಿನ ಸಹಾಯದಿಂದಷ್ಟೆ ಮಾಡಬೇಕು. ಆ ಮನಸ್ಸು ಎಲ್ಲಾ ಹತ್ತು ಇಂದ್ರಿಯಗಳನ್ನೂ ನಿಗ್ರಹಮಾಡಬಲ್ಲದು. ಆದರೆ ಅದು ನಿಷ್ಕ್ರಿಯವಾಗಿ ಜಾಗರೂಕಾವಸ್ಥೆ-ಯಲ್ಲಿ ಇರಲು ಶಕ್ಯವೇ? ಆತನ ಜೀವನಾದಿಗಳ ಉದ್ದೇಶದಿಂದಲಾದರೂ ಭೋಗ್ಯವಸ್ತುಗಳನ್ನು ಚಿಂತಿಸಲೇಬೇಕು. ಇನ್ನು ಕರ್ಮಾಕರಣವೆಲ್ಲಿಂದ ಬರುತ್ತದೆ ? ಸ್ಮರಣೆಯು ಒಂದು ಕರ್ಮವಲ್ಲವೇ? ಹೀಗೆ ಸರ್ವೇಂದ್ರಿಯಗಳಲ್ಲಿ ಶ್ರೇಷ್ಠವಾದ ಮನೋ ಇಂದ್ರಿಯವೇ ಕರ್ಮತ್ಯಾಗಮಾಡಲಾರದ್ದಾದ್ದರಿಂದ ಕರ್ಮಾಕರಣವು ಅಶಕ್ಯವು.

3) ಅಥವಾ ಕರ್ಮಾಕರಣವೆಂದರೆ ಬಿಡುವುದಕ್ಕೆ ಶಕ್ಯವಾದ ಕರ್ಮವನ್ನು ಬಿಡುವುದೇ ಕರ್ಮಾಕರಣವು. ಪಾನ, ಭೋಜನ, ಆಸನ, ಗಮನ ಇತ್ಯಾದಿ ಕ್ರಿಯೆಗಳನ್ನು ಬಿಟ್ಟರೆ ಸಾವೇ ಸರಿ. ಅವುಗಳನ್ನು ಬಿಡಲಾಗುವುದಿಲ್ಲ. ಅವುಗಳನ್ನೆಲ್ಲಾ ಮಾಡಿಕೊಂಡು ಯಜ್ಞಾದಿ ಕರ್ಮತ್ಯಾಗ ಮಾಡುವಂಥಾ ''ಕರ್ಮಾಕರಣದಿಂದ'' ಮೋಕ್ಷವಾಗಲಿ ಎಂಬ ಶಂಕೆಗೂ ಈ ಶ್ಲೋಕದಿಂದಲೇ ಶ್ರೀಕೃಷ್ಣನು ಸಮಾಧಾನವನ್ನು ಹೇಳಿದ್ದಾನೆ. ''ಕರ್ಮೇಂದ್ರಿಯಾಣಿ ಸಂಯಮ್ಯ ಯ ಆಸ್ತೇ ಮನಸಾಸ್ಮರನ್ । ಇಂದ್ರಿಯಾರ್ಥಾನ್ ವಿಮೂಢಾತ್ಮಾ

ಮಿಥ್ಯಾಚಾರಃ ಸ ಉಚ್ಯತೇ ॥'' ಅರ್ಥ:- ಯಜ್ಞಾದಿ ಕರ್ಮಗಳನ್ನು ಪರಿತ್ಯಾಗಮಾಡಿ ಅವುಗಳನ್ನು ಮಾಡುವ ಕರ್ಮೇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸಿನಿಂದ ದೇಹಧಾರಣೋಪಯೋಗಿಯಾದ ಭೋಜನ, ಪಾನ, ಆಚ್ಛಾದನಾದಿ ಇಂದ್ರಿಯ ವಿಷಯಗಳನ್ನು ಚಿಂತಿಸುವವನು, ವಿಮೂಢಮನಸ್ಸುಳ್ಳವನು ಎಂದರೆ ವೇದತಾತ್ಪರ್ಯದಲ್ಲಿ ಶೂನ್ಯನಾದ ಭ್ರಾಂತನು ಮತ್ತು ಆತನು ನಿಷ್ಫಲ ಆಚಾರವುಳ್ಳವನೂ, ಕಪಟಿಯೂ ಎನ್ನಿಸುವನು. ಏಕೆಂದರೆ ಫಲವುಳ್ಳ ಯಜ್ಞಾದಿಕರ್ಮಗಳನ್ನು ಅವನೇ ಅವು ಅಪ್ರಯೋಜಕವೆಂದು ಭ್ರಮಿಸಿ ಬಿಟ್ಟುಬಿಟ್ಟಿದ್ದಾನೆ. ಫಲವಿಲ್ಲದ ಭೋಜನಾದಿವಿಷಯಗಳನ್ನು ಚಿಂತಿಸುತ್ತಿದ್ದಾನೆ. ಇದು ನಿಷ್ಫಲ ಆಚಾರವಲ್ಲವೇ? ದೇವರ ಕೂಲಿ ಮಾಡುವ ಕರ್ಮೇಂದ್ರಿಯಗಳನ್ನು ಬಂದು ಮಾಡಿದ. ವಿಷಯಭೋಗಮಾಡುವ ಇಂದ್ರಿಯಗಳನ್ನು ತಡೆಯದೇ ಮನಸ್ಸಿನಿಂದ 'ಅವುಗಳಿಗೆ ಹೇಗೆ ವಿಷಯಗಳು ಬರುವುದಪ್ಪಾ! ಕುಳಿತ ಜಾಗದಲ್ಲೇ ನಾನು ಏಳದಂತೆ ವಿಷಯಗಳು ಬರಬೇಕಲ್ಲಾ ಎಂದು ಚಿಂತಿಸುವುದರಿಂದ ಕಪಟವೂ ಬಂದಿತು. ಶ್ರೀಕೃಷ್ಣನು ''ಕರ್ಮೇಂದ್ರಿಯಾಣಿ ಸಂಯಮ್ಯ'' ಎಂದಿಷ್ಟೇ ಹೇಳಿದನು. ''ಜ್ಞಾನೇಂದ್ರಿಯಾಣಿ ಸಂಯಮ್ಯ'' ಎಂದು ಹೇಳಲಿಲ್ಲ.

4) ಮತ್ತು ಈ ಶ್ಲೋಕದಿಂದ, ಬಂಧಮೋಕ್ಷಗಳಿಗೆ ಕರ್ಮಮಾಡುವುದು ಬಿಡುವುದು ಕಾರಣವಲ್ಲ. ಪೂರ್ವೋಕ್ತ ಸನ್ಯಾಸಿಯಂತೆ ಕರ್ಮಮಾಡಿದರೂ ನಿಷ್ಫಲ. ಈ ಶ್ಲೋಕೋಕ್ತ ಕರ್ಮೇಂದ್ರಿಯ ನಿಗ್ರಹಮಾಡಿದವನು ಕರ್ಮಬಿಟ್ಟಂತೆ ಕರ್ಮತ್ಯಾಗಮಾಡಿದರೂ ನಿಷ್ಫಲ. ಬಂಧಮೋಕ್ಷಗಳಿಗೆ ಕಾರಣ ಮನಸ್ಸಿನ ವಿನಿಯೋಗ. ಆ ಮನಸ್ಸಿನಿಂದ ಸರ್ವೇಂದ್ರಿಯಗಳನ್ನು ನಿಗ್ರಹಿಸಿದರೂ ವಿಷಯಸ್ಮರಣೆ ಮಾಡುತ್ತಿದ್ದರೆ, ಅಚ್ಯುತಭಾವವರ್ಜಿತ ಸಂನ್ಯಾಸಿಯಂತೆ ಕಪಟಿಯೂ ಡಾಂಭಿಕನೂ ಆಗುವನೇ ಹೊರತು ಮೋಕ್ಷಸಿದ್ಧಿಯನ್ನು ಹೊಂದುವುದಿಲ್ಲ. ಮತ್ತು ಬಂಧವನ್ನೂ ಹೊಂದುವನು ಎಂದು ಶ್ರೀಕೃಷ್ಣನ ಭಾವ. ಈ ವಿಷಯದಲ್ಲಿ (ಮೋಕ್ಷಕ್ಕೆ ಮನಸ್ಸೇ ಮುಖ್ಯ ಸಹಾಯವೆಂಬ) ದಾಸರು ಹೇಳುವುದನ್ನು ಕೇಳಿ:-

ರಾಗ--ಮುಖಾರಿ ಝಂಪೆ ತಾಳ

ಯಾಕೆ ಈ ದೇಹವನು ದಂಡಿಸುವೆ ವ್ಯರ್ಥ॥ ಪ ॥

ಏಕಚಿತ್ತದಲಿ ಲಕ್ಷ್ಮೀಪತಿ ಎನ್ನದೇ ॥ ಅ ॥

ಸ್ನಾನವನು ಮಾಡಿ ನೀ ಧ್ಯಾನಿಸುವೆನೆಂದೆನುತ । ಮೌನದಲಿ ಕುಳಿತು ಬಕಪಕ್ಷಿಯಂತೆ । ಹೀನಬುದ್ಧಿಗಳ ಯೋಚಿಸಿ ಕುಳಿತು ಫಲವೇನು । ದಾನವಾಂತಕನ ಧ್ಯಾನಕೆ ಮೌನವುಂಟೇ ॥ 1 ॥

ಜಪವ ಮಾಡುವೆನೆನುತ ಕಪಟ ಬುದ್ಧಿಯಗುಣಿಸಿ । ಗುಪಿತದಲಿ ಕುಳಿತು ಫಲವೇನು ನಿನಗೆ ॥ ಅಪರಿಮಿತ ಮಹಿಮ ನಾರಾಯಣಯೆಂದೆನಲು । ಸಫಲವಲ್ಲದೆ ಬೇರೆ ಜಪವು ಉಂಟೇ ॥ 2 ॥

ಹಿಂದಜಾಮಿಳಗೆ ಮುಕುತಿಯ ನಾಮಮಾತ್ರದಲಿ । ಚಂದದಿಂ ಕರುಣಿಸಲಿಲ್ಲವೇನೋ । ಸಂದೇಹವನು ಬಿಟ್ಟು ನೀನೊಂದು ಕ್ಷಣ ಬಿಡದೇ । ತಂದೆ ಪುರಂದರವಿಠಲನೆನು ಕಂಡ್ಯ ಮನವೇ ॥ 3 ॥

<u>ಕನ್ನಡಾರ್ಥ</u>:- 7ನೇ ಶ್ಲೋಕದ ಅವತಾರಿಕೆ:- ಹಾಗಾದರೆ ಏನು ಮಾಡಿದರೆ, ಮನಸ್ಸನ್ನು ಹೇಗೆ ಉಪಯೋಗಿಸಿದರೆ ದೇಹಿಯು ಭ್ರಾಂತನಲ್ಲ , ಡಾಂಭಿಕನಲ್ಲ ಎಂದು ಕರೆಯಲ್ಪಡುವನು ಎಂದರೆ ಶ್ರೀಕೃಷ್ಣನು ಹೇಳುತ್ತಾನೆ:-

ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ।
ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಃ ಸ ವಿಶಿಷ್ಯತೇ ॥ 7/3 ॥

ಯಾವಾತನು ಇಂದ್ರಿಯಗಳನ್ನು ವಿಷಯಗಳಿಗೆ ಹೋಗದಂತೆ ಮನಸ್ಸಿನಿಂದ ನಿಗ್ರಹಿಸಿ ಕರ್ಮೇಂದ್ರಿಯದಿಂದ ನಿಷ್ಕಾಮ ಕರ್ಮವನ್ನು ಆರಂಭಿಸುವನೋ ಆತನು ಶ್ರೇಷ್ಠನು .

ವಿಶೇಷ:- ಈ ಯೋಗಿಯಲ್ಲಿ ಪೂರ್ವಶ್ಲೋಕೋಕ್ತಪುರುಷನ ದೋಷಗಳಿಲ್ಲ. ಮನಸ್ಸನ್ನು ಏನೂ ಮಾಡದಂತೆ ಸುಮ್ಮಗಿರಿಸಲಾಗು-ವುದಿಲ್ಲ ಎಂದು ತಿಳಿದವನಾದ್ದರಿಂದಲೂ, ಯಜ್ಞಕರ್ಮಗಳಚಿಂತೆಯನ್ನು ಬಿಟ್ಟು ಭೋಜನಾದಿಗಳ ಚಿಂತೆಯನ್ನು ಮಾಡುವುದು ಅಯೋಗ್ಯವೆಂದು ತಿಳಿದುಕೊಂಡಿದ್ದರಿಂದಲೂ, ಈತನು ಅಭ್ರಾಂತನು. ವಿಮೂಢಾತ್ಮನಲ್ಲ. ಮನಸ್ಸಿನಲ್ಲಿ ಹರಿಪ್ರಿಯಕರ್ಮಗಳನ್ನು ಚಿಂತಿಸಿ ಫಲಾಪೇಕ್ಷೆಯನ್ನು ಬಿಟ್ಟು ಕರ್ಮೇಂದ್ರಿಯಗಳಿಂದಲೂ, ಅದನ್ನೇ ಮಾಡಿದ್ದರಿಂದ ಅವರು ಋಜುಸ್ವಭಾವದವರಾದರು. ಕಪಟಿ ಗಳಾಗಲಿಲ್ಲ. ಒಳಗೆ ಸುಭದ್ರೆ ಹೊರಗೆ ಯೋಗಮುದ್ರೆ ಹೀಗಿದ್ದರಷ್ಟೆ ಕಾಪಟ್ಯ.. ಅಚ್ಯುತಭಾವದಿಂದ ''ಯೋಗ''ರೂಪವಾಗಿ ಎಂದರೆ ನಿಷ್ಕಾಮತೆಯಿಂದ ಮನಸ್ಸನ್ನು ದುರ್ವಿಷಯಗಳಿಗೆ ಹೋಗದಂತೆ ನಿಗ್ರಹಿಸಿ ಕರ್ಮಮಾಡಿ ಹರಿಯಲ್ಲಿ ಸಮರ್ಪಿಸಿದ್ದರಿಂದ ಈತನು ''ವಿಶಿಷ್ಯತೇ''=ನಿಜಮೋಕ್ಷಾಧಿ

ಕಾರಿಯಾದವನು.

ಶ್ರೀಭಗವದ್ಗೀತಾ: ನಿಯತಂ ಕುರು ಕರ್ಮ ತ್ವಂ ಕರ್ಮಜ್ಯಾಯೋಹ್ಯಕರ್ಮಣಃ ।
ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ ॥ 8/3 ॥

ಕನ್ನಡಾರ್ಥ:-8ನೇ ಶ್ಲೋಕದ ಅವತಾರಿಕೆ:- ಕರ್ಮಾಕರಣವೂ ಅಶಕ್ಯವೂ, ಅಯೋಗ್ಯವೂ, ಅನುಚಿತವೂ ಆದರೆ ನಾನೇನು ಮಾಡಬೇಕು? ಎಂದರೆ ಶ್ರೀಕೃಷ್ಣನು ತಾನಾಗಿ ನಿರೂಪಿಸಿದ ವಿಷಯಗಳ ಫಲಿತಾರ್ಥವನ್ನು ಹೇಳುತ್ತಾನೆ.

ಅರ್ಜುನಾ! ಕರ್ಮಾಕರಣಕ್ಕಿಂತ ನಿಯತಕರ್ಮ ಕರಣವು ಶ್ರೇಷ್ಠವಾದುದ್ದರಿಂದ ನೀನು ವಿಧ್ಯುಕ್ತ ನಿಯತಕರ್ಮವನ್ನು ಅನುಷ್ಠಾನ ಮಾಡು. ಕರ್ಮಾಕರಣದಿಂದ ನೀನು ದೇಹಧಾರಣೆಯನ್ನು ಮಾಡುವುದೇ ಅಶಕ್ಯವಾಗುವುದು.

ವಿಶೇಷ :- 1) ಕರ್ಮಾಕರಣವನ್ನು ಮೋಕ್ಷಹೇತುವೆಂದು ತಿಳಿದು ಅನುಷ್ಠಾನ ಮಾಡುವವನು ಶ್ವಾಸ, ಭೋಜನಾದಿ ಕ್ರಿಯೆಗಳನ್ನೂ ಪರಿತ್ಯಾಗಮಾಡಬೇಕಾಗಿ ಮರಣವನ್ನು ಹೊಂದುವನು. ಆದ್ದರಿಂದ ದೇಹಧಾರಣೋಪಯೋಗಿ ಕರ್ಮಗಳನ್ನು ಮಾಡುತ್ತಾ ಅತಿರಿಕ್ತ ಕರ್ಮಗಳನ್ನು ಮಾಡದಿರುವುದೇ ವಿವಕ್ಷಿತ ಕರ್ಮಾಕರಣವು ಎಂದು ಹೇಳುವುದಾದರೆ ಪಶುಗಳೂ ಭೋಜನ ನಿದ್ರೆ, ವಿಹಾರ ಮಾಡುತ್ತಾ ಯಜ್ಞಾದಿಗಳನ್ನು ಮಾಡದಿರುವುದರಿಂದ ಅವಕ್ಕೂ ಮೋಕ್ಷವಾಗಬೇಕು. (ಸುಳಾದಿ- ಝಂಪೆ ತಾಳ ॥ ಜ್ಞಾನ ಭಕುತಿ ವೈರಾಗ್ಯವಿಲ್ಲದ ಮಾನವ ಜನುಮವದೇತಕೆ ಸುಡುಸುಡು । ಆಹಾರ ಭಯನಿದ್ರೆ ಸ್ತ್ರೀಗೋಷ್ಠಿ ಎಂಬಿವು । ವಿಹಾರ ಪಶುಪಕ್ಷಿಮೃಗಕೆ ದಕ್ಕಲುಸರಿ । ದೀನವತ್ಸಲ ಪುರಂದರಲನ । ನೆನೆವ ಕ್ರಿಮಿಕೀಟಜನ್ಮವೇ ಸಾಕು ) ಆದ್ದರಿಂದ ಪಶ್ವಾದಿ ಸಾಧಾರಣವಾದ ಇಂಥಾ ದುಷ್ಟತತ್ವದಿಂದೇನು? ಪರಮಾತ್ಮನಿಂದ ವಿಹಿತವಾದ ಕರ್ಮಗಳನ್ನು ಮಾಡಿ ತದತಿರಿಕ್ತವಾದ ಕರ್ಮಗಳನ್ನು ಪರಿತ್ಯಾಗಮಾಡು- ವುದು ಶ್ರೇಯಸ್ಕರವು ಎಂದು ''ಕರ್ಮಜ್ಯಾಯೋ ಹ್ಯಕರ್ಮಣಃ'' ಎಂಬ ಪದಗಳಿಂದ ಶ್ರೀಕೃಷ್ಣನು ಬೋಧಿ ಸಿದನು.

2) ''ನಿಯತಕರ್ಮವು ಅಕರ್ಮಕ್ಕಿಂತ ಹೆಚ್ಚು ಒಳ್ಳೆಯದು'' ಎಂಬಲ್ಲಿ ಶ್ರೀಕೃಷ್ಣನು ವಿನೋದ ಮುದ್ರೆಯಿಂದ ಮಾತಾಡಿದ್ದಾನೆ. ಉದಾ:- ಕೂಗಿದ ಭಿಕ್ಷುಕನ ತಲೆ ಒಡೆಯುವುದಕ್ಕಿಂತ ಅಕ್ಕಿಕಾಳು ಹಾಕಿಕಳುಹಿಸುವುದು ಶ್ರೇಷ್ಠವೆಂದು ಹೇಳಿದಂತೆ. (ತಲೆ ಹೊಡೆಯುವುದು ಸ್ವಲ್ಪ ಒಳ್ಳೆಯದು. ಅದಕ್ಕಿಂತ ಒಳ್ಳೆಯದು ಅಕ್ಕಿಕಾಳುಹಾಕುವುದೆಂದು ಅರ್ಥವಲ್ಲ. )

ಅಕರ್ಮವು ಅನರ್ಥಕಾರಿ, ಸ್ವಲ್ಪವೂ ಒಳ್ಳೆಯದಲ್ಲ . ನಿಯತಕರ್ಮಾನುಷ್ಠಾನವು ಮೋಕ್ಷ ಪುರುಷಾರ್ಥಸಾಧನವು ಎಂದು ಭಾವ.

ಕನ್ನಡಾರ್ಥ: 8ನೇ ಶ್ಲೋಕದ ಅವತಾರಿಕೆ:- ಕರ್ಮಾಕರಣವು ಸಾಧುವೆಂಬಲ್ಲಿ ಹಿಂದೆ ಮಾಡಿದ್ದ ಮೂರು ಪೂರ್ವಪಕ್ಷಗಳ ಪೈಕಿ ಎರಡು ಪೂರ್ವಪಕ್ಷಗಳಿಗೆ ಶ್ರೀಕೃಷ್ಣನು ಸಮಾಧಾನ ಹೇಳಿದನು. ಏನೆಂತೆಂದರೆ:- ಮುಕ್ತಿಯು ನಿಷ್ಕಾಮಕರ್ಮಲಭ್ಯವೇ ಹೊರತು ಕರ್ಮಾಕರಣ ಪ್ರಾಪ್ಯವಲ್ಲ. ಕರ್ಮಬೀಜವು ಅನಂತಾನಂತವಾದ್ದರಿಂದ ಅವುಗಳನ್ನೆಲ್ಲಾ ಕರ್ಮಾಕರಣದಿಂದ ತೀರಿಸಿಕೊಳ್ಳಲು ಆಗುವುದೂ ಇಲ್ಲ. ಕರ್ಮಾಕರಣವು ಚೇತನನಿಂದ ಶಕ್ಯವಲ್ಲ. ಸತ್ಕರ್ಮವನ್ನು ಬಿಟ್ಟು ಭೋಜನಕರ್ಮಾರ್ಥವಾಗಿ ಯತ್ನಿಸುವವನು ((( ಇಲ್ಲಿ ಒಂದು ಹಾಳೆಯು ಇಲ್ಲ )

ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ॥ 9/3 ॥

ಕನ್ನಡಾರ್ಥ: 10ನೇ ಶ್ಲೋಕದ ಅವತಾರಿಕೆ:- ಸ್ವವರ್ಣಾಶ್ರಮೋಚಿತವಾದ ವಿಹಿತಕರ್ಮಾನುಷ್ಠಾನವು ಅವಶ್ಯಕವೆಂದು ಮುಂದಿನ ನಾಲ್ಕು ಶ್ಲೋಕಗಳಲ್ಲಿ ಶ್ರೀಕೃಷ್ಣನು ಶಾಸ್ತ್ರರೀತಿಯಿಂದ ಅರ್ಥವಾದವನ್ನು (1ಸ್ತುತಿ=ಮಾಡಿದರೆ ಆಗುವ ಉತ್ತಮ ಫಲ. 2. ನಿಂದಾ=ಬಿಟ್ಟರೆ ಆಗುವ ಅನರ್ಥ. 3. ಪರಕೃತಿ= ಹಿಂದೆ ನಡೆದ ಏಕಕರ್ತೃಕ ಇತಿಹಾಸ, 4. ಪುರಾಕಲ್ಪ= ಹಿಂದೆ ನಡೆದ ಬಹುಕರ್ತೃಕ ಇತಿಹಾಸವೆಂಬ ನಾಲ್ಕು ವಿಧವಾದ ಮಹಿಮಾವರ್ಣನೆಯನ್ನು) ಹೇಳಿ ಉಪದೇಶಮಾಡುತ್ತಾನೆ.

ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।
ಅನೇನ ಪ್ರಸವಿಷ್ಯಧ್ವಂ ಏಷ ವೋಽಸ್ತ್ವಿಷ್ಟಕಾಮಧುಕ್ ॥ 10/3 ॥

ಸೃಷ್ಟಿಕರ್ತನಾದ ನಾರಾಯಣನು ಯಜ್ಞಾದಿ ಸ್ವವರ್ಣಾಶ್ರಮೋಚಿತ ಕರ್ಮಗಳಿಂದ ಸಹಿತರಾದ ಪ್ರಜೆಗಳನ್ನು ಸೃಷ್ಟಿಸಿದ ನಂತರ ಅವರನ್ನು ಕುರಿತು ಈ ರೀತಿ ಮಾತಾಡಿದನು:- ''ಎಲೈ ಪ್ರಜೆಗಳಿರಾ! ಸ್ವವರ್ಣಾಶ್ರಮೋಚಿತ ಕರ್ಮವೆಂಬ ಯಜ್ಞದಿಂದ ನಿಮ್ಮ ಅಭೀಷ್ಟಗಳನ್ನು ಪಡೆಯಿರಿ. ನಿಮ್ಮಿಂದ ಆಚರಿಸಲ್ಪಡುವ ಯಜ್ಞಾದಿಕರ್ಮಗಳು ನಿಮಗೆ ಬೇಕಾದ ಭೋಗದ್ರವ್ಯಗಳನ್ನು ಕೊಡತಕ್ಕವುಗಳಾಗಲಿ।

ವಿಶೇಷ:- 1) ಸ್ವವರ್ಣಾಶ್ರಮೋಚಿತಕರ್ಮಾನುಷ್ಠಾನವು ಯಜ್ಞವು. ಯಜ್ಞವು ಅಧಿಕಾರಿಗೆ ಅಭೀಷ್ಟಫಲಪ್ರದವಾದುದು ಎಂಬ ಈ ಎರಡು ವಿವರಗಳು ಈ ವಾಕ್ಯದಿಂದ ಸಿದ್ಧವಾಗುತ್ತದೆ.

2) ಶಿಶುವನ್ನು ಸೃಷ್ಟಿಸುವ ಮೊದಲು ಮಾತೃವಿನಲ್ಲಿ ಸ್ತನ್ಯವನ್ನು ಹೇಗೆ ಸೃಷ್ಟಿಸುವನೋ ಹಾಗೆಯೇ ಸಾಧನಾರ್ಥವಾಗಿ ಜೀವರುಗಳನ್ನು ಸೃಷ್ಟಿಮಾಡುವಾಗ ಅವರ ಸಾಧನೆಗೆ ಬೇಕಾದ ಸಂಪತ್ತುಗಳ ಪ್ರಾಪ್ತ್ಯರ್ಥವಾಗಿ ಯಜ್ಞಗಳೆಂಬ ಉಪಾಯಗಳನ್ನು ವ್ಯಕ್ತಮಾಡಿಯೇ ಪರಮಾತ್ಮನು ಜೀವರುಗಳನ್ನು ಕರ್ಮಭೂಮಿಗೆ ತಂದಿರುವನು ಎಂಬುದನ್ನು 'ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾ' ಎಂಬ ವಾಕ್ಯವು ಸೂಚಿಸುವುದು.

3) ಸೃಷ್ಟಿಕರ್ತನಾದ ನಿಷ್ಪಕ್ಷಪಾತಿಯಾದ ಈಶ್ವರನಾದ ನಾರಾಯಣನ ಸಂಕಲ್ಪವೇ ಹೀಗಿದೆ ಎಂದು ಹೇಳಲ್ಪಟ್ಟಿದೆ. ಎಂದರೆ ಅವರವರಿಗೆ ತಾನು ನಿಯಮಿಸಿರುವ ವರ್ಣಾಶ್ರಮೋಚಿತ ಕರ್ಮಗಳು ಏನುಂಟೋ ಅದನ್ನು ಮಾಡೋಣವೇ ಅವರ ಯಜ್ಞವಾಗಲೀ ಅಂಥಾ ಅವರ ಯಜ್ಞದಿಂದ ಅವರು ಅಭೀಷ್ಟ ಫಲವನ್ನು ಹೊಂದಲಿ ಎಂದೇ ಅವನ ಸಂಕಲ್ಪ

<u>ಕನ್ನಡಾರ್ಥ:-</u>ಹನ್ನೊಂದನೇ ಶ್ಲೋಕದ ಅವತಾರಿಕೆ :- ವರ್ಣಾಶ್ರಮೋಚಿತ ಕರ್ಮಾನುಷ್ಠಾನರೂಪಯಜ್ಞಮಾಡಿದರೆ ಅಧಿಕಾರಿಗಳಿಗೆ ಅಭೀಷ್ಟವಾಗುವ ಪ್ರಕಾರವು ಹೇಗೆಂದರೆ ಶ್ರೀಕೃಷ್ಣನು ಹೇಳುತ್ತಾನೆ.

ಶ್ಲೋಕ॥ ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ॥ 11/3॥

ಪ್ರಜೆಗಳಿರಾ ! ನೀವು ಯಜ್ಞಾದಿ ಸ್ವಧರ್ಮದಿಂದ ದೇವತೆಗಳನ್ನು ಪೂಜಿಸಿರಿ. ಅವರು ನಿಮಗೆ ಇಷ್ಟಾರ್ಥಗಳನ್ನು ಕೊಟ್ಟು ರಕ್ಷಿಸಲಿ. ಈ ರೀತಿ ನೀವೂ ಮತ್ತು ಪರ್ಜನ್ಯಾದಿ ದೇವತೆಗಳೂ ಪರಸ್ಪರವಾಗಿ ಸತ್ಕೃತರಾಗಿ (ಭಾವಿತರಾಗಿ) ಅಂತ್ಯದಲ್ಲಿ ಮೋಕ್ಷರೂಪ ಪ್ರಯೋಜನವನ್ನು ಹೊಂದುವಿರಿ.

ವಿಶೇಷ:- 1) ಇದು ಮಾಧುರಜ್ಞಾನಿಯ ಚರಿತ್ರೆಯಂತಾಯಿತು. ಹೇಗೆಂದರೆ-ಮಧುರಾಪಟ್ಟಣದಲ್ಲಿ ಶ್ರೋತ್ರಿಯ ಬ್ರಾಹ್ಮಣನೊಬ್ಬನು ಪತ್ನೀಪುತ್ರ ಇವರಿಬ್ಬರಿಂದ ಯುಕ್ತನಾಗಿದ್ದ. ಆತನ ಬಳಿ ಒಬ್ಬ ವೈಶ್ಯನೂ, ಒಬ್ಬ ಶೂದ್ರನೂ ಧರ್ಮಶ್ರವಣಮಾಡಿಕೊಂಡು ಕೈಲಾದ ಸೇವೆ ಮಾಡಿಕೊಂಡಿದ್ದರು. ವೈಶ್ಯನು ತನ್ನ ಎರಡು ಎಕರೆ ಜಮೀನನ್ನು ಆ ಬ್ರಾಹ್ಮಣನಿಗೇ ದಾನಮಾಡಿ ಪ್ರತಿದಿನವೂ ಒಪ್ಪತ್ತು ನೈವೇದ್ಯ ಅಪ್ಪಣೆ ಯಾಗಬೇಕೆಂದು ಕೇಳಿಕೊಂಡು ರಾತ್ರಿ ಪ್ರಸಾದವನ್ನು ಭೋಜನ ಮಾಡುತ್ತಿದ್ದನು. ಶೂದ್ರನು ಕಾಡಿಗೆ ಹೋಗಿ ಸೊಪ್ಪು , ಸೌದೆ ಎಲೆ ತಂದು ಹಾಕಿ ಅವನೂ ರಾತ್ರಿ ಒಪ್ಪತ್ತು ಬ್ರಾಹ್ಮಣನು ಹಾಕಿದ ಪ್ರಸಾದವನ್ನು ಸ್ವೀಕರಿಸುತ್ತಿದ್ದನು. ಹೀಗಿರಲು ಬ್ರಾಹ್ಮಣನು ಆರುತಿಂಗಳು ಸಮಾಧಿಯೋಗಾನುಷ್ಠಾನವನ್ನು ಮಾಡಬೇಕೆಂದು ನಿಶ್ಚಯಿಸಿ ತನ್ನ ಊರಿಗೆ ಸಮೀಪದಲ್ಲಿರುವ ಗುಹೆಯನ್ನು ಕುರಿತು ಹೋಗುವ ಮೊದಲು, ಈ ವ್ಯವಸ್ಥೆಯನ್ನು ಮಾಡಿದನು. ಇರುವ ವೈಶ್ಯಶೂದ್ರರು ಹಿಂದಿನ ಮನೆಯಲ್ಲಿ ವಾಸಮಾಡಿಕೊಂಡು ಇರಬೇಕು. ಮುಂದಿನ ಮನೆಯಲ್ಲಿ ಹೆಂಡತಿ ಮತ್ತು ವಟುವಾದ ಮಗನಿರಬೇಕು. ಎರಡು ಎಕರೆ ಜಮೀನು ವೈಶ್ಯನ ಅಧಿಕಾರದಲ್ಲಿರಬೇಕು. ಆತನೇ ಅಂಗಡಿಯಿಂದ ದಿನದಿನಕ್ಕಾಗುವ ಸಾಮಾನು ತರಬೇಕು . ಪತ್ನೀ ವಟುಗಳು ಭೋಜನಮಾಡಿದಮೇಲೆ ಅವರಿಬ್ಬರಿಗೂ ಅನ್ನಹಾಕಿಬಿಡಬೇಕು. ಅವರಿಬ್ಬರೂ ಒಪ್ಪತ್ತು ಊಟಮಾಡುವವರಾದ್ದರಿಂದ ಮಧ್ಯಾಹ್ನವೇ ಅವರಿಗೆ ಅನ್ನ ಹಾಕಬೇಕು. ರಾತ್ರಿಗೆ ತಂಗಳನ್ನವನ್ನು ವಟುವಿಗೆ ಹಾಕಬಾರದಾದ್ದರಿಂದ ಬಿಸಿಯಾಗಿ ಮಾಡಿ ಅವನಿಗೆ ಹಾಕಬೇಕು. ಹೀಗೆ ಹೇಳಿ ಗುಹಾಪ್ರವೇಶಮಾಡಿಬಿಟ್ಟ ಬ್ರಾಹ್ಮಣ ಹೇಳಿದ ಕಟ್ಟಳೆ ಪ್ರಕಾರ ನಡೆದಿದ್ದರಿಂದ ಎರಡು ಗುಂಪಿನವರಿಗೂ ಪರಸ್ಪರ ಸೌಜನ್ಯಸುಖವುಂಟಾಯಿತು. ಪ್ರಸಾದವಿಲ್ಲದೇ ಬೇರೆ ಊಟಮಾಡತಕ್ಕವರಲ್ಲವಾದ್ದರಿಂದ ವರ್ತಕನೂ ಶೂದ್ರನೂ ಸುಖಿಗಳಾದರು. ಅವರು ಸಾಮಾನು ತಂದಿದ್ದರಿಂದಲೇ ಉತ್ತಮ ಭೋಜನಹೊಂದಿ ತಾಯಿಮಕ್ಕಳು ಸುಖಿಗಳಾದರು. ಮಧ್ಯಾಹ್ನವೇ ಪ್ರಸಾದವಿನಿಯೋಗಮಾಡುತ್ತಿದ್ದುದರಿಂದ ವಟುವಿಗೆ ತಂಗಳನ್ನ ತಿಂದ ಪಾಪಹೊಂದುವ ಪ್ರಸಂಗ ತಪ್ಪಿತು.

ಮಾಧುರಬ್ರಾಹ್ಮಣನು ವ್ಯವಸ್ಥೆಮಾಡಿದಂತೆ ಶ್ರೀಹರಿಯು ಜಗತ್ತಿನಲ್ಲಿ ವ್ಯವಸ್ಥೆಮಾಡಿದ್ದಾನೆ. ಜನರು ದೇವತೆಗಳು ಕೊಟ್ಟ ಅನ್ನಾದಿಗಳನ್ನು ಯಜ್ಞಾದಿದ್ವಾರಾ ಅವರಿಗೆ ಭಾಗಮಾಡಿಕೊಟ್ಟು ತಮಗೆ ಎಷ್ಟುಬೇಕೋ ಅಷ್ಟು ಇಟ್ಟುಕೊಳ್ಳಬೇಕು. ಆ ದೇವತೆಗಳು ಅಭೀಷ್ಟ ದಾನದ್ವಾರಾ ಪುನಃ ಜ್ಞಾನಾದಿ ಸಂಪತ್ತನ್ನು ಅಧಿಕಾರಿಗಳಿಗೆ ಕೊಡಬೇಕು. ಹೀಗೆ ಪರಸ್ಪರ ಸೌಹಾರ್ದದಿಂದ ಸೌಖ್ಯವುಂಟು.

ಪ್ರಶ್ನೆ:- ಜ್ಞಾನಿಗಳೂ, ಸಿದ್ಧರೂ ಆದ ದೇವತೆಗಳಿಗೆ ಹವಿಸ್ಸಿನಿಂದ ಏನು ತೃಪ್ತಿ? ಅವರಿಗೆ ಮೋಕ್ಷವು ಸಿದ್ಧವಾಗಿರುವಾಗ ಅಧಿಕಾರಿಗಳಿಗೆ ಉಪಕಾರ ಮಾಡಿದ್ದರಿಂದ ಇನ್ನೇನು ಶ್ರೇಯಸ್ಸಾಗಬೇಕು?

ಉತ್ತರ:- ದೇವತೆಗಳಿಗಾದರೂ ಹರಿಯಾಜ್ಞೆಯಿಂದ ಅಧಿಕಾರಿಗಳು ಮಾಡುವ ಪಂಚಮಹಾಯಜ್ಞಗಳಿಂದಲೂ ಅಗ್ನಿಯಲ್ಲಿ ಕೊಡುವ ಹವಿಸ್ಸುಗಳಿಂದಲೂ, ತೃಪ್ತಿವಿಶೇಷವುಂಟು.(ಜ್ಞಾನಯಜ್ಞದಲ್ಲಿ ಹವಿಸ್ಸು ಯಾವುದೆಂದರೆ ಪುಣ್ಯವು. ಇದನ್ನೇ ದೇವತೆಗಳಿಗೆ ಅರ್ಪಿಸಬೇಕು.) ಅಗ್ನಿಯಲ್ಲಿ ಹಾಕಿದ ಅನ್ನದ ಸೂಕ್ಷ್ಮತೇಜಸ್ಸು ಅನಂತಮಡಿಮಾಡಲ್ಪಟ್ಟು ಅಗ್ನಿದೇವನಿಂದ ಆಯಾಯಾ ದೇವತೆಗಳಿಗೆ ಒಯ್ಯಲ್ಪಡುವುದು ಮತ್ತು ಅಧಿಕಾರಿಯು ಮಾಡುವ ಯಜ್ಞದ ಪುಣ್ಯದಲ್ಲಿ ಭಾಗವು ಆಯಾಯಾ ಇಷ್ಟದೇವತೆಗಳಿಗೆ ಹೋಗುತ್ತದೆ.ಅದು ಅವರ ಮೋಕ್ಷದಲ್ಲಿ ಆನಂದವೃದ್ಧಿಗೆ ಕಾರಣವಾಗುತ್ತೆ. ಆ ದೇವತೆಗಳಾದರೂ ಅಧಿಕಾರಿಯು ಸಾತ್ವಿಕಯಜ್ಞಗಳನ್ನು ಮಾಡಿದ್ದರೆ ಗುರುಗಳಂತೆ ಜ್ಞಾನಾದಿ ಸಂಪತ್ತನ್ನು ಕೊಡುವರು. ರಾಜಸ ತಾಮಸ ಯಜ್ಞಮಾಡಿದರೆ ಕರ್ಮಾನುಗುಣವಾದ ಅಭೀಷ್ಟವನ್ನು ಕೊಟ್ಟು ಆಧಿಕಾರಿಕ ವ್ಯಾಪಾರಮಾಡಿದ್ದನ್ನು ಹರಿಗೆ ಸಮರ್ಪಿಸಿ ಮೋಕ್ಷದಲ್ಲಿ ಆನಂದ ವೃದ್ಧಿಯನ್ನು ಕೊಡುವರು. ಸಾತ್ವಿಕರು ಮಾಡುವ ಯಜ್ಞಾದಿಕರ್ಮಗಳಿಂದ ದೇವತೆಗಳಿಗೆ ಎರಡು ರೀತಿಯ ಪುಣ್ಯ ಬರುತ್ತೆ. (1)ಅಧಿಕಾರಿ ಗಳಿಗೆ ಅನುಕೂಲಮಾಡಿದ್ದಕ್ಕೆ ಪುಣ್ಯ. (2) ಹೀಗೆ ಮಾಡಿದವನಿಗೆ ಹೀಗೆ ಕೊಡಬೇಕೆಂದು ಹರಿಯು ಏನು ಆಜ್ಞಾಮಾಡಿದ್ದಾನೋ ಅದರಂತೆ ನೌಕರಿ ಮಾಡಿದ್ದಕ್ಕೆ ಪುಣ್ಯ ಬರುತ್ತೆ. ರಾಜಸತಾಮಸರ ಕರ್ಮಗಳಿಗೆ ಅಭೀಷ್ಟಕೊಡುವಾಗ ಮೊದಲನೆಯ ರೀತಿಯಿಂದ ಪುಣ್ಯ ಬರಲ್ಲ. ಎರಡನೇ ಪುಣ್ಯವೇ ಬರುವುದು. ಅದಕ್ಕೆ ದೃಷ್ಟಾಂತ. ಸಿದ್ಧಿಕೆಲಸವನ್ನು ರಾಜರಾಜ್ಞಾಪ್ರಕಾರ ಮಾಡಿಬಿಡುವುದರಿಂದ ಆತನಿಗೆ ರಾಜರು ದರ್ಬಾರಿಗೆ ಕರೆಸಿಕೊಂಡು ಮರ್ಯಾದೆ ಮಾಡುವರು. ಹಾಗೆಯೇ ದುಷ್ಟಕರ್ಮವನ್ನು ಚೇತನರು ಮಾಡಿದಾಗ ದೇವತೆಗಳು ದೇವರ ಅಪ್ಪಣೆ ಪ್ರಕಾರ ಆ ಕರ್ಮಕ್ಕೆ ಫಲವನ್ನು ಆ ಚೇತನರಿಗೆ ಕೊಟ್ಟು ದೇವರಲ್ಲಿ ತಮ್ಮ ನೌಕರಿಮಾಡಿದ್ದನ್ನು ಅರಿಕೆಮಾಡುವುದರಿಂದ ದೇವತೆಗಳು ಯಾವ ದೋಷವೂ ಇಲ್ಲದೇ ದೇವರು ತನ್ನ ಆಜ್ಞಾ ಪ್ರಕಾರ ನೌಕರಿ ಮಾಡಿದ್ದಾರೆಂದು ದೇವತೆಗಳಿಗೆ ಮುಕ್ತಿಯಲ್ಲಿ ಆನಂದವೃದ್ಧಿಯನ್ನು ಮಾಡುತ್ತಾನೆ. ಅಧಿಕಾರಿಗಳು ತಾವು ತೋರಿದ ಅಭೀಷ್ಟವನ್ನು ಹೊಂದಿ ಕೊನೆಗೆ ವೈರಾಗ್ಯಾದಿ ಭಾಗ್ಯವನ್ನು ಆ ದೇವತೆಗಳಿಂದಲೇ ಹೊಂದಿ ಕ್ರಮವಾಗಿ ಹರಿಯಿಂದಲೇ ಮೋಕ್ಷವನ್ನು ಹೊಂದುವರು. ಹೀಗೆ ಅಧಿಕಾರಿಗಳು ಯಜ್ಞಮಾಡಿದರೆ ದೇವವರ್ಗಕ್ಕೂ ಮನುಷ್ಯವರ್ಗಕ್ಕೂ ಸೌಖ್ಯವುಂಟು. ಆದ್ದರಿಂದಲೇ:-

ನಮೋಸ್ತು ತಾತ್ವಿಕಾದೇವಾಃ ವಿಷ್ಣುಭಕ್ತಿಪರಾಯಣಾಃ। ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವಹಿ ॥

ಎಲೈ ತತ್ವಾಭಿಮಾನಿ ದೇವತೆಗಳಿರಾ! ವಿಷ್ಣುಭಕ್ತಿಪರಾಯಣರಾದ ನಿಮಗೆಲ್ಲರಿಗೂ ನಮಸ್ಕಾರವು. ತಾವುಗಳೆಲ್ಲರೂ ನನ್ನನ್ನು ವಿಷ್ಣುಪ್ರೀತಿಕರವಾದ ಕರ್ಮಾನುಷ್ಠಾನದಲ್ಲೇ ಪ್ರೇರಿಸೋಣವಾಗಲಿ. ಎಂದು ಪ್ರಾತಃಕಾಲದಲ್ಲಿ ದೇವತೆಗಳನ್ನು ಸ್ತುತಿಸಬೇಕು. ಅವರುಗಳನ್ನು ವಿಷ್ಣುಪರಿವಾರಭೂತರು, ಮನುಷ್ಯರಿಗೆಲ್ಲಾ ಗುರುಗಳು, ಹರಿಭಕ್ತರು ಎಂಬ ಭಾವದಿಂದ ಪೂಜಿಸಬೇಕು. ಅವರ ಪೂಜೆಯಿಲ್ಲದೇ ಯಾವ ಅಧಿಕಾರಿಗೂ ವಿಷ್ಣುಪ್ರಸಾದ- ವಾಗುವುದೇ ಇಲ್ಲ. ಅಧಿಕಾರಿಗಳನ್ನು ಪ್ರೇರಣೆ ಮಾಡುವ ವ್ಯಾಪಾರವನ್ನು ಸರಿಯಾಗಿ ಮಾಡದಿದ್ದರೆ ದೇವತೆಗಳಿಗೆ ಮೋಕ್ಷದಲ್ಲಿ ಆನಂದೋನ್ನಾಹವೇ ಆಗುವುದಿಲ್ಲ. ಹೀಗೆ ಉಭಯವರ್ಗವೂ ಆಶ್ರಿತವಾಗಿದೆ.

(12) ಇಷ್ಟಾನ್ಭೋಗಾನ್ಹಿ ವೋ ದೇವಾಃ ದಾಸ್ಯಂತೇ ಯಜ್ಞಭಾವಿತಾಃ।
ತೈರ್ದತ್ತಾನ ಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ॥ 12/3 ॥

ಕನ್ನಡಾರ್ಥ:-

ಅವತಾರಿಕೆ ಹೀಗಿರುವಲ್ಲಿ ಆ ದೇವತೆಗಳನ್ನು ಪೂಜಿಸುವುದೇನು ಎಂದು ಬಿಟ್ಟು ಬಿಟ್ಟರೆ ಏನಾಗುತ್ತೆ ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

'' ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ। ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇಸ್ತೇನ ಏವ ಸಃ॥

ಎಲೈ ಪ್ರಜೆಗಳಿರಾ! ಯಜ್ಞದಿಂದ ಆರಾಧಿತರಾದ ದೇವತೆಗಳು ನಿಮಗೆ (ಇಷ್ಟಾನ್ ಭೋಗಾನ್=ಶಾರೀರಬಲ, ಮನೋಬಲ, ಧನ, ಅನ್ನಾದಿ ಸಂಪತ್ತು) ಇಷ್ಟವಾದ ಅನ್ನಾದಿಭೋಗದ್ರವ್ಯಗಳನ್ನು ಕೊಡುವರು. ಅಂಥಾ ದೇವತೆಗಳಿಂದಲೇ ಕೊಡಲ್ಪಟ್ಟ ಪದಾರ್ಥಗಳನ್ನು ಯಜ್ಞಾದಿ ದ್ವಾರಾ ಆ ದೇವತೆಗಳಿಗೆ ಕೊಡದೇ ಭೋಗಿಸುವವನು ಚೋರನೇ ಸರಿ ॥

ವಿಶೇಷ:- 1) ಈ ಶ್ಲೋಕದಲ್ಲಿ ಕರ್ಮಾಕರಣಮಾಡುವವನಿಗೆ ಬರುವ ದೋಷವು ಹೇಳಲ್ಪಟ್ಟಿದೆ. ದೇವದ್ರವ್ಯಾಪಹಾರರೂಪ ದೋಷವು ಬರುತ್ತೆ, ಹೇಗೆಂದರೆ, ದೇವತೆಗಳು ಕೊಟ್ಟ ಸಂಪತ್ತು , ಜ್ಞಾನ ಇವುಗಳನ್ನು ಹೊಂದಿ, ಪಂಚ ಮಹಾಯಜ್ಞಗಳನ್ನು ಮಾಡದೇ ಸ್ವಾರ್ಥಭೋಗದಲ್ಲಿ

ರತರಾದರೆ (ಅ)ವಿಷ್ಣುವಿನ ಆಜ್ಞಾ ಉಲ್ಲಂಘನಮಾಡಿದ ದೋಷ= ವಿಷ್ಣುದ್ರೋಹ, ಮತ್ತು ದೇವತೆಗಳಿಗೆ ಸಲ್ಲಬೇಕಾದ ಭಾಗವನ್ನು ತಾನೇ ತಿಂದಿದ್ದರಿಂದ ದೈವದ್ರೋಹ ಇವೆರಡೂ ಬರುತ್ತೆ. ಆದ್ದರಿಂದ ''ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಂ। ಹೋಮೋ ದೈವೋ ಬಲಿರ್ಭೌತೋ ನೃಯಜ್ಞೋಽತಿಥಿ ಪೂಜನಂ'' ಎಂದು ಹೇಳಲ್ಪಟ್ಟ ಪಂಚ ಮಹಾಯಜ್ಞವನ್ನೂ ಮತ್ತೂ ಮುಂದೆ ಇದೇ ಗೀತೆಯಲ್ಲಿ ಹೇಳಲ್ಪಡತಕ್ಕ ದ್ರವ್ಯಯಜ್ಞ, ಯೋಗಯಜ್ಞ, ಜ್ಞಾನಯಜ್ಞ ಒಟ್ಟಿನಲ್ಲಿ ತನುಮನಧನಗಳಿಂದ ಮಾಡಲ್ಪಡತಕ್ಕ ಸಮಸ್ತವಿಹಿತ ಕರ್ಮಗಳೂ ಯಜ್ಞವೆಂದು ಕರೆಸಿಕೊಳ್ಳುವುದರಿಂದ ಈ ಯಜ್ಞಗಳನ್ನು ಮಾಡಲೇ ಬೇಕು. ಇವನ್ನು ಮಾಡದಿದ್ದರೆ ಮಾಥುರಬ್ರಾಹ್ಮಣನ ಸ್ಥಿತಿಯೇ ಬರುತ್ತೆ. ಅದೇನೆಂದರೆ:- ಮಾಥುರ ವಿಪ್ರನು ಗುಹಾ ಪ್ರವೇಶಮಾಡಿದಮೇಲೆ ಅವನ ಹೇಳಿಕೆಯಂತೆ ಅವನ ಹೆಂಡತಿ ಕೊಂಚದಿವಸ ನಡೆದುಕೊಂಡಳಷ್ಟೆ! ಆಮೇಲೆ ಎರಡು ಹೊತ್ತು ಅಡಿಗೆ ಮಾಡುವವರು ಯಾರು? ಎಂದು ಚಿಂತಿಸಿ, ವೈಶ್ಯನ ವಶದಲ್ಲಿದ್ದ ಜಮೀನನ್ನು ಮಾರಿಸಿ ತಾನೇ ಸಾಮಾನನ್ನು ಕೊಂಡುಕೊಂಡು ಬಂದು ಒಪ್ಪತ್ತು ಅಡುಗೆ ಮಾಡಿ ರಾತ್ರಿ ಅದನ್ನೇ ವಟುವಿಗೂ ಬಡಿಸುತ್ತಾ ವೈಶ್ಯ,ಶೂದ್ರರನ್ನು ತಿರಸ್ಕರಿಸಿದಳು. ಅವರು ನೈವೇದ್ಯವನ್ನು ವಿನಹ ಬೇರೆ ಭೋಜನವನ್ನು ಮಾಡದೆ ಕೃಶರಾಗಿ ಜಲಪಾನದಿಂದ ಬದುಕಲಾರಂಭಿಸಿದರು. ಬ್ರಾಹ್ಮಣಿಯೂ ಕೂಡ ಮೂರುತಿಂಗಳಲ್ಲಿಯೇ ಎಲ್ಲವನ್ನೂ ಹಾಳುಮಾಡಿಕೊಂಡು ವೈಶ್ಯನು ತಂದು ಹಾಕುವನೆಂದು ಮುಖನೋಡಲು ಆತನು 'ಜಮೀನಿದ್ದರೆ ಒಂದಕ್ಕೆರಡರಂತೆ ಬೆಳೆಯಬಹುದಾಗಿತ್ತು. ಈಗ ಏನೂ ಇಲ್ಲ'' ಎನ್ನಲು ಉಪವಾಸಕ್ಕಾರಂಭಿಸಿದಳು. ವಟುವು ಉಚ್ಛಿಷ್ಟಾನ್ನ ಭೋಜನ ಮಾಡಿ ತೇಜೋಹೀನನಾದನು. ಆರುತಿಂಗಳಾದವು. ಸಮಾಧಿಬಿಟ್ಟ ಯೋಗಿ ಬಂದು ಆಗಿರುವ ಅವಿವೇಕವನ್ನು ನೋಡಿ ಅವಾಚ್ಯ ಬೈದನು. ಆಕೆಗೆ ಪತಿದ್ರೋಹ ಬಂದಿತು. ವೈಶ್ಯಕೊಟ್ಟಿದ್ದ ಜಮೀನನ್ನು ತಾನು ಉಪಯೋಗಿಸಿಕೊಂಡು ಅವನಿಗೆ ಅನ್ನಹಾಕದ ಪ್ರಯುಕ್ತ ಆ ದ್ರೋಹವು ಬಂದಿತು. ಆಗ ಆಕೆಯು ಪ್ರಾಯಶ್ಚಿತ್ತ ಬೇಡಿ 'ಸಾಂತಪನ' ವ್ರತದಿಂದ ಶುದ್ಧಿ ಹೊಂದಿದ್ದಾಳೆ. ಹೀಗೆ ಕರ್ಮಾಕರಣದಿಂದ ಎರಡು ವಿಧವಾದ ದ್ರೋಹವುಂಟು. 1. ಹರಿದ್ರೋಹ ; 2. ದೈವದ್ರೋಹ. ಸ್ವೋಚಿತಕರ್ಮಾನುಷ್ಠಾನದಿಂದ ಉಭಯವಿಧ ಸೌಖ್ಯ; ಅಭೀಷ್ಟ ಪ್ರಾಪ್ತಿ, ದೇವತಾಪ್ರಸಾದದ್ವಾರಾ ಮೋಕ್ಷಸುಖ. ದೇವತೆಗಳು ಏಕೆ ಪ್ರಸನ್ನರಾಗುವರೆಂದರೆ:- ಆ ದೇವತೆಗಳಿಗೂ ಪೂಜಾಸ್ವೀಕಾರ ಸೌಖ್ಯಅಧಿಕಾರಾನುಷ್ಠಾನದಿಂದ ಮೋಕ್ಷದಲ್ಲಿ ಆನಂದವೃದ್ಧಿಯಿದೆ. ಹೀಗಿರುವುದರಿಂದ ಸ್ವೋಚಿತ ಕರ್ಮಾನುಷ್ಠಾನವು ಅತ್ಯವಶ್ಯಕವು.

(2) ಅರ್ಥವಾದವು ನಾಲ್ಕುಪ್ರಕಾರ. ಸ್ತುತಿ, ನಿಂದಾ, ಪರಕೃತಿ, ಪುರಾಕಲ್ಪ ಇಷ್ಟು ಪ್ರಕಾರದಿಂದಲೂ ಶ್ರೀಕೃಷ್ಣನು ಹೇಳಿದ್ದಾನೆ. ಹೇಗೆಂದರೆ:-
(ಅ) ಇಷ್ಟಾನ್ ಭೋಗಾನ್ ಎಂಬಲ್ಲಿ ಸ್ವೋಚಿತಕರ್ಮಮಾಡಿದರೆ ಸಕಲಅಭೀಷ್ಟಗಳೂ ದೊರೆಯುವುವು ಎಂದು ಸ್ತುತಿ. (ಆ)ಮಾಡದಿದ್ದರೆ ವಿಷ್ಣು ದ್ರೋಹ(ವಿಷ್ಣುವಿನ ಸ್ವಾಮಿತ್ವ ಚೌರ್ಯ) ಮತ್ತು ದೇವಸ್ವ ಚೌರ್ಯ ಬರುತ್ತೆ ಎಂದು ನಿಂದಾ. (ಇ) ಪರಬ್ರಹ್ಮನು ಹಿಂದೆ ಹೀಗೆ ಆಜ್ಞೆಮಾಡಿದ್ದಾನೆ ಎಂದು ಪರಕೃತಿ. (ಈ) ಮುಂದಿನ ಶ್ಲೋಕದಲ್ಲಿ ಬಹುಜನರು ಯಜ್ಞಮಾಡಿ ಬದುಕಿ ಹೋದರು ಎಂದು ಪುರಾಕಲ್ಪ.

ಹೀಗೆ ಎಷ್ಟುಪ್ರಕಾರದಿಂದ ನಿಯತಕರ್ಮವನ್ನು ಹೊಗಳಬೇಕೋ ಅಷ್ಟುಪ್ರಕಾರಗಳಿಂದಲೂ ಹರಿಯು ಸ್ವವರ್ಣಾಶ್ರಮೋಚಿತ ಕರ್ಮಾನುಷ್ಠಾನವನ್ನು ಹೊಗಳಿದ್ದಾನೆ.

13) ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ।
ಭುಂಜತೇ ತೇತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥13/3॥

ಕನ್ನಡಾರ್ಥ:-ಅವತಾರಿಕೆ:- ಸಮೀಚೀನವಾಗಿ ನಿಯತಕರ್ಮವನ್ನು ಅನುಷ್ಠಾನ ಮಾಡುವವರಿಗೂ ಅಂಥಾ ಸತ್ಕರ್ಮವನ್ನು ತ್ಯಾಗಮಾಡಿದವರಿಗೂ ಇರುವ ವ್ಯತ್ಯಾಸವನ್ನು ಶ್ರೀಕೃಷ್ಣನು ನಿರೂಪಿಸುತ್ತಾನೆ.

''ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ। ಭುಂಜತೇ ತೇತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥''

ವಿಷ್ಣುವೇ ಮೊದಲಾದ ಸಕಲ ದೇವತೆಗಳಿಗೂ ಹವಿಸ್ಸನ್ನು ಯಥಾ ಯೋಗ್ಯವಾಗಿ ಅರ್ಪಣೆಮಾಡಿ (ಪಂಚ ಮಹಾಯಜ್ಞವನ್ನು ಮಾಡಿ) ಯಜ್ಞಶೇಷವನ್ನು ಭೋಜನಮಾಡುವವರು ಸಕಲಪಾಪಗಳಿಂದಲೂ ಮುಕ್ತರಾಗುತ್ತಾರೆ. ಹಾಗಲ್ಲದೇ ತಮ್ಮ ಉದರಪೂರ್ತಿಗಾಗಿ ಯಾರು ಪಾಕ ಮಾಡಿ ಭೋಜನಮಾಡುತ್ತಾರೋ ಅವರು ಪಾಪವನ್ನೇ ಭೋಜನಮಾಡುತ್ತಾರೆಂದು ತಿಳಿಯಬೇಕು. (ಪಂಚಯಜ್ಞಮಾಡದೇ ಅತಿಥಿ ಅಭ್ಯಾಗತರನ್ನು ಸಂತುಷ್ಟಿಪಡಿಸದೇ ಭೋಜನವನ್ನು ಮಾಡುವವನು ಪಾಪವನ್ನು ಹೊಂದುವನೆಂದರ್ಥ.)

ವಿಶೇಷ:- (1)ಇಷ್ಟೂ ಪ್ರಜಾಪಾಲಕನಾದ ನಾರಾಯಣನ ಶಾಸನ. ಪಂಚಯಜ್ಞಮಾಡುವವನಿಗೆ ಪಂಚಸೂನಾದೋಷವಿಲ್ಲ. ನಾರಾಯಣನ

ಆಜ್ಞಾಪರಿಪಾಲನ, ಸ್ವೋತ್ತಮಗುರುಗಳಾದ ದೇವತೆಗಳ ಪ್ರಸಾದ, ಅಭೀಷ್ಟ ಪ್ರಾಪ್ತಿ ಇವೆಲ್ಲಾ ಮಂಗಳಗಳು. ಕರ್ಮತ್ಯಾಗಮಾಡುವವನು ಉಣ್ಣುವ ಅನ್ನವೇ ಪಾಪದಾಯಕವು. ಅವನು ಸ್ವಾರ್ಥಿಯು. ದೇವತೆಗಳ ಸ್ವತ್ತನ್ನು ಕದ್ದ ಕಳ್ಳನು. ಪರಬ್ರಹ್ಮನ ಸ್ವಾಮಿತ್ವವನ್ನು (?????..........)

(ಇಲ್ಲಿ ಒಂದು ಹಾಳೆಯು ಸಿಕ್ಕಿಲ್ಲ)

(14,15 ಮತ್ತು 16 ಕನ್ನಡಾರ್ಥ) ಮತ್ತು ಕರ್ಮತ್ಯಾಗಿಯು ಜಗಚ್ಚಕ್ರವನ್ನೇ ಹಾಳುಮಾಡಿದವನಾಗುವವನು ಎಂದು ಮೂರುಶ್ಲೋಕಗಳಲ್ಲಿ ಶ್ರೀ ಕೃಷ್ಣನು ಹೇಳುತ್ತಾನೆ.

'' ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ । ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥ ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರ ಸಮುದ್ಭವಂ । ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥ ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ । ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥''

ಪಾರ್ಥನೇ! ಅನ್ನದಿಂದ ಪ್ರಾಣಿಗಳು ಉತ್ಪನ್ನವಾಗುತ್ತವೆ. (ಅನ್ನವು ವೀರ್ಯಶುಕ್ಲಾದಿ ರೂಪೇಣ ಪರಿಣಮಿಸಿ ಗರ್ಭೋತ್ಪತ್ತಿಗೆ ಕಾರಣವಾಗಿ ಪ್ರಾಣಿಗಳ ಸೃಷ್ಟಿಗೆ ನಿಮಿತ್ತವಾಗುವುದು) ಇಂಥಾ ಅನ್ನವು ಪರ್ಜನ್ಯನಾಮಕ ಆದಿತ್ಯನಿಂದ ವೃಷ್ಟಿದ್ವಾರಾ ಪ್ರಾಪ್ತವಾಗುವುದು. ಅಂಥಾ ಪರ್ಜನ್ಯನು ಯಜಮಾನನಿಂದ ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸಿ ಬಲವುಳ್ಳವನಾಗಿ(ಅನುಗ್ರಹೋನ್ಮುಖನಾಗಿ) ವೃಷ್ಟಿಪ್ರದನಾಗುತ್ತಾನೆ. ಅಂತಹ ಪರ್ಜನ್ಯನನ್ನು ಪ್ರಸನ್ನೀಕರಿಸುವ ಯಜ್ಞವು ತದಂಗವಾದ ಕ್ರಿಯೆಗಳಿಂದ ಹುಟ್ಟುತ್ತದೆ. ಅಂಥಾ ಯಜ್ಞಾಂಗಭೂತವಾದ ಕರ್ಮವು ಪರಮಾತ್ಮನ ಪ್ರೇರಣೆಯಿಂದ ಉಂಟಾಗುವುದು. ಆ ಪರಮಾತ್ಮನು ವೇದರೂಪವಾದ ನಿತ್ಯವಾದ ಶಬ್ದಪ್ರಮಾಣದಿಂದ ತಿಳಿಯಲ್ಪಡತಕ್ಕವನು. (ಯಥಾರ್ಥವಾದ ವೇದದಿಂದಲೇ ಪರಬ್ರಹ್ಮನು ಪ್ರಾಣಿಗಳಿಂದ ತಿಳಿಯಲ್ಪಡತಕ್ಕವನು) ಹೀಗೆ ತಿಳಿಯಲ್ಪಟ್ಟರೆ ಆತನು ಪ್ರಸನ್ನನಾಗಿ ಸತ್ಕರ್ಮದಲ್ಲಿ ಪ್ರೇರಣೆ ಮಾಡುತ್ತಾನೆ. ಈ ರೀತಿಯಲ್ಲಿ ಜಗಚ್ಚಕ್ರಪ್ರವೃತ್ತಿಯು(ಎಂದರೆ ಬ್ರಹ್ಮಪ್ರಳಯದವರೆಗೂ ಪ್ರವಾಹರೂಪತ್ವೇನ ಜಗತ್ತು ಬರುವ ರೀತಿಯು). ಆದ್ದರಿಂದ ಪೂರ್ವೋಕ್ತ ಪರಂಪರೆಯಿಂದ ಪರಬ್ರಹ್ಮನು ಯಜ್ಞದಿಂದ ಅಭಿವ್ಯಂಗ್ಯನಾದ್ದರಿಂದ ಪರಮಾತ್ಮನು ಸರ್ವದಾ ಯಜ್ಞದಲ್ಲಿ ಪ್ರತಿಷ್ಠಿತನೆಂದು ಹೇಳಿಸಿ ಕೊಳ್ಳಲ್ಪಡುತ್ತಾನೆ. ಈ ರೀತಿಯಾಗಿ ಪ್ರವರ್ತಿತವಾದ ಜಗಚ್ಚಕ್ರವನ್ನು ಯಾವಾತನು ಅನುವರ್ತಿಸುವುದಿಲ್ಲವೋ ಅಂತಹವನು ಪಾಪಸಂಪಾದನೆ- ಗಾಗಿಯೇ ಉತ್ಪನ್ನನಾದವನು; ಅವನು ಇಂದ್ರಿಯ ವಿಷಯಗಳಲ್ಲಿ ಆಸಕ್ತನು; ಎಲೈ ಪಾರ್ಥನೇ! ಅವನ ಬದುಕು ನಿರರ್ಥಕ.

ವಿಶೇಷ :-

(1)ಪ್ರಾಣಿಗಳು ವೇದದಿಂದ ಪರಮಾತ್ಮನನ್ನು ತಿಳಿಯುವರು. ಪರಮಾತ್ಮನು ಅದರಿಂದ ಸಂತುಷ್ಟನಾಗಿ ಸತ್ಕರ್ಮಗಳಲ್ಲಿ ಪ್ರೇರಿಸುವನು. ಸತ್ಕರ್ಮಗಳಿಂದ ಯಜ್ಞವು ನಿಷ್ಪನ್ನವಾಗಿ ಪರ್ಜನ್ಯಾದಿ ದೇವತೆಗಳಿಗೆ ಸಂತುಷ್ಟಿಯನ್ನುಂಟುಮಾಡುವುದು. ಪರ್ಜನ್ಯಾದಿಗಳು ವೃಷ್ಟಿಯನ್ನು ಸುರಿಸುವರು. ಅದರಿಂದ ಅನ್ನವೃದ್ಧಿಯಾಗುವುದು. ಅದರಿಂದ ಪ್ರಾಣಿಗಳು ಪುಷ್ಟರಾಗುವರು. ಮತ್ತು ನೂತನ ಪ್ರಾಣಿಗಳೂ ಹುಟ್ಟುವರು. ಅವರು ಪುನಃ ವೇದವನ್ನು ಅಭ್ಯಾಸಮಾಡಿ ಪರಮಾತ್ಮನನ್ನು ತಿಳಿಯುವರು. ಈ ರೀತಿ ಜ್ಞಾತನಾದ ಪರಮಾತ್ಮನು ಪುನಃ ಸತ್ಕ್ರಿಯೆಗಳಿಗೆ ಪ್ರೇರಕನಾಗುವನು. ಅದರಿಂದ ಯಜ್ಞವು; ಅದರಿಂದ ಪರ್ಜನ್ಯನ ಪ್ರೀತಿ. ಅದರಿಂದ ಸದನ್ನ ಅದರಿಂದ ಪುನಃ ಸಾತ್ವಿಕಪ್ರಾಣಿಗಳಿಗೆ ಪುಷ್ಟಿ ನೂತನಪುರುಷರ ಜನನವು ಮತ್ತು ಅವರ ವೇದಾಭ್ಯಾಸವು.... ಇದೇ ರೀತಿಯಾಗಿ ಜಗಚ್ಚಕ್ರವು ವೇದಜ್ಞಾನ-ಯಜ್ಞ ಸಾತ್ವಿಕ ಅನ್ನಾದಿಗಳನ್ನೂ ನಿಮಿತ್ತಮಾಡಿಕೊಂಡಿರುವ ಪರಮಾತ್ಮನಿಂದ ನಡೆಯಿಸಲ್ಪಡುತ್ತಿರುವುದು. ಹೀಗಿರುವಲ್ಲಿ ಯಜ್ಞವನ್ನು ನಿಲ್ಲಿಸಿಬಿಟ್ಟರೆ ಪರ್ಜನ್ಯನು ಕುಪಿತನಾಗುವನು. ಅದರಿಂದ ಸರಿಯಾದ ವೃಷ್ಟ್ಯಾದಿಗಳಾಗದೇ, ಕ್ಷಾಮಾದಿಗಳೊದಗಿ ಸಾತ್ವಿಕಾನ್ನವು ದೊರಕಲಾರದು. ಅದರಿಂದ ದುರ್ಬುದ್ಧಿಯುಂಟಾಗಿ ವೇದದಿಂದ ಪರಮಾತ್ಮನ ಯಥಾರ್ಥಜ್ಞಾನವು ಬರುವುದಿಲ್ಲ. ಪರಮಾತ್ಮನು ಸತ್ಕ್ರಿಯೆಗಳಲ್ಲಿ ಪ್ರೇರಿಸುವುದಿಲ್ಲ. ಈ ರೀತಿಯಾಗಿ ಜಗತ್ತು ತಾಮಸವಾಗಿ ವಿಲಯವನ್ನು ಹೊಂದುವುದು. ಆದ್ದರಿಂದ ಜಗಚ್ಚಕ್ರವು ನಿಂತುಹೋಗುವಂತಹ ಯಾವ ಒಂದು ಕ್ರಿಯೆಯನ್ನೂ ಅಧಿಕಾರಿಯು ಮಾಡಬಾರದು. ಅನ್ನ ಊಟ ಮಾಡದಿದ್ದರೂ ಚಕ್ರವು ನಿಲ್ಲುತ್ತೆ. ಅಂಥಾ ಆತ್ಮಹತ್ಯೆಯು ಕೂಡದು. ವೇದಾಭ್ಯಾಸ ಮಾಡದಿದ್ದರೂ ಕರ್ಮಜ್ಞಾನವು ಹುಟ್ಟದೇ ಚಕ್ರವು ನಿಲ್ಲುತ್ತೆ. ಆದ್ದರಿಂದ ವೇದಾರ್ಥವನ್ನು ಸಾರ್ಥವಾಗಿ ಕಲಿಯಬೇಕು. ವೇದೋಕ್ತಸತ್ಕರ್ಮ ಮಾಡದಿದ್ದರೂ ಚಕ್ರ ನಿಲ್ಲುತ್ತೆ. ಯಜ್ಞವೇ ಇಲ್ಲದೇ ದೇವತೆಗಳು ವೃಷ್ಟಿಯನ್ನು ಕೊಡದೇ ಕ್ಷಾಮವನ್ನುಂಟುಮಾಡುತ್ತಾರೆ.ಮದುವೆ ಮಾಡಿಕೊಳ್ಳದಿದ್ದರೂ ಚಕ್ರವು ನಿಲ್ಲುತ್ತೆ. ಕರ್ಮಮಾಡುವ ಪ್ರಜೆಗಳಿಲ್ಲದಿದ್ದರೆ ಯಜ್ಞವೇ ನೆರವೇರಲಾರದು. ಆದ್ದರಿಂದ ಯಾವುದಾದರೂ ವಿಧವಾದ ಸಂತತಿಯನ್ನು ಹುಟ್ಟಿಸಬೇಕು. ಗೃಹಸ್ಥರು ಧರ್ಮಿಷ್ಠ ಪುತ್ರರನ್ನೂ, ಸನ್ಯಾಸಿಗಳು ಸಚ್ಛಿಷ್ಯರನ್ನೂ ಹುಟ್ಟಿಸಬೇಕು.

ಗುರುಹೀನನಾದರೂ ಚಕ್ರನಿಲ್ಲುತ್ತೆ. ಹೇಗೆಂದರೆ, ಗುರುವಿಲ್ಲದೇ ವೇದಾರ್ಥಜ್ಞಾನವಾಗುವುದಿಲ್ಲ. ಅದಿಲ್ಲದಿದ್ದರೆ ಯಜ್ಞ ನಿಂತು ಹೋಗುತ್ತೆ. ಆದ್ದರಿಂದ ಉತ್ತಮ ಗುರುಗಳನ್ನು ಸೇವಿಸಬೇಕು. (ಭಾರಿ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಯಾವನೊಬ್ಬ ಕೆಲಸ ಮಾಡದಿದ್ದರೂ ಪ್ರಿಂಟಾಗುವ ಪೇಪರು ಅಚ್ಚಾಗುವುದೇ ಇಲ್ಲ.)

(2)ಇಲ್ಲಿ ಶಂಕೆ:- ಎಷ್ಟೋ ಜನ ಭ್ರಷ್ಟರು ಲೋಕದಲ್ಲಿದ್ದಾರೆ. ಆದರೂ ಜಗಚ್ಚಕ್ರವು ನಿಂತಿಲ್ಲವಲ್ಲಾ ಎಂದರೆ, ಒಬ್ಬ ಭ್ರಷ್ಟನಾದರೆ ಜಗಚ್ಚಕ್ರ ನಿಲ್ಲಲಾರದು. ಎಷ್ಟೋಜನ ಮಹನೀಯರು ಮಾಡುವ ಯಜ್ಞಕರ್ಮದಿಂದ ಜಗಚ್ಚಕ್ರವು ನಡೆಯುತ್ತಿದೆ. ಯಾವಾತನು ಭ್ರಷ್ಟನೋ ಅವನು ತನ್ನ ಒಬ್ಬನ ಪಾಪದಿಂದ ಜಗಚ್ಚಕ್ರವನ್ನು ತಡೆಯಲಾರನು. ಆದರೆ ಜಗಚ್ಚಕ್ರವನ್ನು ನಿಲ್ಲಿಸಿದ ಪಾಪವನ್ನು ಹೊಂದುವನು. ಇದಕ್ಕೆ ದೃಷ್ಟಾಂತ :- ಸಂಧ್ಯಾ ಕಾಲದಲ್ಲಿ ಅರ್ಘ್ಯಕೊಡದಿದ್ದರೆ ಸೂರ್ಯನಿಗೆ ಮಂದೇಹರ ಬಾಧೆಯಿಂದ ಕಾಂತಿಹೋಗಿ ಕಪ್ಪಾಗುತ್ತಾನೆ ಎಂದಿದೆ. ಎಷ್ಟೋ ಜನರು ಸಂಧ್ಯಾವಂದನೆ ಮಾಡದಿದ್ದರೂ ಅರವತ್ತುಸಾವಿರ ವಾಲಖಿಲ್ಯರ ನಿಯತವ್ಯಾಪಾರದಿಂದ ಸೂರ್ಯನು ಕಾಂತಿಯನ್ನು ಕಳೆದುಕೊಂಡಿಲ್ಲ. ಲೋಕಕ್ಕೆಲ್ಲಾ ಬೆಳಕೂ ಇದೆ. ಆದರೂ ಸಂಧ್ಯಾಕಾಲದಲ್ಲಿ ಸಂಧ್ಯಾವಂದನೆ ಮಾಡದವನು ಸೂರ್ಯಹತ್ಯಾ ಮಾಡಿದ್ದರೆ ಏನು ಪಾಪವೋ ಆ ಪಾಪವನ್ನು ಹೊಂದುತ್ತಾನೆ. ಗೂಬೆಯಾಗಿ ಹುಟ್ಟುತ್ತಾನೆ. ಉಗಾಭೋಗ:- ಹತ್ತೈದು ಘಳಿಗೆ ಮೇಲೆ ಮತ್ತೈದು ಬರಲೆದ್ದು । ಚಿತ್ತಜನನ್ನು ಚಿತ್ತದಿ ಧ್ಯಾನಿಸಿ । ಅತ್ತ ಉದಯಕ್ಕೆ ಘಳಿಗೆ ಎರಡಿರುವಲ್ಲಿ ನಿತ್ಯ ಸ್ನಾನಮಾಡ್ಯಾದಿತ್ಯಗರ್ಘ್ಯವನಿತ್ತು ಉತ್ತಮಜನರು ಪೊತ್ತಿದ್ದ ಪಾಪಗಳನ್ನೆಲ್ಲ ಉತ್ತರಿಸುವೆನೆಂದ ಪುರಂದರ ವಿಠಲ ॥

ರಮೆಯರರಮಣ ತಾನು ಬೊಮ್ಮಾದಿಗಳನೆಲ್ಲ । ಸುಮನಸರೊಳು ಸೂರ್ಯಗರ್ಘ್ಯವನಿತ್ತು ನಿಮ್ಮ ಪಾಪಗಳನೆಲ್ಲ ಚಿಮ್ಮಿ ಕಳೆಯಿರೆಂದು । ಬೊಮ್ಮ ಮೂರುತಿ ತಾ ಘಮ್ಮನೆ ಪೇಳಿರೆ । ನಿಮ್ಮ ಜ್ಞಾನದಿ ಸಿಲುಕಿ ಸುಮ್ಮನೆ ಕೆಡದಿರಿ । ನಿಮ್ಮ ಶಿಕ್ಷಿಪನು ಪುರಂದರ ವಿಠಲ ॥

ಇದರಂತೆಯೇ ಸ್ವೋಚಿತಯಜ್ಞಮಾಡದಿದ್ದರೆ ಜಗಚ್ಚಕ್ರವನ್ನು ನಾಶಮಾಡಿದ ಪಾಪ ಬರುತ್ತೆ. ಆದುದರಿಂದ ಯಜ್ಞಾದಿ ಕರ್ಮಗಳನ್ನು ಮೋಕ್ಷಪರ್ಯಂತವೂ ಬಿಡಬಾರದು ಎಂದು ಶ್ರೀಕೃಷ್ಣನ ತಾತ್ಪರ್ಯವು.

ಪದ್ಯ:- ಸುಮನಸರ ವೈರದಲಿ ಕೆಲವರು ಕುಮತಿಗಳು ತಪದಿಂದ ಭರ್ಗನ । ಕಮಲಜನಪದಯುಗವ ಮೆಚ್ಚಿಸಿ ವರವ ಪಡೆದಿಹರು । ಸಮರ ಮುಖದೊಳಗುಪಮೆಯಲಿ ವಿಕ್ರಮದಿ ವೈರವ ಮಾಡಿದವರಿಗೆ ಅಸುರಪದವಿಯನಿತ್ತೆ ರಕ್ಷಿಸು ನಮ್ಮನನವರತ ॥ 29 ॥

ಅರ್ಥ: ಯದ್ಯಪಿ ಅಸುರರು ದೇವತೆಗಳನ್ನು ಜಯಿಸಬೇಕೆಂದು ಶಾಂತಿಕರ್ಮವಾದ ತಪಸ್ಸು ಮಾಡಿ ವರಗಳನ್ನು ಪಡೆದರೂ ಫಲವು ಘೋರವಾಯಿತು. ನಿನ್ನ ಭಕ್ತರು ಯುದ್ಧವೆಂಬ ಘೋರಕರ್ಮದಲ್ಲಿ ಆಸಕ್ತರಾಗುವಂತೆ ನೀ ಮಾಡಿದರು ಆ ಕರ್ಮ ನಿನ್ನ ಪ್ರೀತಿಗೆ ವಿಷಯವಾದ್ದರಿಂದ
ಇದರಿಂದ ಕರ್ಮಪರಿತ್ಯಾಗವು ಅತಿತಾಮಸವಾದ ದೈವದ್ರೋಹವೆಂದು ಪ್ರಾಪ್ತವಾಯಿತು.

17) ಅವತಾರಿಕೆ:- ಹೇ ಕೃಷ್ಣಾ! ಈ ಸ್ವವರ್ಣಾಶ್ರಮೋಚಿತಕರ್ಮಾನುಷ್ಠಾನವು ಎಷ್ಟು ದುಃಖವಾದರೂ ಅತ್ಯಾಜ್ಯವೆನ್ನುತ್ತಿ. ಇದನ್ನು ಬಿಟ್ಟರೆ ಎಲ್ಲರಿಗೂ ದುಃಖವಾಗುತ್ತದೆಯೇ ? ಇಂಥವರು ವರ್ಣಾಶ್ರಮಧರ್ಮಗಳನ್ನು ಬಿಟ್ಟರೆ ಚಿಂತಿಲ್ಲ ಎಂದು ಒಂದಾದರೂ ಅಪವಾದವಿಲ್ಲವೇ ಎಲ್ಲರೂ ಯಾವಾಗಲೂ ಕರ್ಮಮಾಡಬೇಕಾದರೆ ಇನ್ನು ತಪಸ್ಸಿಗಾಗಿ ಗುಹೆಯಲ್ಲೋ, ಆಶ್ರಮದಲ್ಲೋ ಸಮಾಧಿನಿರತರಾದ ಶಮೀಕ ಚ್ಯವನಾದಿಗಳಿಗೂ ಶಿಕ್ಷೆಯಾಗುತ್ತದೆಯೇನು? ಎಂದರೆ ಶ್ರೀ ಕೃಷ್ಣನು ಹೇಳುತ್ತಾನೆ:-

''ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ । ಆತ್ಮನ್ಯೇವ ಚ ಸಂತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥''

ಅರ್ಥ:- ಮುಕ್ತನಾದ ಅಥವಾ ಅಸಂಪ್ರಜ್ಞಾತಸಮಾಧಿಸ್ಥನಾದ ಯಾವ ಮಾಶವಃ=ಜ್ಞಾನಿಯು ಪರಮಾತ್ಮದರ್ಶನದಿಂದಲೇ ಉಂಟಾದ ಸುಖವುಳ್ಳ- ವನಾಗಿ ಅನ್ಯತ್ರ ಆಸಕ್ತಿಯುಳ್ಳವನಲ್ಲವೋ ಮತ್ತೂ ಪರಮಾತ್ಮದರ್ಶನದಿಂದ, ಸಂತುಷ್ಟಃ=ಮಹಾಸುಖವನ್ನು ಹೊಂದಿದವನೋ, ಅಂಥಾ ಮಹಾಸುಖದಾಯಕ ಪರಮಾತ್ಮನ ಪ್ರಸಾದದಿಂದಲೇ ಅನ್ಯವಿಷಯಗಳಲ್ಲಿ ಅಲಂಬುದ್ಧಿಯುಳ್ಳವನೋ ಅಂಥಾ ಅಸಂಪ್ರಜ್ಞಾತಸಮಾಧಿಸ್ಥನು ಅಥವಾ ಮತ್ತನು ಅವಶ್ಯಮಾಡಬೇಕಾದ ಕರ್ಮವು ಯಾವುದೂ ಇಲ್ಲ.

ವಿಶೇಷ:- (1) ಸಮಾಧಿಸ್ಥಯೋಗಿಯು ನಿತ್ಯಕರ್ಮವನ್ನು ಮಾಡಬೇಕೆಂಬ ನಿಯಮವಿಲ್ಲ. ಅಂಥವನಿಗೆ ಸಂಧ್ಯಾವಂದನಾದಿ ಕರ್ಮಪರಿತ್ಯಾಗ- ದಿಂದಲೂ ಪಾಪವಿಲ್ಲ. ವಿಧ್ಯುಕ್ತ ಕರ್ಮವನ್ನು ಎಲ್ಲರೂ ಮಾಡಬೇಕೆಂಬ ನಿಯಮಕ್ಕೆ ಅವನೂ ಮತ್ತು ಮುಕ್ತರೂ ಅಪವಾದರೂಪರು.

ಪ್ರಶ್ನೆ:- ಅದೇತಕ್ಕೆ ಸಮಾಧಿಸ್ಥಯೋಗಿಯು ಕರ್ಮವನ್ನು ಮಾಡಬೇಕಾಗಿಲ್ಲ?

ಉತ್ತರ:- ಶ್ರೀಕೃಷ್ಣನು ಹೇಳಿರುವ ''ಆತ್ಮರತಿಃ'', ''ಆತ್ಮಸಂತುಷ್ಟಃ'', 'ಆತ್ಮತೃಪ್ತಃ' ಎಂಬ ಪದಗಳು ಉತ್ತರವನ್ನು ಸೂಚಿಸುವುವು.

ಆತ್ಮರತಿಃ= ಎಲ್ಲರೂ ಭಗವದ್ದರ್ಶನಜನ್ಯಸುಖಕ್ಕಾಗಿ ಕರ್ಮಮಾಡುತ್ತಾರೆ. ಅಂಥಾ ಭಗವದ್ದರ್ಶನಮಾಡಿ ಸುಖಪಡುತ್ತಿರುವವನು ಸಮಾಧಿಸ್ಥಯೋಗಿಯು. ಆದ್ದರಿಂದ ಅವನು ಕರ್ಮಮಾಡಬೇಕಾದ್ದಿಲ್ಲ. ಉದಾ:- ಅನ್ನಕ್ಕಾಗಿ ಅಕ್ಕಿಯನ್ನು ಜನರು ಮನೆಮನೆಗೆ ಹೋಗಿ ಬೇಡುತ್ತಾರೆ. ಅನ್ನಮಾಡಿ ಊಟಮಾಡುತ್ತಿರು-ವವನು ಭಿಕ್ಷೆಗೇಕೆ ಹೋಗಬೇಕು? ಹಾಗೆಯೇ ಸಕಲಕರ್ಮಗಳಿಗೂ ಫಲವಾದ ಶ್ರೀಹರಿಯ ದರ್ಶನಮಾಡಿ ಸುಖಾನುಭವ ಮಾಡುತ್ತಿರುವುದರಿಂದ ಯೋಗಿಯು ಕರ್ಮಮಾಡಬೇಕಾಗಿಲ್ಲ.

ಪ್ರಶ್ನೆ:- ಹೋಗಲಿ. ಆತ್ಮದರ್ಶನವು ಒಂದು ಘಂಟೆ ಆಗಿ ಬೇಜಾರಾದಮೇಲೆ ಅದಕ್ಕಿಂತಲೂ ಹೆಚ್ಚು ಸುಖವನ್ನು ಹೊಂದಲು ಜ್ಯೋತಿಷ್ಟೋಮಾದಿ- ಗಳನ್ನು ಮಾಡಲಿ?

ಉತ್ತರ:-ಆತ್ಮಸಂತುಷ್ಟಃ= ಆತ್ಮದರ್ಶನವನ್ನು ಮಾಡುವವನಿಗೆ ಆಗುವಷ್ಟು ಸುಖವು ಇನ್ನು ಯಾವಕರ್ಮದಿಂದಲೂ ಯಾವ ಕಾರಣದಿಂದಲೂ ಯಾರ ಸಹವಾಸದಿಂದಲೂ ಆಗುವುದಿಲ್ಲ. ಆ ಸುಖಕ್ಕೆ ಬೇಜಾರೇ ಬರುವ ಹಾಗಿಲ್ಲ. ಅದು ಅಂಥಾ ಮಹಾಸುಖ. ಆದ್ದರಿಂದ ಯೋಗಿಯು 'ಆತ್ಮಸಂತುಷ್ಟ'ನಾಗಿರುವನು. ಹರಿದರ್ಶನಜನ್ಯಪರಮಾನಂದದಿಂದ ಪೂರ್ಣನಾಗಿರುವನು.

ಪ್ರಶ್ನೆ:- ಆದರೂ ಯೋಗಿಯು ವೈಚಿತ್ರ್ಯಕ್ಕೋ, ಸ್ವಲ್ಪ ಆಧಿಕ್ಯಕ್ಕೋ ಅದರ ಜೊತೆಗೆ ವಿಷಯಸುಖವನ್ನು ಅನುಭವಿಸಲಿ; ಅದಕ್ಕಾಗಿ ಕಣ್ಣು ಬಿಡಲಿ. ಸ್ವಲ್ಪಕರ್ಮವನ್ನು ಮಾಡಲಿ?

ಉತ್ತರ:-ಆತ್ಮತೃಪ್ತಿಃ :- ಅದೂ ಕೂಡುವುದಿಲ್ಲ. ಆತ್ಮನಾದ ನಾರಾಯಣನ ದರ್ಶನ ಮಾಡುತ್ತಿರುವವನಿಗೆ ಇನ್ನೂ ವಿಷಯಗಳೂ, ಆ ವಿಷಯಸುಖ ಗಳೂ ಬೇಕೆಂದೆನಿಸುವುದೇ ಇಲ್ಲ. ಉದಾ:- ರಾಜದರ್ಶನಮಾಡುತ್ತಿರುವಾಗ ಮದ್ಯಪಾನಿಯ ಸಂಗಡ ಪಗಡೆ ಆಡಬೇಕೆಂದು ಇಷ್ಟಬರುವುದೇ ಇಲ್ಲ. ಹಾಗೆ ಪರಬ್ರಹ್ಮದರ್ಶನ ಮಾಡಿದವನಿಗೆ 'ಇನ್ನು ಏನೂ ಬೇಡ, ನನಗಿರುವ ಈ ಸುಖ ಸಾಕು' ಎಂದು ಆತ್ಮತೃಪ್ತಿ ಎಂದರೆ ಅಲಂ ಬುದ್ಧಿ ಉಂಟಾಗುತ್ತೆ.

ಪ್ರಶ್ನೆ:- ಆದರೂ ಕರ್ಮಬಿಟ್ಟದ್ದಕ್ಕೆ ಪಾಪವಿಲ್ಲವೇ?

ಉತ್ತರ: ಇಲ್ಲ. ಅವನು ಆತ್ಮ ಎಂದರೆ ಸ್ವಾಮಿಯಾದ ನಾರಾಯಣನಲ್ಲಿ ರತಿಯುಳ್ಳವನಾಗಿದ್ದಾನೆ ಎಂದರೆ ಹೃದಯಗುಹೆಯಲ್ಲಿ ಏಕಾಂಕಸೇವೆಯನ್ನು ಮಾಡುತ್ತಾ ಕ್ರೀಡಿಸುತ್ತಿದ್ದಾನೆ. ಆದ್ದರಿಂದ ಶ್ರೀಹರಿಯ ಸೇವೆಯೇ ಆದ ನಿತ್ಯಕರ್ಮಾದಿ ಅಲ್ಪ ಕಾರ್ಯಗಳನ್ನು ಮಾಡದಿದ್ದರೆ ದೋಷವಿಲ್ಲ. ಉದಾ:-ಯಜಮಾನನ ಜೊತೆಯಲ್ಲಿಯೇ ಅವನ ಸಮ್ಮತಿ ತೆಗೆದುಕೊಂಡೇ ಯಜ್ಞಶಾಲೆಗೆ ದಂಪತಿಪೂಜೆಗಾಗಿ ಹೋಗುತ್ತಿರುವ ಪತ್ನಿಗೆ ಅಡಿಗೆ ಮಾಡಲಿಲ್ಲವೆಂದು ದಂಡವಾಗುವುದೇ? ಹಾಗೆ ಆತ್ಮಧ್ಯಾನರೂಪ ಮಹಾಕರ್ಮವನ್ನು ಮಾಡುತ್ತಿರುವ ಯೋಗಿಗೆ ಅನ್ಯಕರ್ಮವನ್ನು ಬಿಟ್ಟ ದೋಷವಿಲ್ಲ. ಯೋಗಿಗೇ ಹೀಗಿದ್ದ ಮೇಲೆ ಮುಕ್ತನಿಗೆ ಕರ್ಮಬಂಧವಿಲ್ಲವೆಂದು ಹೇಳಬೇಕಾದ್ದಿಲ್ಲ. ಅವನು ಹರಿದರ್ಶನದಿಂದ ಅಭಿವ್ಯಕ್ತ ಸ್ವಸ್ವರೂಪಾನಂದವುಳ್ಳವನು. ಆತ್ಮನಾದ ನಾರಾಯಣನ ಪ್ರಾಪ್ತಿಯಿಂದ ಕೃತಕೃತ್ಯನು. ಅವನಲ್ಲಿ ಮಹಾಪ್ರೀತಿಯುಳ್ಳವನು. ಅಂಥಾ ಪ್ರೇಮಪಾತ್ರನಿಗೆ ಹರಿಯು ಯಾವ ನಿಯಮವನ್ನೂ ಮಾಡುವುದಿಲ್ಲ. ಅವನಿಗೆ ದೋಷಲೇಶವೂ ಇಲ್ಲ.

(2) ಈ ಶ್ಲೋಕದಲ್ಲಿರುವ ಮಾನವಃ ಎಂಬ ಶಬ್ದಕ್ಕೆ ಎರಡು ಅರ್ಥ. (ಅ) ಮನು ಅವಬೋಧನೇ ಎಂಬ ಧಾತುವ್ಯಾಖ್ಯಾನವು. ಆದ್ದರಿಂದ ಅಪರೋಕ್ಷಜ್ಞಾನೀ ಎಂದು ಒಂದರ್ಥವು. (ಆ) ಮನನ ಫಲವನ್ನು ಹೊಂದಿದ ಮುಕ್ತನೆಂದು ಇನ್ನೊಂದು ಅರ್ಥ.

18) ಅವತಾರಿಕೆ:- ಸರಿ ಶ್ರೀಹರಿ! ಸಮಾಧಿಸ್ಥ ಯೋಗಿಯು ಆತ್ಮದರ್ಶನ ಜನಿತ ಆನಂದಪ್ರವಾಹದಲ್ಲಿ ಮುಳುಗಿದವನಾಗಿ ಪ್ರೇಮದಿಂದ ಅವನನ್ನು ನೋಡುತ್ತಾ ನಿತ್ಯಕರ್ಮದ ಕಾಲವನ್ನು ತಿಳಿಯದೇ ವರ್ಷಾಂತರ ಕಾಲವನ್ನು ಕಳೆಯುತ್ತಾನೆ. ಆದರೂ ಪ್ರಾಜ್ಞನಾದ ಅವನು ನಾನು ಸ್ವಾಮಿಯ ಕಾರ್ಯವನ್ನು ಬಿಡಬಾರದು, ಪ್ರಭುವೇನೋ ನಾನು ಸಂಧ್ಯಾವಂದನೆ ಮಾಡದಿದ್ದರೂ ದಂಡಮಾಡುವುದಿಲ್ಲ. ಆದರೂ ಮಹಾಪುಣ್ಯಕರವಾದ ನಿತ್ಯಕರ್ಮವನ್ನು ನಾನು ಬಿಡಬಾರದು ಎಂದು ಚಿಂತಿಸಿ, ಯಾರಾದರೂ ಶಿಷ್ಯನಿಗೆ 'ನನ್ನನ್ನು ಸಮಾಧಿದೆಶೆಯಿಂದ ಇಂಥಾ ಉಪಾಯದಿಂದ ಎಬ್ಬಿಸು' ಎಂದು ಆಜ್ಞೆಮಾಡಿ ಸಮಾಧಿಯಿಂದೆದ್ದು ನಿತ್ಯಕರ್ಮಗಳನ್ನು ಮಾಡಬಹುದಲ್ಲಾ! ಇದರಿಂದ ಅವನಿಗೆ ಜಗಚ್ಚಕ್ರವನ್ನು ನಡೆಸಿದ ಫಲವು ಬರುವುದು. ದೇವತೋಷಣವೂ ಉಂಟಾಗುವುದು. ಅಲ್ಲವೇ? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

''ನೈವ ತಸ್ಯಕೃತೇನಾರ್ಥೋ ನಾಕೃತೇನೇಹ ಕಶ್ಚನ । ನ ಚಾಸ್ಯ ಸರ್ವಭೂತೇಷು ಕಶ್ಚಿದರ್ಥವ್ಯಪಾಶ್ರಯಃ ॥ ''

ಅಸಂಪ್ರಜ್ಞಾತಸಮಾಧಿಸ್ಥನಿಗೆ ಸಮಾಧಿಯನ್ನು ಬಿಟ್ಟು , ಮುಕ್ತನಿಗೆ ಭಗವದ್ದರ್ಶನವನ್ನು ಬಿಟ್ಟು ಆಚರಿಸಲ್ಪಡುವ ಯಜ್ಞಾದಿಗಳಿಂದ ಪ್ರಯೋಜನವೇನೂ ಇರುವುದಿಲ್ಲ. (ಪರಮಾತ್ಮನ ದರ್ಶನಾರ್ಥವಾಗಿ ಯಜ್ಞಾದಿಗಳನ್ನಾಚರಿಸಬೇಕು. ಸರ್ವಕರ್ಮಗಳಿಗೆ

ಫಲರೂಪನಾದ ಪರಮಾತ್ಮನ ದರ್ಶನವೇ ಆಗುತ್ತಿರುವಾಗ ಅದನ್ನು ಬಿಟ್ಟು ಇನ್ನು ಯಾವ ಫಲಕ್ಕೋಸ್ಕರ ಯಜ್ಞಾದಿಗಳನ್ನು ಆಚರಿಸಬೇಕು? ಪರಮಾತ್ಮನ ದರ್ಶನ ಕ್ಕಿಂತ ಉತ್ತಮ ಫಲವು ಇಲ್ಲವೆಂದು ಭಾವ.) ಅಸಂಪ್ರಜ್ಞಾತಸಮಾಧಿಸ್ಥನಿಗೆ ಸಂಧ್ಯಾವಂದನಾದಿ ನಿತ್ಯಕರ್ಮಪರಿತ್ಯಾಗದಿಂದಲೂ ಪಾಪವಿಲ್ಲ. ಆತನಿಗೆ ದೇವತಾಗುರ್ವಾದಿಗಳ ದರ್ಶನ, ವಂದನ, ಸಂಭಾಷಣಾದಿಗಳಿಂದ ತಾನು ಅನುಭವಿಸುತ್ತಿರುವ ಬ್ರಹ್ಮದರ್ಶನಜನ್ಯಸುಖಲಾಭಕ್ಕಿಂತಲೂ ಅಧಿಕವಾದ ಲಾಭವು ಇರುವುದಿಲ್ಲ.

ವಿಶೇಷ:- ಹೀಗೆ ಭಗವದ್ದರ್ಶನವು ಎಲ್ಲಾ ಕರ್ಮಕ್ಕಿಂತಲೂ ಅಧಿಕ ಪುಣ್ಯಫಲವನ್ನು ಕೊಡುವುದು. ಆದ್ದರಿಂದ ಅವನು ಕೃತಕೃತ್ಯನು.

ವಿಜಯದಾಸರ ಸುಳಾದಿ (ಮುಕ್ತಪಥಯೋಗ್ಯಸುಳಾದಿ ಪೇ.34)

ಜಾತರಹಿತ ಶ್ರೀನಾಥನ ಪಾದವ । ಆತುಮದೊಳಗಿಟ್ಟು ಮಾತುಮಾತಿಗೆ ಬಲು । ಪ್ರೀತಿಲಿ ಲಕುಮೀಶ ಮಾತಾಪಿತನು ಸರ್ವ । ಈತನು ನಮಗೆಂದು ತಾ ತಿಳಿದವರಿಗೆ । ಯಾತಕೆ ಸ್ನಾನಸಂಧ್ಯಾನ ಕರ್ಮಂಗಳು । ಪ್ರಾತರಾರಂಭರಾತ್ರಿವಿಡಿದು ಮಯ್ಯ । ಘಾತಿಸಿಕೊಂಡೀಗ ಖಾತಿ ಪಡಿಸುವುದ್ಯಾಕೆ । ದಾತನಂತಿಪ್ಪನು ವಿಜಯವಿಠಲ ಸುರ । ವ್ರಾತಕ್ಕೆ ಮೀರಿದ ದಾತನು ಸರ್ವೇಶ ॥ 4 ॥

19) ಅವತಾರಿಕೆ:- ಹಾಗಾದರೆ ನಾನು ಏನುಮಾಡಬೇಕು? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ:-

'' ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।
ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥ 19 ॥''

ನೀನು ಮುಕ್ತನೂ ಅಲ್ಲ , ಮತ್ತು ಅಸಂಪ್ರಜ್ಞಾತಸಮಾಧಿಸ್ಥ ಯೋಗಿಯೂ ಅಲ್ಲವಾದ್ದರಿಂದ ಫಲಸ್ನೇಹರಹಿತನಾಗಿ ಕರ್ತವ್ಯಕರ್ಮವನ್ನು ನಿರಂತರ ''ಇದು ಭಗವತ್ಪೂಜೆಯೆಂಬ ಬುದ್ಧಿಯಿಂದ ಆಚರಿಸುವವನಾಗು. ಫಲಾಪೇಕ್ಷೆಯನ್ನು ಬಿಟ್ಟು ನಿಯತಕರ್ಮವನ್ನು ಮಾಡುವವನು (ಜ್ಞಾನದ್ವಾರಾ) ಪರಮಾತ್ಮನನ್ನು ಹೊಂದುತ್ತಾನೆ.

ವಿಶೇಷ:- (1) ಇಷ್ಟರಿಂದೇನು ಹೇಳಿದಂತಾಯಿತೆಂದರೆ:- ವಿಧ್ಯುಕ್ತಕರ್ಮತ್ಯಾಗವು ಯಾವರೀತಿಯಿಂದ ವಿಚಾರಮಾಡಿದರೂ ಯುಕ್ತವಲ್ಲ. ಕಾಮ್ಯಮಾರ್ಗದ ಆಚರಣೆಯು ಮುಮುಕ್ಷುವಿಗೆ ಅಯೋಗ್ಯವಾದದ್ದೇ. ಆದ್ದರಿಂದ ಫಲಾಪೇಕ್ಷೆಯನ್ನು ಬಿಟ್ಟು ವಿಧ್ಯುಕ್ತಕರ್ಮವನ್ನು ಪರಮಾತ್ಮನ ಸ್ವಾತಂತ್ರ್ಯಜ್ಞಾನಪೂರ್ವಕವಾಗಿ ಅನುಷ್ಠಾನಮಾಡಿ ಅವನ ಪಾದದಲ್ಲೇ ಸಮರ್ಪಿಸಿ ಈಶ್ವರನ ಪ್ರೀತಿಯನ್ನು ಸಂಪಾದಿಸಿದರೆ ಜ್ಞಾನದ್ವಾರಾ ಮುಕ್ತಿಯೂ ಆಗುತ್ತೆ.

(2) 'ಹಿ' ಎಂಬ ಶಬ್ದದಿಂದ ತಾನು ಹೇಳಿದ್ದೆಲ್ಲಾ ವೇದಪ್ರಸಿದ್ಧವೆಂದು ಶ್ರೀಕೃಷ್ಣನು ಸೂಚಿಸಿದ್ದಾನೆ.

20)ಅವತಾರಿಕೆ:- ಹೀಗೆ ನಿಷ್ಕಾಮಯೋಗವು ಮೋಕ್ಷಪ್ರಾಪ್ತಿಗೆ ಸರ್ವೋತ್ತಮ ಉಪಾಯವೆಂದು ಶ್ರೀಕೃಷ್ಣನು ತೋರಿಸಿದನು. ಈ ವಿಷಯದಲ್ಲಿ ಜ್ಞಾನಿಗಳ ಆಚರಣೆಯೂ ಒಂದು ಕೈಮುತ್ಯ ಯುಕ್ತಿಯನ್ನು ಪ್ರಕಾಶಿಸುತ್ತದೆ ಎಂದು ಪೂರ್ವಸಂಪ್ರದಾಯಜ್ಞರಾದ ಜನಕಾದಿಗಳು ಹೇಗೆ ಕರ್ಮ ಮಾಡುತ್ತಿದ್ದರೆಂಬುದನ್ನು ಶ್ರೀಕೃಷ್ಣನು ಹೇಳುತ್ತಾನೆ:-

''ಕರ್ಮಣೈವ ಹಿ ಸಂಸಿದ್ಧಿ ಮಾಸ್ಥಿತಾ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥''

ಜ್ಞಾನಿಗಳಾದ ಜನಕಾದಿಗಳೂ ಕೂಡ (ಜ್ಞಾನೋತ್ತರ ಕಾಲದಲ್ಲಿ ಅನುಷ್ಠಾನ ಮಾಡಿದ) ಕರ್ಮದಿಂದ ಪೂರ್ಣಸಿದ್ಧಿಯನ್ನು ಹೊಂದಿದರು. ಎಲೈ ಅರ್ಜುನನೇ! ಲೋಕಶಿಕ್ಷಣರೂಪವಾದ ಪ್ರಯೋಜನವೂ ಇರುವುದೆಂದು ತಿಳಿದು ನೀನು ಕರ್ಮವನ್ನು ಆಚರಿಸಬೇಕು.

ವಿಶೇಷ:ಬ್ರಹ್ಮಜ್ಞಾನಿಗಾದರೂ ನಿಷ್ಕಾಮಕರ್ಮಾನುಷ್ಠಾನವು ಮೋಕ್ಷದಲ್ಲಿ ಆನಂದೋನ್ನಾಹವನ್ನು ಉಂಟುಮಾಡುವುದು. ಇದು ಜ್ಞಾನಿಯ ಕರ್ಮಾಚರಣೆಗೆ ಒಂದು ಫಲ. ಎರಡನೆಯದು ಲೋಕಕ್ಕೆ ಸದ್ಬೋಧೆಯೂ ಆಗುವುದು.

21.ಜ್ಞಾನಿಯು ನಿಷ್ಕಾಮಧರ್ಮಾನುಷ್ಠಾನವನ್ನು ಮಾಡಿದರೆ ಲೋಕಕ್ಕೆ ಅದರಿಂದ ಹೇಗೆ ಉಪದೇಶವಾಗುವುದು? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

ಶ್ಲೋಕ: ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಾಃ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥21॥

ಬ್ರಹ್ಮಜ್ಞಾನಿಯು ಯಾವಯಾವ ಕರ್ಮವನ್ನು ಆಚರಿಸುತ್ತಾನೆಯೋ ಮತ್ತೂ ತನ್ನ ಆಚರಣೆಯಲ್ಲಿ, ಯಾವ ಗ್ರಂಥವನ್ನು ಆಧಾರವನ್ನಾಗಿ ಪ್ರಕಾಶಪಡಿಸುತ್ತಾನೆಯೋ

ಅಂಥಾ ಕರ್ಮವನ್ನೇ ಜನರು ಅವನನ್ನು ಅನುಸರಿಸಿ ಮಾಡುತ್ತಾರೆ. ಅವನು ನಂಬಿದ ಗ್ರಂಥಗಳನ್ನೇ ತಾವೂ ನಂಬುತ್ತಾರೆ.

ವಿಶೇಷ:- ಬ್ರಹ್ಮಜ್ಞಾನಿಗಳು ನಿಷ್ಕಾಮಧರ್ಮವನ್ನು ಅನುಷ್ಠಾನಮಾಡಿದರೆ ಅವನಲ್ಲಿ ಗೌರವವುಳ್ಳವರೆಲ್ಲರೂ ನಿಷ್ಕಾಮಧರ್ಮವು ಪರಮಶ್ರೇಷ್ಠವೆಂದು ತಿಳಿದು ಆಚರಿಸಿ ಉದ್ಧಾರವಾಗುತ್ತಾರೆ. ಅವನು ವೇದ, ಇತಿಹಾಸ,ಭಾಗವತಾದಿಗಳನ್ನು ಪ್ರವಚನ ಮಾಡಿ ಅದರಂತೆ ನಡೆಯುವುದನ್ನು ನೋಡಿ ಜನರು ವೇದಾದಿಗಳೇ ಯಥಾರ್ಥಜ್ಞಾನೋಪಾಯವು ಎಂದು ತಿಳಿಯುತ್ತಾರೆ. ಕೇವಲ ಗ್ರಂಥಗಳಿಂದ ವಿಷಯನಿರ್ಣಯಮಾಡುವುದು ಕಷ್ಟ. ನಿಜವಾಗಿ ಅನುಷ್ಠಾನಶೀಲರಾದ ಸಾಧುಗಳನ್ನು ನೋಡಿ ಜನರು ಹೆಚ್ಚಾಗಿ ಕಲಿಯುತ್ತಾರೆ. ಹೀಗೆ ಸಜ್ಜನರಿಗೆ ಶಿಕ್ಷಾರ್ಥವಾಗಿ ಜ್ಞಾನಿಯು ಕರ್ಮಗಳನ್ನು ಆಚರಿಸುವುದರಿಂದ, ಆತನಿಗೆ ಮೋಕ್ಷದಲ್ಲಿ ಆನಂದಾತಿಶಯವುಂಟು. ಜ್ಞಾನಿಯಾದ ನೀನೂ ಲೋಕಶಿಕ್ಷೆಗಾಗಿಯೂ ಕೂಡ ನಿಷ್ಕಾಮಯುದ್ಧಕರ್ಮವನ್ನು ಮಾಡುವುದು ಅವಶ್ಯಕ ಎಂದು ಭಾವ. ಲೋಕದ ವಿಷಯದಲ್ಲಿ ಜ್ಞಾನಿಗಳು ಹೀಗೆ ಕಾರುಣ್ಯವನ್ನು ತೋರಿಸಬೇಕು.

22.ಅವ:- ಲೋಕಶಿಕ್ಷೆಯು ಅಂಥಾ ಮಹತ್ಪ್ರಯೋಜನವುಳ್ಳ ವ್ಯಾಪಾರವೇ? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

ಶ್ಲೋಕ:- ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋಕೇಷು ಕಿಂಚನ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥22 ॥

ಅರ್ಜುನಾ! ನಾನು ಮತ್ತೊಬ್ಬರ ನಿರ್ಬಂಧಕ್ಕೆ ವಶನಾಗಿ, ಯಾವುದಾದರೂ ಪ್ರಯೋಜನವನ್ನು ಉದ್ದೇಶಮಾಡಿ ಮಾಡಬೇಕಾದ ಒಂದು ಕರ್ಮವೂ ಮೂರುಲೋಕದಲ್ಲಿಯೂ ಇಲ್ಲ. ಏಕೆಂದರೆ, ನಾನು ಹೊಂದದೇ ಇರತಕ್ಕ ಪ್ರಯೋಜನಗಳು ಯಾವುವೂ ಇಲ್ಲ. ನಾನು ಪೂರ್ಣಲಾಭನು. ನಾನು ಕರ್ಮಬದ್ಧನಲ್ಲವಾದರೂ ಕರ್ಮದಲ್ಲಿ ಪ್ರವರ್ತಿಸುತ್ತೇನೆ.(ವಿಹಿತ ಕರ್ಮ ನಾನು ಮಾಡುತ್ತಲೇ ಇರುತ್ತೇನೆ.)

ವಿಶೇಷ:- ಜ್ಞಾನಿಯು ನಿಷ್ಕಾಮಕರ್ಮಮಾಡುವುದರಿಂದ ಮುಕ್ತಿಯಲ್ಲಿ ಆನಂದೋತ್ಸಾಹ ಹೊಂದುತ್ತಾನೆಂದು ಹೇಳಲ್ಪಟ್ಟಿತು. ಒಂದು ವೇಳೆ ಅವನ ಕರ್ಮಕ್ಕೆ ಫಲವಿಲ್ಲವೆಂದು ಇಟ್ಟುಕೊಂಡರೂ ಲೋಕಕ್ಕೆ ಕರ್ಮೋಪದೇಶಾರ್ಥವಾಗಿ ತಾನೂ ಸತ್ಕರ್ಮಾನುಷ್ಠಾನವನ್ನು ಮಾಡಬೇಕು. ಆದರೆ ಇಲ್ಲಿ ಶಂಕೆ ''ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೇ'' ಎಂದಿದೆ. ಅಂದ ಮೇಲೆ ತನಗೆ ನಿಷ್ಪ್ರಯೋಜನವಾದ ವ್ಯಾಪಾರವನ್ನು ಜ್ಞಾನಿಯು ಏಕೆ ಮಾಡಬೇಕೆಂದರೆ ಈ ಶ್ಲೋಕದಲ್ಲಿ ಶ್ರೀ ಕೃಷ್ಣನು ನಾನು ಹೇಗೆ ಕಾರುಣ್ಯದಿಂದ ಏನೂ ಪ್ರಯೋಜನ ನನಗಿಲ್ಲದಿದ್ದರೂ ಕರ್ಮದಲ್ಲಿ ಪ್ರವೃತ್ತನಾಗುತ್ತಿದ್ದೇನೋ ಹಾಗೆಯೇ ಜ್ಞಾನಿಯೂ ಕೂಡ ಲೋಕೋದ್ಧಾರಾರ್ಥವಾಗಿ ವಿಧ್ಯುಕ್ತಕರ್ಮಾನುಷ್ಠಾನವನ್ನು ಮಾಡಬೇಕು.'' ಎಂದು ತನ್ನನ್ನೇ ದೃಷ್ಟಾಂತವನ್ನಾಗಿ ಕೊಟ್ಟು ಹೇಳಿರುತ್ತಾನೆ. ತನ್ನ ಪೂರ್ಣಕಾಮತ್ವವನ್ನು ತಾನೇ ಹೇಳಿಕೊಂಡಿದ್ದರಿಂದ ಆತನೇ ಪರಬ್ರಹ್ಮನೆಂಬುದೂ ಸ್ಪಷ್ಟವಾಯ್ತು.

23,24:- ಅವತಾರಿಕೆ: ದೇವರು ಸತ್ಕರ್ಮಾನುಷ್ಠಾನಮಾಡಿ ಲೋಕಕ್ಕೆ ಶಿಕ್ಷೆಯನ್ನು ಕೊಡದಿದ್ದರೆ ಆಗುವ ಅನರ್ಥವೇನೆಂದರೆ ಶ್ರೀಕೃಷ್ಣನು ಹೇಳುತ್ತಾನೆ.

ಯದಿಹ್ಯಹಂ ನ ವರ್ತೇಯಂ ಜಾತುಕರ್ಮಣ್ಯತಂದ್ರಿತಃ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥಸರ್ವಶಃ ॥ 23 ॥
ಉತ್ಸೀದೇಯುರಿಮೇಲೋಕಾ ನ ಕುರ್ಯಾಂ ಕರ್ಮಚೇದಹಂ।
ಸಂಕರಸ್ಯ ಚ ಕರ್ತಾಸ್ಯಾಮುಪಹನ್ಯಾಮಿಮಾಃ ಪ್ರಜಾಃ॥ 24 ॥

ಎಲೈ ಪಾರ್ಥ! (ಯದ್ಯಪಿ ನಾನು ಕರ್ಮಬಂಧರಹಿತನು. ಹಾಗಿದ್ದರೂ) ನಾನು ಸ್ವವರ್ಣಾಶ್ರಮೋಚಿತವಾದ ವಿಹಿತಕರ್ಮವನ್ನು ಆಚರಿಸದಿದ್ದರೆ, ಸಕಲಮನುಷ್ಯರೂ ನನ್ನನ್ನು ನೋಡಿಕೊಂಡು ಸ್ವವರ್ಣಾಶ್ರಮೋಚಿತವಾದ ಕರ್ಮವನ್ನು ಪರಿತ್ಯಾಗ ಮಾಡಿಬಿಡುವರು. ಹಾಗೆ ಚತುರ್ವರ್ಣದವರೂ ತಮ್ಮತಮ್ಮ ವಿಹಿತಕರ್ಮಾನುಷ್ಠಾನವನ್ನು ಮಾಡದಿದ್ದರೆ ಘೋರನರಕಪ್ರಾಪ್ತಿರೂಪವಾದ ನಾಶವನ್ನು ಹೊಂದಿಬಿಡುವರು. ನಾನೇ ವರ್ಣಸಾಂಕರ್ಯವನ್ನು ಮಾಡಿದ ಹಾಗೆ ಆಗುವುದು. ಮತ್ತೂ ಸಕಲಪ್ರಜೆಗಳನ್ನೂ ನಾನೇ ನರಕಕ್ಕೆ ಕೆಡವಿದಂತಾಗುವುದು.

ವಿಶೇಷ 1:- ಕರ್ಮಾಕರಣದಿಂದ ನರಕಪ್ರಾಪ್ತಿರೂಪವಾದ ಫಲವು. ಇಹಲೋಕದಲ್ಲಿ ಜಾತಿವಿವೇಕವು ತಪ್ಪಿಹೋಗಿ ವರ್ಣಸಾಂಕರ್ಯಪ್ರಾಪ್ತಿದ್ವಾರಾ ಪರ್ಯವಸಾನದಲ್ಲಿ ಸರ್ವರಿಗೂ ನರಕಪ್ರಾಪ್ತಿಯು; ಹೀಗೆ ಉಭಯವಿಧದಿಂದ ಜನರಿಗೆ ದುಃಖಬರುವುದೆಂದು ಪೂರ್ಣಕಾಮನಾದ ಪರಮಾತ್ಮನೂ ಕೂಡ ರಾಮಕೃಷ್ಣಾದ್ಯವತಾರಗಳಲ್ಲಿ ಲೋಕಸಂಗ್ರಹಾರ್ಥವಾಗಿ ವಿಹಿತಕರ್ಮಾನುಷ್ಠಾನ ಮಾಡುತ್ತಲೇ ಇರುವನು ಎಂದು ಶ್ರೀಕೃಷ್ಣನ ಈ ವಾಕ್ಯಗಳಿಂದ ನಿಶ್ಚಿತವಾಗುತ್ತದೆ.

ವಿಶೇಷ2 :- ಅರ್ಜುನನು ''ಯುದ್ಧಮಾಡಿದರೆ ವರ್ಣಸಾಂಕರ್ಯವು ಬರುವುದೆಂದು ಹೇಳಿದ್ದರೂ, ಆ ಯುದ್ಧವು ಪರಮಧರ್ಮವಾದ್ದರಿಂದ ಅದರಿಂದುಂಟಾಗುವ ಅನರ್ಥವನ್ನು ಪರಿಗಣಿಸದೇ ಯುದ್ಧವನ್ನು ಮಾಡಬೇಕೆಂದು ಶ್ರೀಕೃಷ್ಣನು ಬೋಧಿಸಿದನು. ಈಗ 'ಜ್ಞಾನಿಯು ಕರ್ಮಮಾಡದಿದ್ದರೆ ಲೋಕದಲ್ಲಿ ಅವನ ದುಷ್ಟ ಉದಾಹರಣೆಯಿಂದ ಎಲ್ಲರೂ ಭ್ರಷ್ಟರಾಗಿ ವರ್ಣಸಾಂಕರ್ಯವು ಬರುವುದು ಎಂದೂ, ಅಂಥಾ ವರ್ಣಸಾಂಕರ್ಯವನ್ನು ಅವನು ತನ್ನ ಪ್ರಯತ್ನವಿಶೇಷದಿಂದ ತಪ್ಪಿಸಬೇಕೆಂದೂ ಬೋಧಿಸುತ್ತಿದ್ದಾನೆ. ಕರ್ತವ್ಯ ಧರ್ಮವನ್ನು ಮಾಡಿತೋರಿಸಿ ಅನ್ಯಥಾ ಬರುವ ವರ್ಣಸಾಂಕರ್ಯವನ್ನು ತಪ್ಪಿಸುವುದು ಒಳ್ಳೆಯದು. ಅವಶ್ಯ ಕರ್ತವ್ಯವಾದ ವರ್ಣಧರ್ಮಾನುಷ್ಠಾನವನ್ನು ಮಾಡಿದರೆ ವರ್ಣಸಾಂಕರ್ಯವು ಬಂದುಬಿಡುವದಲ್ಲಾ ಎಂದು ತಿಳಿದು ಕರ್ತವ್ಯಧರ್ಮವನ್ನು ಬಿಡುವುದು ನರಕಪ್ರದವು. ಮುಂದೆ ಒಂದು ಅನರ್ಥವಾಗುತ್ತೆಂದು ತಿಳಿದು ಅದನ್ನು ತಪ್ಪಿಸಬೇಕೆಂದು ಈಗ ಅನ್ಯಾಯ ಮಾಡಬಾರದು. ಮಾಡಬೇಕಾದ ಧರ್ಮವನ್ನು ಈಗ ಬಿಡಬಾರದು. ದೃಷ್ಟಾಂತ ಹರಿಜನರನ್ನು ಬ್ರಾಹ್ಮಣರನ್ನಾಗಿ ಮಾಡದೇ ಇದ್ದರೆ ಅವರೆಲ್ಲಾ ಕ್ರಿಸ್ತರಾಗುವರೆಂದು ಅವರನ್ನು ಬ್ರಾಹ್ಮಣರನ್ನಾಗಿ ಮಾಡುವುದಾಗಲೀ, ನಾವು ಬ್ರಾಹ್ಮಣ್ಯವನ್ನು ಬಿಟ್ಟು ಎಲ್ಲರಜೊತೆಯಲ್ಲಿ ಬೆರೆಯದೇ ಇದ್ದರೆ ಲೋಕಸೇವೆಯೇ ತಪ್ಪಿಹೋಗುತ್ತೆ, ಬರತಕ್ಕ ಸ್ವಾತಂತ್ರ್ಯಕ್ಕೆ ಕಲ್ಲುಬೀಳುತ್ತದೆಯೆಂದು ತಿಳಿದು ಬ್ರಾಹ್ಮಣ್ಯವನ್ನು ಬಿಡುವುದು ಉಚಿತವಲ್ಲ. ನರಕಪ್ರದವೇ ಸರಿ. ಆದರೆ ಸ್ವಾರ್ಥತ್ಯಾಗಮಾಡಿ ಧರ್ಮವನ್ನು ಬಿಡದಹಾಗೆ ಲೋಕಸೇವೆಯನ್ನು ಮಾಡಬೇಕೆ ಹೊರತು ಧರ್ಮವನ್ನು ಬಿಟ್ಟು ಮಾಡುವುದಲ್ಲ. ಧರ್ಮವನ್ನು ಬಿಟ್ಟರೆ (1)ಧರ್ಮದ್ರೋಹ (2)ಧರ್ಮಪಾಲಕ ವಿಷ್ಣುದ್ರೋಹ (3)ಇವನ ನಡತೆಯನ್ನುನೋಡಿ ಇತರರು ನಡೆದು ಹಾಳಾಗಿ ಲೋಕನಾಶಮಾಡಿದ ದೋಷ- ಈ ಮೂರೂ ದೋಷವು ಬರುತ್ತೆ. ಏವಂ ಚ 'ಅರ್ಜುನಾ! ನೀನು ಯುದ್ಧಮಾಡಿದರೆ, ಬರುವ ವರ್ಣಸಾಂಕರ್ಯ ತಪ್ಪುತ್ತೆ. ಏಕೆಂದರೆ ನಿನ್ನ ನೋಡಿದ ಜನರು 'ಅರ್ಜುನನಿಗೇನೂ ಆಗಬೇಕಿಲ್ಲವಾದರೂ ತನ್ನ ಧರ್ಮಬಿಡದಂತೆ, ಅದಕ್ಕಾಗಿ ಯುದ್ಧಮಾಡಿದ್ದಾನೆ. ಅಂಥವರೇ ಹೀಗೆ ನಡೆದಮೇಲೆ ನಾವು ಧರ್ಮವನ್ನು ಬಿಡುವುದೇ ಎಂದಿಗೂ ಸರಿಯಲ್ಲ' ಎನ್ನುವರು. ಹಾಗೆ ನಡೆದುಕೊಂಡರೆ (ಆಶ್ರಮಧರ್ಮಾನುಷ್ಠಾನ ಮಾಡಿದರೆ) ಧರ್ಮಸಂಸ್ಥಾಪನೆಯಾಗುವುದರಿಂದ ವರ್ಣಸಾಂಕರ್ಯದ ಪ್ರಸಕ್ತಿಯೇ ಇರುವುದಿಲ್ಲ. ಮತ್ತೂ ಈ ಶ್ಲೋಕಗಳಿಂದ ಅರ್ಜುನನ ಒಂದು ಚಿಂತೆಗೂ ಉತ್ತರವನ್ನು ಕೊಟ್ಟಂತಾಯಿತು. ಯುದ್ಧಮಾಡಿದರೆ ವರ್ಣಸಾಂಕರ್ಯಬರುತ್ತೆ ಎಂದು ಅರ್ಜುನನು ಹೇಳಿದರೆ, ಯುದ್ಧಮಾಡದಿದ್ದರೆ ವರ್ಣಸಾಂಕರ್ಯಬರುತ್ತೆ ಎಂದು ಶ್ರೀಕೃಷ್ಣನು ಹೇಳಿದ್ದಾನೆ.

25 ಅವತಾರಿಕೆ:- ಮಹಾಸ್ವಾಮಿ! ಹೀಗೆ ನೀನು ಹೇಳಿದಮೇಲೆ ವಿದ್ವಾಂಸನಿಗೂ ಪಾಮರನಿಗೂ ಏನೂ ವ್ಯತ್ಯಾಸವೇ ಇಲ್ಲವೆಂದಾಯಿತು. ಅವಿದ್ವಾಂಸರು ಸರ್ವದಾ ಕರ್ಮಗಳನ್ನು ನರಕಭಯದಿಂದ ಮಾಡುತ್ತಿರುತ್ತಾರೆ. ವಿದ್ವಾಂಸನಾದರೆ ಇಂಥ ಕಷ್ಟವು ತಪ್ಪಿ ಸ್ವಚ್ಛಂದವಾಗಿರಬಹುದೆಂದು ನಾನು ತಿಳಿದಿದ್ದೆ. ವಿದ್ವಾಂಸನಾದರೆ ಮನಸ್ಸು ಬಂದಾಗ ಸ್ನಾನಮಾಡಬಹುದು, ಮನಸ್ಸು ಬಂದಾಗ ಕ್ಷೌರಮಾಡಿಕೊಳ್ಳಬಹುದು(ಎಲ್ಲಾ ಧರ್ಮಶಾಸ್ತ್ರಗಳಲ್ಲಿರುವುದನ್ನೂ ಸ್ವಲ್ಪಸ್ವಲ್ಪ ತೆಗೆದುಕೊಂಡು ಒಂದು ಗ್ರಂಥವನ್ನಾಗಿ ಸಂಗ್ರಹಿಸಿ ಅದಕ್ಕೆ ಧರ್ಮಸಿಂಧು ಎಂದು ಹೆಸರಿಟ್ಟು ಆ ಸಂಗ್ರಹಕಾರನು ಅಮಾವಾಸ್ಯೆ ಕ್ಷೌರಮಾಡಿಸಿಕೊಳ್ಳುತ್ತಿದ್ದನು. ಯಾರೋ ಬಂದು 'ದೋಷವಲ್ಲವೇ' ಎಂದು ಕೇಳಲು , ಧರ್ಮಸಿಂಧುಕಾರನು 'ನನಗೆ ಇವತ್ತು ಇದರಿಂದ ಬರುವ ದೋಷವನ್ನು ನನ್ನ ಗ್ರಂಥ ಓದಿ ಜನಗಳು ಧರ್ಮದಿಂದ ನಡೆದು, ಅದರಿಂದ ನನಗೆ ಬರುವ ಪುಣ್ಯವು ಪರಿಹರಿಸುತ್ತದೆ ಎಂದನು). ಮನಸ್ಸು ಬಂದಂತೆ ಸ್ತ್ರೀಭೋಗದಲ್ಲಿ ರತನಾಗಬಹುದು ಎಂದು ನಾನು ತಿಳಿದಿದ್ದೆ. ನೀನು ಈಗ ಹೇಳಿದ್ದನ್ನು ನೋಡಿದರೆ ವಿದ್ವಾಂಸನೂ ಕೂಡ ಸ್ವಲ್ಪವೂ ತಪ್ಪದೇ ನಿತ್ಯಕರ್ಮಾನುಷ್ಠಾನವನ್ನು ಅವಿದ್ವಾಂಸನಿಗಿಂತ ಹೆಚ್ಚಾಗಿಯೂ ಹೆಚ್ಚುಚೆನ್ನಾಗಿಯೂ ಮಾಡಬೇಕೆಂದಾಯಿತು. ಏಕೆಂದರೆ, ವಿದ್ವಾಂಸರು ಲೋಕಸಂಗ್ರಹಾರ್ಥವಾಗಿ ಕರ್ಮಮಾಡಬೇಕಾಗಿದೆ. ಲೋಕದವರೆಲ್ಲಾ ನೋಡಿ ಕಲಿಯುವಂತೆ ಕರ್ಮಮಾಡಬೇಕಾದರೆ ಆತನು ಹೆಚ್ಚಾಗಿ (ಮೃತ್ತಿಕಾಶೌಚ ಬಲಗೈಗೆ 5ಸಲ ಹಚ್ಚುವವನು ಲೋಕದವರಿಗಾಗಿ 10ಸಲ ಹಚ್ಚಿಕೊಳ್ಳಬೇಕು) ಬಹು ಅಚ್ಚುಕಟ್ಟಾಗಿ ಆಚಾರಪೂರ್ವಕವಾಗಿ ವಿಧ್ಯುಕ್ತರೀತಿಯಲ್ಲಿ ರಾತ್ರಿಹಗಲು ದುಡಿಯಬೇಕು. ಇಲ್ಲದಿದ್ದರೆ ಅವನು ಲೋಕಕ್ಕೆ ನಿದರ್ಶನರೂಪನಾಗಲಾರನು. ಏವಂ ಚ ವಿದ್ವಾಂಸನ ಹಣೇಬರಹ ಪಾಮರನಿಗಿಂತ ಕೀಳಾಯಿತು. ಅವನಿಗೂ ಅಜ್ಞನಿಗೂ ಕರ್ಮಮಾಡುವುದರಲ್ಲಿ ಭೇದವೇನಾಯಿತು. ಅವನೂ ಕೂಲಿ ಆಳು, ಇವನೂ ಕೂಲಿ ಆಳು? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

ಸಕ್ತಾಃ ಕರ್ಮಣ್ಯವಿದ್ವಾಂಸಾ ಯಥಾ ಕುರ್ವಂತಿ ಭಾರತ।

ಕುರ್ಯಾದ್ವಿದ್ವಾಂಸ್ತಥಾಽಸಕ್ತಶ್ಚಿಕೀರ್ಷುರ್ಲೋಕಸಂಗ್ರಹಂ॥

ಅಜ್ಞಾನಿಗಳು ಕರ್ಮಫಲದಲ್ಲಿ ಸ್ನೇಹದಿಂದ ಯುಕ್ತರಾಗಿ ಕರ್ಮಾನುಷ್ಠಾನವನ್ನು ಮಾಡುತ್ತಾರೆ. ಜ್ಞಾನಿಯು ಕರ್ಮಫಲಾಪೇಕ್ಷೆರಹಿತನಾಗಿ ಲೋಕಶಿಕ್ಷಣವನ್ನು ಇಚ್ಛಿಸಿ ಸರ್ವನಿತ್ಯನೈಮಿತ್ತಿಕಕರ್ಮಗಳನ್ನೂ ಕೂಡ ಅನುಷ್ಠಾನ ಮಾಡಬೇಕು.

ವಿಶೇಷ:- ಜ್ಞಾನಿಯೂ ಕರ್ಮಮಾಡುತ್ತಾನೆ. ಅಜ್ಞಾನಿಯೂ ಕರ್ಮಮಾಡುತ್ತಾನೆ. ಇನ್ನು ಇವರಿಬ್ಬರಲ್ಲಿ ವ್ಯತ್ಯಾಸವೇನು? ಎಂಬ

ಪ್ರಶ್ನೆಗೆ''ಕರ್ಮಣಿ'' ''ಅಸಕ್ತಃ'' ಎಂಬ ಎರಡು ಪದಗಳಿಂದ ಶ್ರೀಹರಿಯು ಉತ್ತರವನ್ನು ಸೂಚಿಸಿದ್ದಾನೆ. ಅಜ್ಞರು ಕರ್ಮಫಲದಲ್ಲಿ ಆಶೆಯಿಂದ ಕರ್ಮಮಾಡುತ್ತಾರೆ. ಕೂಲಿ ಆಳು 8ರೂಪಾಯಿಗಳ ಆಶೆಯಿಂದ ಯಜಮಾನನ ಮನೆಯಲ್ಲಿ ಅಡಿಗೆಮಾಡಿ ದುಡಿಯುವಂತೆ, ಅವನಿಗೆ ಇದು ನನ್ನ ಮನೆ ಎಂಬ ಅಭಿಮಾನವಿಲ್ಲ. ಆ ಮನೆಯ ಜನರಲ್ಲಿ ಪ್ರೇಮವಿಲ್ಲ. ಯಜಮಾನನ ಮನೆಯಲ್ಲಿ ಚಿರೋಟಿಮಾಡುತ್ತಿರುವಾಗ ನನ್ನ ಮಕ್ಕಳಿಗೆ ಇಲ್ಲದೇ ಹೋಗುತ್ತಲ್ಲಾ ಎಂಬ ಚಿಂತೆಯಿರುತ್ತೆ. ಇಂಥಾ ತುಚ್ಛವಾದ ಕೂಲಿಗೆ ಸದೃಶವಾದ ಐಹಿಕಫಲಕ್ಕೋಸ್ಕರ ದೇವರನ್ನು ಕರ್ಮಗಳಿಂದ ಸಂತೋಷ ಪಡಿಸುತ್ತಾನೆ. ಆದರೆ ಜ್ಞಾನಿಯು ಮನೆಯಲ್ಲಿನ ಧರ್ಮಪತ್ನಿಯು ದುಡಿಯುವಂತೆ ಅಸಕ್ತಃ=ನಾರಾಯಣನಲ್ಲಿ ಅನುರಾಗವುಳ್ಳವನಾಗಿ ಅವನ ಪ್ರೇಮಾಕಾಂಕ್ಷಿಯಾಗಿ ಅವನಿಂದ ಅಲ್ಪಧನಕನಕಾದಿಗಳನ್ನು ಕೋರದೇ ಸರ್ವದಾ ಇತರರಿಗೂ ಬುದ್ಧಿಕಲಿಸುವಂತೆ ದುಡಿಯುವನು. (ಜ್ಞಾನಿಯು ಪರಬ್ರಹ್ಮನಿಗೆ ಧರ್ಮಪತ್ನಿಯಂತೆ ಎಂಬುದಕ್ಕೆ ವ್ಯಾಸರಾಜರ ಪದವನ್ನು ನೋಡಿ:- ರಾಗ ಧನ್ಯಾಸಿ. ಅಟ ತಾಳ

ಎಂದೆಂದೆನ್ನ ಮನದಿಂದ ಅಗಲದಿರೋ। ನಂದನಂದನನೇ ಆನಂದ ಮೂರುತಿಯೇ॥ಪ॥

ಬಹುಕಾಲ ನಿನ್ನಶ್ರವಣವೆಂಬ ಹೊನ್ನೋಲೆಯ। ಬಹುಮಾನದಿಂದೆನ್ನ ಕಿವಿಯೊಳಿಟ್ಟು। ಮಹಿತ ಮಂಗಳಸೂತ್ರವೆಂಬೋ ದಾಸ್ಯವನ್ನು। ಮಹದಾನಂದದಿ ಎನ್ನ ಕೊರಳೊಳ್ ಕಟ್ಟಿದೆಯಾಗಿ ॥1॥

ಸುಲಲಿತ ಸ್ಮರಣೆಯೆಂಬ ಭೂಷಣವಿತ್ತು। ಸಲಹಿದೆ ಬಹುಪ್ರೀತಿ ಸಖಿಯೆಂದೆನ್ನ। ಬೆಲೆಯಿಲ್ಲದ ಸುಜ್ಞಾನನಿಧಿಯಿತ್ತು ಜಲಜಾಕ್ಷ
ಎನ್ನನು ಒಲಿದು ಆಳಿದೆಯಾಗಿ ॥2॥

ಎಲ್ಲಿ ನೀ ನಿಲಿಸಿದರೆ ನನಗೇನು ಭಯವಿಲ್ಲ। ಬಲ್ಲನೋ ವಿಶ್ವವ್ಯಾಪಕನೆಂಬುದ।
ಸಲ್ಲದೋ ಈ ಮುನಿಸೆನ್ನೊಳು ಸಿರಿಕೃಷ್ಣ। ಒಲ್ಲದಿದ್ದರೆ ನಿನ್ನ ಸೆರಗಪಿಡಿದೆಳೆವೆ ॥3॥

ಪಾಂಡವರ ಧರ್ಮಪತ್ನಿಯಾದ ದ್ರೌಪದಿಯು ಬೆಳಗಿನಜಾವ ಎದ್ದರೆ ರಾತ್ರಿಯವರೆಗೂ ಕೆಲಸಮಾಡುವಳು. ಯಜಮಾನರು ಕೈ ಖರ್ಚಿಗೆ ರುಪಾಯಿ ಕೊಡುವನು-ಸಿನಿಮಾಕ್ಕೆ ಒಯ್ಯುವನು, ಕೊರಳಿಗೆ ಚೈನ್ ಮಾಡಿಸಿಕೊಡುವನು ಎಂಬ ಭಾವದಿಂದ ಕೆಲಸಮಾಡುವುದಿಲ್ಲ. ನನ್ನ ಮನೆ. ನನ್ನ ಯಜಮಾನನು ಪ್ರೀತಿಮಾಡುತ್ತಾನೆ ಎಂಬ ಭಾವದಿಂದ ಮಕ್ಕಳಿಗೂ ಬುದ್ಧಿಕಲಿಸುವಂತೆ ಕೆಲಸಮಾಡುತ್ತಾಳೆ. ಅವನಿಗೆ ಪತಿಪ್ರೇಮ, ಪಾತಿವ್ರತ್ಯದ ಪ್ರಭಾವದಿಂದ ಮೋಕ್ಷಾದಿಪುರುಷಾರ್ಥವೇ ಫಲ. ಹೀಗೆ ಜ್ಞಾನಿಯೂ ಅಜ್ಞಾನಿಯಂತೆ ಕರ್ಮಮಾಡಲೇ ಬೇಕು. ಮನೋಭಾವಮಾತ್ರ ಅಜ್ಞಾನಿಗಿರುವಂತೆ ಇರಬಾರದು ಎಂದು ಶ್ರೀಕೃಷ್ಣನ ಭಾವ।

26. ಅವತಾರಿಕೆ:- ಕೃಷ್ಣಾ! ಯಜ್ಞಾದಿಕರ್ಮಗಳನ್ನು ಜ್ಞಾನಿಯು ಮಾಡಲಿ. ಆದರಿಂದ ಅವನಿಗೆ ಪ್ರಯೋಜನವುಂಟು. ನಿರಂತರ ಧ್ಯಾನಶೀಲನಾದ ಜ್ಞಾನಿಯು ಕೆಲವು ನಿತ್ಯಕರ್ಮವನ್ನು ಬಿಟ್ಟರೆ ಏನು? ಅವುಗಳಿಂದ ಅವನಿಗೆ ಏನೂ ಪ್ರಯೋಜನವಿಲ್ಲವಲ್ಲಾ! ಅವುಗಳ ಹವ್ಯಾಸದಿಂದ ಧ್ಯಾನಕ್ಕೆ ಸ್ವಲ್ಪ ಅಡಚಣೆಯೂ ಉಂಟಲ್ಲಾ ಎಂದರೆ ಶ್ರೀಕೃಷ್ಣನು ಹೇಳುತ್ತಾನೆ:-

ಶ್ಲೋಕ:- ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ।
ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಃ ಸಮಾಚರನ್ ॥

ಜ್ಞಾನಿಯು ತಾನುನಿತ್ಯಕರ್ಮವನ್ನು ಪರಿತ್ಯಾಗವನ್ನು ಮಾಡಿ ಅಜ್ಞಾನಿಗಳ ಮನಸ್ಸಿನಲ್ಲಿ 'ಕರ್ಮದಿಂದೇನು ಪ್ರಯೋಜನ'ಎಂಬ ವಿಪರೀತಬುದ್ಧಿಯನ್ನು ಹುಟ್ಟಿಸಬಾರದು ಮತ್ತು ಪರಮಾತ್ಮನಲ್ಲಿ ಮನಸ್ಸನ್ನಿಟ್ಟು ಭಗವದರ್ಪಣಾದಿಯೋಗಸಹಿತನಾಗಿ ಸಕಲಕರ್ಮಗಳನ್ನೂ ಸಮೀಚೀನವಾಗಿ ಆಚರಿಸಬೇಕು.

ವಿಶೇಷ:- ಮಗನು ಖಾಯಿಲೆಬಿದ್ದಿದ್ದಾಗ ಆರೋಗ್ಯವಂತನಾದ ತಂದೆಗೆ ಔಷಧಿಬೇಕಾಗಿಲ್ಲ. ಆದರೂ ಮಗುವು ಔಷಧವನ್ನು ಸೇವಿಸಲಿ ಎಂಬ ಭಾವದಿಂದ ತಂದೆಯು 'ಮಗೂ! ಇಲ್ಲಿನೋಡು ತುಂಬಾ ಸಿಹಿಯಾದ ಔಷಧಿ ನಾನು ತಿನ್ನುತ್ತೇನೆ ನೋಡು.' ಎಂದು ಬಾಯಲ್ಲಿ ಹಾಕಿಕೊಳ್ಳುವನು. ಪುತ್ರನ ಕೈಲಿ ಔಷಧಿ ಯನ್ನು ತಿನ್ನಿಸುವಂಥಾ ಉಪಾಯಮಾಡುವವನೇ ನಿಜತಂದೆಯು. ಹೀಗೆ ನಿಜವಾದ ಜ್ಞಾನಿಯು ಸಕಲಕರ್ಮಗಳನ್ನೂ ತಾನು ಅನುಷ್ಠಾನಮಾಡಿ ಇತರರಿಂದ ಅನುಷ್ಠಾನಮಾಡಿಸಬೇಕು. ಆ ಕರ್ಮಗಳು ತಮಗೆ ಅಪ್ರಯೋಜಕವಾದರೂ, ಎಳ್ಳಷ್ಟು ಹಿಂಸೆಯಾದರೂ ಅವುಗಳನ್ನು ತಾನು ಬಿಡಬಾರದು. ಹಾಗೆ ಬಿಟ್ಟುಬಿಟ್ಟರೆ ಇವನನ್ನು ನೋಡಿಕೊಂಡು ಇತರರೂ ಬಿಟ್ಟು ಅವರೂ ಅದನ್ನು ಜೀರ್ಣಿಸಿಕೊಳ್ಳಲಾರರಾದ್ದರಿಂದ ಹಾಳಾಗುತ್ತಾರೆ. ಜ್ಞಾನಿಯು ಲೋಕಸಂಗ್ರಹಾರ್ಥವಾಗಿ ಕರ್ಮಮಾಡಿ ಅದನ್ನು ಪರಮಾತ್ಮನಿಗೆ ಅರ್ಪಿಸಿಬಿಟ್ಟರೆ ತನಗೆ ಆದ ಧ್ಯಾನಲೋಪಕ್ಕೂ ಪೂರ್ತಿಯನ್ನು ಹರಿಯಿಂದ ಪಡೆಯುವನು ಎಂದು ಭಾವ.

27. ಹೀಗೆ ಸಾಮಾನ್ಯವಾಗಿ ಜ್ಞಾನಿ-ಅಜ್ಞಾನಿಗಳ ಕರ್ಮಭೇದವನ್ನು ವಿವರಿಸಿ ಜ್ಞಾನಿಯ ಕರ್ಮಕ್ಕೂ ಅಜ್ಞಾನಿಯಕರ್ಮಕ್ಕೂ ವ್ಯತ್ಯಾಸಕ್ಕೆ ಕಾರಣವಾದ ಅವರಿಬ್ಬರ ಜ್ಞಾನಭೇದವನ್ನು ವಿಸ್ತಾರವಾಗಿ ಶ್ರೀಕೃಷ್ಣನು ಮೂರುಶ್ಲೋಕಗಳಲ್ಲಿ ಹೇಳುತ್ತಾನೆ.

ಶ್ಲೋಕ:- ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ।

ಅಹಂಕಾರ ವಿಮೂಢಾತ್ಮಾ ಕರ್ತಾಽಹಮಿತಿಮನ್ಯತೇ॥

ಪ್ರಕೃತೇಗುಣೈಃ= ಪ್ರಕೃತಿನಾಮಕ ಈಶ್ವರನ ಜ್ಞಾನೇಚ್ಛಾದಿಗುಣಗಳಿಂದ (ಪ್ರಕೃತೇಃ=ಪ್ರಕೃಷ್ಟಕೃತಿಮತ್ವ ಹೇತುನಾ ಪ್ರಕೃತಿ ಪದವಾಚ್ಯಸ್ಯ ಹರೇಃ) ಪ್ರಕೃತೇಃಗುಣೈಃ=(ಪ್ರಕೃತಿಃ=ಸ್ವಭಾವಃ)ಜೀವಸ್ವಭಾವಾನುಗುಣವಾದ ಗುಣಗಳಿಂದ, ಪ್ರಕೃತೇಃ ಗುಣೈಃ=ಜಡಪ್ರಕೃತಿಯ ಪರಿಣಾಮಗಳಾದ ದೇಹೇಂದ್ರಿಯಾಂತಃಕರಣಾದಿಗಳಿಂದ ಪ್ರೇರಿತವಾಗಿ ನಡೆಯುವ ಸರ್ವಕರ್ಮಗಳೂ ಕೇವಲ ನನ್ನಿಂದಲೇ ಸ್ವತಂತ್ರವಾಗಿ ಆಚರಿಸಲ್ಪಡುವುವು ಎಂದು ಅಹಂಕಾರದಿಂದ ಭ್ರಾಂತಚಿತ್ತವುಳ್ಳ ಮೂಢನು ತಿಳಿಯುತ್ತಾನೆ.

ವಿಶೇಷ:- ಹೀಗೆ ಜೀವನು ಕರ್ಮಮಾಡುವಾಗ ಅನೇಕ ಕಾರಣಗಳಿವೆ. ಬಹುದ್ರವ್ಯಗಳ ಸಹಾಯದಿಂದ ಆಗುವ ಕೆಲಸವನ್ನು ಒಂದೇ ದ್ರವ್ಯವು ಮಾಡಿತು ಎಂದು ತಿಳಿಯುವುದು ಭ್ರಾಂತಿಯು. ಅಗ್ನಿತಪ್ತಕಬ್ಬಿಣದ ಗುಂಡು ಸುಡುತ್ತೆ, ಕಬ್ಬಿಣವೇ ಸುಡುತ್ತೆ ಎಂದು ತಿಳಿಯುವುದು ಭ್ರಾಂತಿಯು.

28.ಅವ:-ಜ್ಞಾನಿಯು ಹೇಗೆ ತಿಳಿಯುವನು ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

ಶ್ಲೋಕ:-ತತ್ವವಿತ್ತು ಮಹಾಬಾಹೋ ಗುಣಕರ್ಮವಿಭಾಗಯೋಃ।

ಗುಣಾಗುಣೇಷು ವರ್ತಂತೇ ಇತಿ ಮತ್ವಾ ನ ಸಜ್ಜತೇ॥

ಎಲೈ ಮಹಾಬಾಹುವೇ! ತತ್ವಜ್ಞಾನಿಯಾದರೋ, ಗುಣಕರ್ಮವಿಭಾಗಯೋಃ=ಗುಣವಿಭಾಗವನ್ನು ಎಂದರೆ ಪರಮಾತ್ಮನ ಜ್ಞಾನೇಚ್ಛಾದಿಗುಣಗಳು, ಜೀವನಸ್ವಾಭಾವಿಕ ಗುಣಗಳು ಪ್ರಕೃತಿಪರಿಣಾಮಗಳಾದ ದೇಹೇಂದ್ರಿಯಾಂತಃಕರಣಗಳೆಂಬ ಗುಣಗಳು ಇವನ್ನೂ, ಮತ್ತೂ ಈಶ್ವರನ ಸ್ವತಂತ್ರಪ್ರೇರಕಕರ್ಮಗಳೂ, ಜೀವನ ಅಸ್ವತಂತ್ರ ಪ್ರೇರಕಕರ್ಮಗಳೂ, ಪ್ರಕೃತಿಯ ವಿಕಾರಕ್ರಿಯೆಗಳು ಈ ರೀತಿಕರ್ಮವಿಭಾಗವನ್ನೂ ಚೆನ್ನಾಗಿ ತಿಳಿದು, ಗುಣಾಗುಣೇಷು ವರ್ತಂತೇ=ಸ್ವತಂತ್ರನಾದ ಭಗವಂತನ ಜ್ಞಾನೇಚ್ಛಾಪ್ರಯತ್ನಾದಿಗುಣಗಳು, ಜೀವನ ಸ್ವಾಭಾವಿಕಗುಣಗಳಿಗೂ ಜೀವನ ಪ್ರಾಕೃತದೇಹದ ಇಂದ್ರಿಯಾದಿಗಳೆಂಬ ಗುಣಗಳಿಗೂ ಪ್ರೇರಕತನದಿಂದ ಪ್ರವರ್ತಿಸುತ್ತವೆ, ನಾನು ಸ್ವತಂತ್ರಕರ್ತನಲ್ಲ ಎಂದು ತಿಳಿದು, ನ ಸಜ್ಜತೇ= ಕರ್ಮಮಾಡುವುದರಲ್ಲಿ ನಾನೇ ಸ್ವತಂತ್ರನೆಂಬ ಅಭಿಮಾನವನ್ನು ಮಾಡುವುದಿಲ್ಲ.

ವಿಶೇಷ:- ಅಗ್ನಿಯ ಸ್ವಭಾವ ಗುಣವೇನು? ಕಬ್ಬಿಣದ ಸ್ವಭಾವಗುಣವೇನು? ಅಗ್ನಿಮಾಡುವ ಕರ್ಮವೇನು? ಕಬ್ಬಿಣದಿಂದಾಗುವ ಕರ್ಮವೇನು ಎಂದು ಸ್ಪಷ್ಟವಾದ ಭೇದಜ್ಞಾನವಿದ್ದವನಿಗೆ ಒಂದರ ಕರ್ಮವನ್ನು ಮತ್ತೊಂದರಲ್ಲಿ ಆರೋಪಿಸುವ ಭ್ರಾಂತಿಯಿರುವುದಿಲ್ಲ ಎಂದರೆ ಅಗ್ನಿಯಿಂದ ಕಾದ ಕಬ್ಬಿಣದ ಗುಂಡನ್ನು ಬರೀಗುಂಡು ಸುಡುತ್ತದೆಂದು ತಿಳಿಯುವುದಿಲ್ಲ. ಎರಡೂ ಮಾಡಿದ್ದನ್ನು ಒಂದೇ ಮಾಡಿತೆಂದು ಹೇಳುವ ಭ್ರಾಂತಿಯೂ ಹುಟ್ಟುವುದಿಲ್ಲ. ಹೀಗೆಯೇ ಪರಮಾತ್ಮನ ಸ್ವಭಾವದ ಗುಣ, ಜೀವಸ್ವಭಾವದ ಗುಣ, ದೇಹಸ್ವಭಾವಗುಣ ಇವುಗಳನ್ನು ಪರಮಾತ್ಮನು ಮಾಡುವ ಕರ್ಮ, ಜೀವನಕರ್ಮ, ಮತ್ತೂ ದೇಹದ ಕ್ರಿಯೆ ಇವುಗಳ ಭೇದವನ್ನು ವಿಶದವಾಗಿ ತಿಳಿದವನಿಗೆ ನಾನೊಬ್ಬನೇ ಸಂಧ್ಯಾವಂದನೆ ಮಾಡಿದೆ, ಎಲ್ಲಕ್ಕೂ ನಾನೇ ಈಶ್ವರನೆಂಬ ಭ್ರಾಂತಿಯು ಬರುವುದಿಲ್ಲ. ಇದು ತತ್ವಜ್ಞಾನದ ಫಲ.

29.ಅವತಾರಿಕೆ:- ತತ್ವಜ್ಞಾನಶೂನ್ಯರ ವಿಷಯದಲ್ಲಿ ಜ್ಞಾನಿಯು ಹೇಗೆ ವರ್ತಿಸಬೇಕು? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ

ಶ್ಲೋಕ:- ಪ್ರಕೃತೇರ್ಗುಣಸಂಮೂಢಾಃ ಸಜ್ಜಂತೇ ಗುಣಕರ್ಮಸು।

ತಾನಕೃತ್ಸ್ನವಿದೋ ಮಂದಾನ್ ಕೃತ್ಸ್ನವಿನ್ನ ವಿಚಾಲಯೇತ್॥

ಪರಮಾತ್ಮನ (ಪ್ರಕೃತಿ) ಸ್ವಭಾವಗುಣಗಳನ್ನೂ, ಜೀವಸ್ವಭಾವ ಗುಣಗಳನ್ನೂ, ಜಡಸ್ವಭಾವಗುಣಗಳ ವಿಭಾಗವನ್ನೂ ಈಶ್ವರಕರ್ಮ, ಜೀವಕರ್ಮ, ಜಡಕರ್ಮವೆಂಬ ವಿಭಾಗವನ್ನು ವಿಪರೀತವಾಗಿ ತಿಳಿಯುವ ಸ್ವಭಾವವುಳ್ಳ ಅತ ಏವ ಈಶ್ವರೇಚ್ಛೆಯಿಂದ ಜಡವಿಕಾರವಾದ ದೇಹೇಂದ್ರಿಯಗಳ ವಿಕಾರಕ್ಕೆ ವಶರಾದ ಭ್ರಾಂತರು, ತಾವು ಮಾಡುವಾಗ ನಾನೇಸ್ವತಂತ್ರನೆಂದು ಅಭಿಮಾನವನ್ನು ಹೊಂದುತ್ತಾರೆ ಮತ್ತೂ ಇಂದ್ರಿಯವಿಷಯಗಳಲ್ಲಿ ಆಸಕ್ತರಾಗುತ್ತಾರೆ. ಗುಣವಿಭಾಗ ಮತ್ತು ಕರ್ಮವಿಭಾಗ ಜ್ಞಾನಶೂನ್ಯರಾದ ಅಂಥಾ(ಅರ್ಧಕೊಡಗಳಂತೆ) ಅರ್ಧಂಬರ್ಧ ಜ್ಞಾನಿಗಳಾದ ಅಯೋಗ್ಯರನ್ನು ಗುಣಕರ್ಮಗಳ ವಿಷಯದಲ್ಲಿ ಪೂರ್ಣಜ್ಞಾನಿಯಾದ ವಿದ್ವಾಂಸನು ಸದುಪದೇಶಮಾಡಿ ಅವರನ್ನು ದುರ್ಮಾರ್ಗದಿಂದ ಬಿಡಿಸಬಾರದು.

ವಿಶೇಷ:- (1) 'ನ ಬುದ್ಧಿಭೇದಂ' ಎಂಬ ಶ್ಲೋಕದಲ್ಲಿ ತಿಳಿಯದ ಸಾಧುಜನರು ಕರ್ಮಮಾಡುತ್ತಿರುವಾಗ ಅವರಿಗೆ ಕರ್ಮದಲ್ಲಿ ಶ್ರದ್ಧೆ ಹೆಚ್ಚುವಂತೆ ತಾನೂ ಕರ್ಮಮಾಡಿ ಜ್ಞಾನಿಯ ನಿದರ್ಶನವನ್ನು ತೋರಿಸಿ ಸನ್ಮಾರ್ಗವನ್ನು ಅವರು ಹಿಡಿಯುವಂತೆ ಯತ್ನಿಸಬೇಕು ಎಂದು ಶ್ರೀಕೃಷ್ಣನು ಹೇಳಿದನು. ಅವರು ಯೋಗ್ಯ ಜನರು. ಪಾಪವಶದಿಂದ ವಿಷಯಾಸಕ್ತರಾಗಿ ಕಾಮ್ಯಕರ್ಮರತರಾಗುತ್ತಾರೆ. ಅವರಿಗೆ ರತಿಯುಂಟಾಗುವುದು. ಆದ್ದರಿಂದ ವಿಧೇಯರಾದ ದೊಡ್ಡವರು ಹೋದಮಾರ್ಗದಲ್ಲೇ ಹೋಗಬೇಕೆಂದು ತಿಳಿದು ದೊಡ್ಡವರನ್ನು ಯಾವಾಗಲೂ ಅವರು ಹೇಗೆ ಕರ್ಮಾಚರಣೆ ಮಾಡುತ್ತಾರೆಂದು ನೋಡುತ್ತಿರುವ ಅಂಥಾ ಸಾಧುಅಜ್ಞರನ್ನು ಸನ್ಮಾರ್ಗಕ್ಕೆ ತರಬೇಕು. ಸನ್ಮಾರ್ಗಕ್ಕೆ ತರುವುದೆಂದರೆ ಪುಸ್ತಕ ಉಪದೇಶದಿಂದಲ್ಲ. ಅದು ಅವರಿಗೂ ಬರುತ್ತೆ. ಸ್ವಯಂ ಕರ್ಮಾಚರಣೆಯನ್ನು ಉತ್ಸಾಹದಿಂದ ಮಾಡಿ ತೋರಿಸಿ ಅವರನ್ನು ಉದ್ಧರಿಸಬೇಕು. ಅಂಥಾ ಸಾಧುಅಜ್ಞರಲ್ಲಿ ಹಾಗಿರಬೇಕು.

ಇನ್ನು ದುರ್ಯೋಧನನೇ ಮುಂತಾದ ವಿಪರೀತಜ್ಞಾನಸ್ವಭಾವವುಳ್ಳ ಮೂರ್ಖರ ವಿಷಯದಲ್ಲಿ ಹೇಗಿರಬೇಕೆಂಬುದನ್ನು 'ವಿಶೇಷಜ್ಞಃ ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನ ರಂಜಯತಿ।' ಏನೂ ತಿಳಿಯದವನಿಗೆ ಹೇಳುವುದು ಸುಖ, ತಿಳಿದ ಮನುಷ್ಯನಿಗೆ ಹೇಳುವುದು ಬಹುಸುಖ. ತಿಳಿದೂ ತಿಳಿಯದ ನಾನು ಸರ್ವವನ್ನೂ ತಿಳಿದಿರುವವನೆಂಬ ಮೂರ್ಖಮನುಷ್ಯನನ್ನು ಚತುರ್ಮುಖನೂ ಕೂಡ ಸಮಾಧಾನ ಪಡಿಸಲಾರ.

ಆದ್ದರಿಂದಲೇ ಮೂರ್ಖರಾದ ದುರ್ಯೋಧನನಂಥವರಿಗೆ ತತ್ತ್ವೋಪದೇಶವನ್ನು ಮಾಡಬಾರದು ಎಂದು ಶ್ರೀಕೃಷ್ಣನ ಮತ. ಸಭೆಯಲ್ಲಿ ತಾನು ಉಪದೇಶಮಾಡಿದ್ದೂ ಪಾಂಡವರ ಯಶೋರಕ್ಷಾರ್ಥವಾಗಿ. ಅವರನ್ನು ಬದಲಾಯಿಸಬೇಕೆಂದಲ್ಲ. ದುರ್ಜನರಿಗೆ ತತ್ತ್ವೋಪದೇಶವನ್ನು ಮಾಡಿ ಬಲಾತ್ಕಾರದಿಂದ ಸನ್ಮಾರ್ಗಕ್ಕೆ ತರುವುದು ಉಚಿತವಲ್ಲವಾದ್ದರಿಂದಲೇ ಪರೀಕ್ಷಿದ್ರಾಜನು ಕಲಿಯನ್ನು ನಿಗ್ರಹಿಸಿದಾಗ ಅವನನ್ನು ಐದು ವಿಷಯದಲ್ಲಿ(ಚಿನ್ನದಲ್ಲಿ, ಬೇಟೆಯಲ್ಲಿ, ಮದ್ಯದಲ್ಲಿ, .....) ಹೀಗಿರಬೇಕೆಂದು ಕಟ್ಟುಮಾಡಿದನೇ ಹೊರತು ತಾನು ಆಚರಿಸುತ್ತಿದ್ದ ಕೃಷ್ಣಪ್ರಿಯವಾದ ಧರ್ಮಗಳನ್ನೇ ಆಚರಿಸಬೇಕೆಂದು ವಿಧಿಸಲಿಲ್ಲ. ಆದ್ದರಿಂದ ಮೂರ್ಖರಿಗೆ ಸದುಪದೇಶವನ್ನುಜ್ಞಾನಿಯು ಮಾಡಬಾರದು(ಈ ವಿಷಯದಲ್ಲಿ ''ಅನಾವಿಷ್ಕುರ್ವನ್ ಅನ್ವಯಾತ್'' ಎಂದು ಬ್ರಹ್ಮಸೂತ್ರವೇ ಪ್ರಮಾಣವಾಗಿದೆ.)

ದಾಸರು ಹೇಳುತ್ತಾರೆ:

ಮೊಸಳೆಬಾಯಲ್ಲಿರುವ ಕೋರೆ ಹಲ್ಲುಗಳ ಮಧ್ಯದಲ್ಲಿರುವ ರತ್ನವನ್ನಾದರೂ ಕೈಹಾಕಿ ಬಲಾತ್ಕಾರವಾಗಿ ತೆಗೆಯಬಹುದು; ಬಹು ರಭಸದಿಂದ ಚಲಿಸುತ್ತಾ ಇರುವ ತೆರೆಗಳ ಪಂಕ್ತಿಗಳಿಂದ ಕೂಡಿರುವ ಸಮುದ್ರವನ್ನಾದರೂ ದಾಟಬಹುದು; ಕುಪಿತ ಸರ್ಪವನ್ನು ತಲೆಯಲ್ಲಿ ಹೂವಿನಂತೆ ಮುಡಿದುಕೊಳ್ಳಬಹುದು; ದುರಾಗ್ರಹದಿಂದ ಕೂಡಿದ ಮೂರ್ಖಜನಚಿತ್ತವನ್ನು ಸಮಾಧಾನಪಡಿಸುವುದಕ್ಕೆ ಆಗುವುದೇ ಇಲ್ಲ.

ಅಂಥಾ ಮೂರ್ಖಜನರನ್ನು ತಿದ್ದುವುದಕ್ಕೆ ಯತ್ನಮಾಡುವುದು ಹೇಗಾಗುತ್ತದೆಂದರೆ,

ಯಾವಮನುಷ್ಯನಾದರೂ ಎಳೆತಾವರೆದಂಟಿನ ದಾರದಿಂದ ಮದಗಜವನ್ನು ಕಟ್ಟು ಹಾಕಲು ಉದ್ಯೋಗಮಾಡಿದರೆ ಹೇಗೋ ಹಾಗೆ, ವಜ್ರಮಣಿಯನ್ನು ಬಾಗೆ ಹೂವಿನ ಅಂಚಿನಿಂದ ಕೊಯ್ಯುತ್ತೇನೆಂಬುದು ಹೇಗೋ ಹಾಗೆ, ಉಪ್ಪಿನಸಮುದ್ರವನ್ನು ಒಂದು ತೊಟ್ಟು ಜೇನುತುಪ್ಪದಿಂದ ಮಧುರವಾಗಿ ಮಾಡಲಿಚ್ಛಿಸುವುದು ಹೇಗೋ ಹಾಗೆ, ಮನುಷ್ಯನು ಮೂರ್ಖಜನಗಳನ್ನು ಒಳ್ಳೇ ಮಾತಿನಿಂದ ಸಂತೋಷ ಪಡಿಸುವುದಕ್ಕೆ ಹೋಗುವುದೂ ಕೂಡ. ಅಂದರೆ ಆಗದ ಹೋಗದ ಕೆಲಸವೆಂದು ಭಾವ.

30. ಅವತಾರಿಕೆ:- ಕೃಷ್ಣಾ! ಈಗ ನಾನು ಘೋರಯುದ್ಧಮಾಡಿದರೂ ಆ ಕರ್ಮವು ಸರ್ವೋತ್ತಮವಾಗಬೇಕಾದರೆ ಹೇಗೆ ಅದನ್ನು ಅನುಷ್ಠಾನ ಮಾಡಬೇಕು? ಅದನ್ನು ಹೇಳೆಂದರೆ ಶ್ರೀಕೃಷ್ಣನು ಹೇಳುತ್ತಾನೆ:-

ಶ್ಲೋಕ:- ಮಯಿಸರ್ವಾಣಿ ಕರ್ಮಾಣಿ ಸಂನ್ಯಸ್ಯಾಧ್ಯಾತ್ಮಚೇತಸಾ।

ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ॥

ನಾನೇ(ಶ್ರೀಕೃಷ್ಣನೇ) ಸರ್ವೋತ್ತಮಚೇತನನೆಂಬ ಜ್ಞಾನಪೂರ್ವಕವಾಗಿ, ಕರ್ಮಫಲದಲ್ಲಿ ಅಪೇಕ್ಷೆಯಿಲ್ಲದೇ, ಸಕಲವಿಹಿತಕರ್ಮಗಳನ್ನೂ ಅನುಷ್ಠಾನಮಾಡಿ, ನನ್ನಲ್ಲಿ ಸಮರ್ಪಿಸಿ ಮಮತಾರಹಿತನಾಗಿ ಸಂತಾಪವನ್ನು ಹೊಂದದೇ ಯುದ್ಧವನ್ನು ಮಾಡು.

ವಿಶೇಷ:- ಈ ಶ್ಲೋಕದಲ್ಲಿ ಶ್ರೀಕೃಷ್ಣನು ಪರಿಪೂರ್ಣವಾದ ಫಲವನ್ನು ಕೊಡಿಸುವ ಕರ್ಮಸ್ವರೂಪವು ಹೇಗಿರಬೇಕೆಂಬುದನ್ನು ತೋರಿಸಿಕೊಟ್ಟಿದ್ದಾನೆ. ಹೇಗೆಂದರೆ:- ಅಪರೋಕ್ಷಜ್ಞಾನಾರ್ಥವಾದ ಸಕಲ ವಾಚನಿಕ ಮಾನಸಿಕ ಶಾರೀರಕವ್ಯಾಪಾರಗಳೂ ಕರ್ಮವೆಂದೆನಿಸುವುವು. ಶಾಸ್ತ್ರಪಾರಾಯಣಾದಿಗಳು ವಾಗಿಂದ್ರಿಯಜನಿತ ಕರ್ಮಗಳು. ಶ್ರವಣಮನನಾದಿಗಳು ಮಾನಸಿಕಕ್ರಿಯೆಗಳು. ವಿಧ್ಯುಕ್ತಕರ್ಮಾನುಷ್ಠಾನಗಳು ಶಾರೀರಿಕಕ್ರಿಯೆಗಳು.

ಕರ್ಮಯೋಗವೆಂದರೆ:- ರಾಗದ್ವೇಷವರ್ಜನರೂಪವಾದ ಸನ್ಯಾಸವೆಂಬ ಮನೋಧರ್ಮದಿಂದ ಸಹಿತವಾಗಿ, ಮತ್ತು ಭಗವಂತನ ಸ್ವಾತಂತ್ರ್ಯವೇ ಮೊದಲಾದ ಅನೇಕಕಲ್ಯಾಣಗುಣಗಳ ಜ್ಞಾನಪೂರ್ವಕವಾಗಿ, ವಿಷ್ಣುಭಕ್ತಿಯಿಂದ, ವಿಧ್ಯುಕ್ತವಾದ ಕರ್ಮಾನುಷ್ಠಾನವನ್ನು ನಿಷ್ಕಾಮವಾಗಿ ಮಾಡಿ ಅಂತ್ಯದಲ್ಲಿ ಸರ್ವಕರ್ಮಫಲವನ್ನೂ ಭಗವಂತನಿಗೆ ಸಮರ್ಪಿಸುವುದು ಎಂದರ್ಥವು. ಇಂಥಾ ವಿಶಿಷ್ಟಕರ್ಮಯೋಗವು ಆರನೇ ಅಧ್ಯಾಯದಲ್ಲಿ ಉಕ್ತವಾದ ಧ್ಯಾನಯೋಗಕ್ಕೆ ಸಾಕ್ಷಾತ್ಕಾರಣವಾಗಿ ಧ್ಯಾನದ್ವಾರಾ ಅಪರೋಕ್ಷಜ್ಞಾನವನ್ನು ಹುಟ್ಟಿಸುವುದು.

ಇಂಥಾ ವಿಶಿಷ್ಟಕರ್ಮಯೋಗವು ಚತುರಂಗರೂಪವಾದುದು. 1) ಭಗವದರ್ಪಣ ಬುದ್ಧಿಯಿಂದ ವಿಧ್ಯುಕ್ತಕರ್ಮಾನುಷ್ಠಾನರೂಪವಾದ ಕರ್ಮವೆಂದು ಹೆಸರುಳ್ಳ ಪ್ರಥಮಾಂಶವು. 2)ಶ್ರವಣಾದಿಜನಿತ ಪರಮಾತ್ಮನ ಜ್ಞಾನವು ಸಾಂಖ್ಯವೆಂದು ಕರೆಯಲ್ಪಡುವ ದ್ವಿತೀಯಾಂಶವು. 3)ರಾಗದ್ವೇಷಾದಿವರ್ಜನರೂಪವಾದ ಸಂನ್ಯಾಸವೆಂದು ಕರೆಯಲ್ಪಡುವ ತೃತೀಯಾಂಶವು. 4)ಅಂತ್ಯದಲ್ಲಿ ಸರ್ವಕರ್ಮಫಲಗಳನ್ನು ಪರಮಾತ್ಮನಲ್ಲಿ ಸಮರ್ಪಣಮಾಡೋಣವೆಂಬ ತ್ಯಾಗವೆಂದು ಹೆಸರುಳ್ಳ ಚತುರ್ಥಾಂಶವು. ಇವೂ ನಾಲ್ಕು ಮಿಳಿತವಾಗಿ ಧ್ಯಾನದ್ವಾರಾ ಸಾಕ್ಷಾದಪರೋಕ್ಷಜ್ಞಾನವನ್ನೇ ಹುಟ್ಟಿಸುವುವೆಂದು ಹೇಳುವುದು ಶ್ರೀಕೃಷ್ಣನಿಗೆ ಅತ್ಯಂತ ಸಮ್ಮತವಾದುದು.

ಸರ್ವಾಂಶಗಳಿಂದ ಸಹಿತವಾದ ಕರ್ಮವೇ ಪರಿಪೂರ್ಣವಾದ ಕರ್ಮಯೋಗವು. ಪ್ರಕೃತ ಯುದ್ಧವು ಘೋರವಾಗಲಿ, ಶಾಂತವಾಗಲಿ, ವಿಧ್ಯುಕ್ತವಾಗಿದ್ದರೆ ಸರಿ. ಆದಾದರೋ ವಿಧ್ಯುಕ್ತಕರ್ಮವೇ ಆಗಿದೆ. ನಿನ್ನವರ್ಣಾಶ್ರಮಕ್ಕೆ ವಿಹಿತವಾದದ್ದು. ಅದರಿಂದ ಪೂರ್ಣಫಲವನ್ನು ಹೊಂದುವುದಕ್ಕಾಗಿ ನೀನು ಇತರ ಮೂರು ಅಂಶಗಳನ್ನೂ ಹೊಂದು ಎಂದರೆ:- ಅದನ್ನು ''ಅಧ್ಯಾತ್ಮಚೇತಸಾ= ಸರ್ವೋತ್ತಮ ಚೇತನನಾದ ಶ್ರೀಹರಿಯೇ ಪ್ರೇರಕನು ಎಂಬ ಹರಿಯಸ್ವಾತಂತ್ರ್ಯಜ್ಞಾನಪೂರ್ವಕವಾಗಿ ಮಾಡು.(ಇದು ಸಾಂಖ್ಯವು). ನಿರಾಶೀರ್ನಿರ್ಮಮೋಭೂತ್ವಾ= ಅಹಂತಾಮಮತೆಗಳನ್ನೂ, ಐಹಿಕ ರಾಜ್ಯಾದಿ ಫಲಾಶೆಯನ್ನೂ, ರಾಗದ್ವೇಷಗಳನ್ನೂ ನೀಗಿ ''ಇದು ನನ್ನಿಂದ ಕರ್ತವ್ಯವಾದ ಹರಿಸೇವೆ'' ಎಂದು ಮಾಡು. ಯುದ್ಧವಾದಮೇಲೆ ಬಂಧುಹನನದಿಂದಾಗುವ ದುಃಖವಿಷಯದಲ್ಲಿ 'ವಿಗತಜ್ವರಃ'= ನಿನಗೆ ಸಂತಾಪವಾಗದಂತೆ ಈಗಲೇ ಅವರಲ್ಲಿ ಅಭಿಮಾನಬಿಟ್ಟು ನಿನ್ನಹೆಂಡತಿಯನ್ನು ಕೆಣಕುವುದಕ್ಕೆ ಬಂದ ಕೀಚಕನನ್ನು ಭೀಮನು ಯಾವದೃಷ್ಟಿಯಿಂದ ನೋಡಿದನೋ ಆದೃಷ್ಟಿಯಿಂದ ನೋಡಿ ಸಂತಾಪ ಉಂಟಾಗದಂತೆ ಮಾಡಿಕೋ, ನಂತರ ಯುಧ್ಯಸ್ವ=ಯುದ್ಧವು ಘೋರವು. ಕಾಮ್ಯವು ಎಂದು ನಿಂದಿಸದೆ ದೇವರ ಆಜ್ಞಾರೂಪವಾದ ಶಾಸ್ತ್ರದಲ್ಲಿ ವಿಹಿತವಾದದ್ದೆಲ್ಲಾ ಅವಶ್ಯಕರ್ತವ್ಯಧರ್ಮವಾದ್ದರಿಂದ ನಿರ್ಭಯವಾಗಿ ಯುದ್ಧಮಾಡು. ಅನಂತರ ಕರ್ಮದ ಫಲವನ್ನು 'ಮಯಿಸರ್ವಾಣಿ ಕರ್ಮಾಣಿ ಸಂನ್ಯಸ್ಯ= ಯುದ್ಧಮಾಡಿದ ಆಯಾಸ, ಯುದ್ಧದ ಫಲ, ದೇಹ, ರಾಜ್ಯ, ಮನಸ್ಸಿನ ಕರ್ಮವೇ ಮುಂತಾದ ಸರ್ವಸ್ವವನ್ನೂ ನನ್ನಲ್ಲಿ ಅರ್ಪಿಸಿಬಿಡು. ನೀನು ಯುದ್ಧಮಾಡಲೇಬೇಡ? ರಾಜನು ಹೇಳಿದ ಚಾಕರಿಯನ್ನು ಜವಾನ ಮಾಡುವಂತೆ ಯುದ್ಧಕಾರ್ಯವನ್ನು ಮುಗಿಸಿ ಆ ಕ್ಷತ್ರಹತ್ಯೆಯನ್ನೆಲ್ಲಾ ನನಗೆ ಅರ್ಪಿಸಿಬಿಡು. ಅದು ಪುಣ್ಯವಾಗಲೀ, ಪಾಪವಾಗಲೀ ನನ್ನ ಆಜ್ಞೆಯಿಂದ ಮಾಡಿದರೆ ನಿನಗಿಲ್ಲವಷ್ಟೆ! ನಿನಗೆ, ರಾಜಾಜ್ಞೆ ನೇರವೇರಿಸಿದ ಭೃತ್ಯನಿಗೆ ವೇತನವು ಹೇಗೋ ಹಾಗೆ ಪುಣ್ಯವು ಬಂದೇ ಬರುವುದು. ಹೀಗೆ ಸಾಂಖ್ಯ,(ಸಂನ್ಯಾಸ) ರಾಗಾದಿ ತ್ಯಾಗಪೂರ್ವಕ ವಿಧ್ಯುಕ್ತಕರ್ಮವನ್ನು ಮಾಡಿ ಪರಮಾತ್ಮನಲ್ಲಿ ಸಮರ್ಪಿಸಿಬಿಟ್ಟರೆ ಕರ್ಮವು ಪರಿಪೂರ್ತಿಯನ್ನು ಹೊಂದುವುದು ಎಂದು ಭಾವ.

31 ಪೂರ್ವೋಕ್ತ ಪ್ರಕಾರ ಸರ್ವಾಭೀಷ್ಟಫಲಪ್ರದವಾದ ಬ್ರಹ್ಮಜ್ಞಾನಕ್ಕೆ ಸೋಪಾನವಾದ ಕರ್ಮಯೋಗದ ಸ್ವರೂಪವನ್ನು ಉಪದೇಶಮಾಡಿ ತನ್ನ ಮತವೇ( ಎಂದರೆ ನಿಷ್ಕಾಮಕರ್ಮಯೋಗವೇ ಮುಕ್ತಿಪಥವೆಂಬ ಮತವೇ) ನಿಜಮತವು ಎಂದು ತಿಳಿಸಬೇಕಾಗಿ ಅದನ್ನು ಅನುಷ್ಠಾನಮಾಡುವವರಿಗೆ ಆಗುವ ಸದ್ಗತಿಯನ್ನೂ, ಅದನ್ನು ಅತಿಕ್ರಮಿಸಿ ಸ್ವಚ್ಛಂದಮಾರ್ಗದಲ್ಲಿ ನಡೆಯುವವರಿಗೆ ಆಗುವ ದುರ್ಗತಿಯನ್ನೂ ಮುಂದಿನ ಎರಡು ಶ್ಲೋಕಗಳಲ್ಲಿ ಶ್ರೀ ಕೃಷ್ಣನು ಹೇಳುತ್ತಾನೆ.

'' ಯೇ ಮೇ ಮತಮಿದಂ ನಿತ್ಯಂ ಅನುತಿಷ್ಠಂತಿ ಮಾನವಾಃ।
ಶ್ರದ್ಧಾವಂತೋಽನಸೂಯಂತೋ ಮುಚ್ಯಂತೇ ತೇಽಪಿ ಕರ್ಮಭಿಃ॥
ಯೇ ತ್ವೇ ತದಭ್ಯಸೂಯಂತೋ ನಾನುತಿಷ್ಠಂತಿ ಮೇ ಮತಂ।
ಸರ್ವಜ್ಞಾನವಿಮೂಢಾಂ ಸ್ತಿನ್ವಿದ್ಧಿ ನಷ್ಟಾ ನ ಚೇತಸಃ॥ ''

ಯಾವ ಮನುಷ್ಯರು ನನ್ನ(ಶ್ರೀಕೃಷ್ಣನ) ವಾಕ್ಯದಲ್ಲಿ ವಿಶ್ವಾಸವುಳ್ಳವರಾಗಿ, ಕಷ್ಟವಾದ ಕರ್ಮಾನುಷ್ಠಾನದಲ್ಲಿ ಪ್ರವೃತ್ತಿಯುಂಟುಮಾಡಿದನೆಂದು ನನ್ನಲ್ಲಿ ದೋಷದೃಷ್ಟಿಯನ್ನು ಮಾಡದೇ ನನ್ನಿಂದ ಉಕ್ತವಾದ ರೀತಿಯಲ್ಲಿ ಜ್ಞಾನೋಪಾಯವನ್ನು ಅನುಷ್ಠಾನಮಾಡುತ್ತಾರೆಯೋ, ಅವರು ಸಕಲಕರ್ಮಬಂಧದಿಂದ ಮುಕ್ತರಾಗುತ್ತಾರೆ.

ಯಾರು ನನ್ನ ಮಾತನ್ನು ಕುರಿತು, ಅಭ್ಯಸೂಯಂತಃ= ಯಥಾರ್ಥವಾಗಿದ್ದರೂ ಅದರಲ್ಲಿ ದೋಷದೃಷ್ಟಿಯುಳ್ಳವರಾಗಿ ಆಚರಿಸುವುದಿಲ್ಲವೋ ಅಂಥವರು ವಿವೇಕಶೂನ್ಯರು ಸರ್ವವಿಷಯದಲ್ಲೂ ಮಿಥ್ಯಾಜ್ಞಾನಿಗಳು ಮತ್ತು ನರಕಾದ್ಯನರ್ಥಭಾಗಿಗಳು ಎಂದು ನೀನು ತಿಳಿಯುವವನಾಗು.

ವಿಶೇಷ:-

1) ಈಶ್ಲೋಕದಿಂದ ಕೃಷ್ಣೋಪದೇಶವು ನಿಜವಾದ ಮೋಕ್ಷೋಪಾಯವನ್ನು ಹೇಳತಕ್ಕದ್ದು. 2)ಅದನ್ನು ಅನುಷ್ಠಾನಮಾಡುವಾಗ ಕೃಷ್ಣವಾಕ್ಯದಲ್ಲಿ ಶ್ರದ್ಧೆಯನ್ನಿಟ್ಟು ಅವನಲ್ಲೂ ಗುರುಗಳಲ್ಲೂ ಭಕ್ತಿಯಿಂದ ಕರ್ಮವನ್ನು ಮಾಡಬೇಕು. 3) ಕಷ್ಟಕರ್ಮವನ್ನು ಹೇಳಿದನೆಂದು ದ್ವೇಷವನ್ನು ಮಾಡಬಾರದು. ಕುಂಡಿನನಗರದಲ್ಲಿ ಕನ್ಯೆಯು ಹೊರುವಷ್ಟು ಭಂಗಾರವನ್ನು ಅರಸನು ಹಾಕಬೇಕು ಅಥವಾ ಧಡಿಯ ಬಂಗಾರದ ಒಡವೆಗಳನ್ನಾದರೂ ಹಾಕಿಕೊಂಡು ಗಂಡನ ಕೈ ಹಿಡಿದುಕೊಂಡು ಕುಲದೇವತೆಯ ಸೇವೆಯನ್ನು ಮಾಡಬೇಕು ಎಂಬ ಸಂಪ್ರದಾಯವಿತ್ತು. ಧಡಿಯಭಂಗಾರವನ್ನು ಹೊರುವುದು ಕಷ್ಟ ಬೇಡವೆಂದು ಯಾವ ಕನ್ಯೆಯೂ ಹೇಳುತ್ತಿರಲಿಲ್ಲ. ಮಣಗಟ್ಟಲೆ ಒಡವೆಗಳನ್ನು ಹಾಕಿಕೊಂಡು ಕುಲದೇವತೆಯ ಪ್ರದಕ್ಷಿಣೆಗಳನ್ನು ಮಾಡುತ್ತಿದ್ದಳು. ಏಕೆಂದರೆ ಒಡವೆಗಳೆಲ್ಲಾ ಅವಳಿಗೇ ಸೇರುತ್ತಿದ್ದವು. ಹೀಗೆಯೇ ಮೋಕ್ಷಪ್ರಾಪಕವಾದ ಕೃಷ್ಣನ ಉಪದೇಶವನ್ನು ಅನುಸರಿಸಿ ಕರ್ಮಮಾಡುವುದು ಕಷ್ಟವೆಂದು ತಿಳಿಯದೇ, ಮಣ ಭಂಗಾರಕ್ಕಿಂತ ಹೆಚ್ಚಾದ ಮೋಕ್ಷಸುಖವು ಪರಮಾತ್ಮನಪ್ರಸಾದವೂ ಉಂಟಾಗುತ್ತೆ ಎಂಬ ಸಂತೋಷದಿಂದ ನಿಷ್ಕಾಮ ಸೇವೆಯನ್ನು ಮಾಡಬೇಕು. 4)ಮತ್ತೂ ಈ ಉಪಾಯವನ್ನು ನಿರಂತರ ಅನುಷ್ಠಾನವನ್ನು ಮಾಡಬೇಕು. ನಾಲ್ಕುದಿನಮಾಡಿ ಅದನ್ನು ಬಿಡಬಾರದು. ಬ್ರಹ್ಮಜ್ಞಾನಪರ್ಯಂತವೂ ಆಚರಿಸಬೇಕು. ಪ್ರತಿದಿನವೂ ತಪ್ಪದೇ ಆಚರಿಸಬೇಕು. ಜೀವನಾರ್ಥವಾಗಿ ಭೋಜನವನ್ನು ತಪ್ಪದೇ ಹೇಗೆ ಪ್ರತಿನಿತ್ಯವೂ ಅನುಷ್ಠಿಸುತ್ತೇವೆಯೋ ಹಾಗೆಯೇ ಮೋಕ್ಷೋಪಾಯವಾದ ಹರಿಕಥಾಶ್ರವಣಾದಿಕರ್ಮಗಳನ್ನು ಪ್ರತಿನಿತ್ಯವೂ ತಪ್ಪದೇ ಆಚರಿಸಬೇಕು. ಕಷ್ಟವಾದರೂ ಒಂದು ದಿನವೂ ಬಿಡಬಾರದು. 5)ಇಂಥಾ ಕೃಷ್ಣನು ಹೇಳಿದ ಉಪಾಯವನ್ನು ಬಿಟ್ಟು ಅನ್ಯ ಉಪಾಯವನ್ನು ಆಚರಿಸುವವನು ಭ್ರಾಂತನು. ನರಕಕ್ಕೆ ಯೋಗ್ಯನು ಎಂದಮೇಲೆ ನ್ಯಾಯ, ವೈಶೇಷಿಕ, ಯೋಗಸೂತ್ರ, ಕಾಪಾಲಿಕ, ಗಾಣಪತ್ಯ, ಸೌರ, ಶಾಕ್ತ್ಯಾದಿ ಬಹು ಆಗಮಗಳಲ್ಲಿ ಹೇಳಿರುವುದು ಮೋಕ್ಷೋಪಾಯವಲ್ಲ. ಅವುಗಳಲ್ಲಿ ಹೇಳಿದ್ದು ಮೋಕ್ಷೋಪಾಯವೆಂದು ತಿಳಿಯುವುದು ದೊಡ್ಡ ಭ್ರಾಂತಿ. ಅವುಗಳನ್ನು ಅನುಸರಿಸಿ ಆಚರಿಸಿದರೆ ನರಕಪ್ರಾಪ್ತಿಯಾಗುತ್ತೆ. ಗೀತೆಯಮಾರ್ಗವೇ ರಾಜಮಾರ್ಗವು. ಅನುಶಾಸನಿಕ ಪರ್ವದಲ್ಲಿ ಭೀಷ್ಮರು ಸಾಯುವಾಗ ಇದನ್ನೇ ಹೇಳಿದ್ದಾರೆ:-

ಶ್ಲೋಕ॥ ಏಷನಿಷ್ಕಂಟಕಃ ಪಂಥಾಃ ಯತ್ರ ಸಂಪೂಜ್ಯತೇ ಹರಿಃ। ಕುಪಥಂ ತಂ ವಿಜಾನೀಯಾತ್ ಗೋವಿಂದರಹಿತಾಗಮಂ ॥

ಯಾವ ಶಾಸ್ತ್ರದಲ್ಲಿ ಸರ್ವೋತ್ತಮನಾದ ವೇದಪ್ರತಿಪಾದ್ಯನಾದ ಗೋವಿಂದನನ್ನು ನಿಷ್ಕಾಮಭಕ್ತಿಯಿಂದ ಆರಾಧಿಸಬೇಕೆಂದು ಹೇಳಿದೆಯೋ ಅದೇ ನಿಜವಾದ ಶಾಸ್ತ್ರವು. ಈ ಪ್ರಕಾರವಾಗಿ ಗೋವಿಂದನ ಪೂಜೆಯನ್ನು ಹೇಳದ ಶಾಸ್ತ್ರವು ಕುಮಾರ್ಗಕ್ಕೆ ಒಯ್ಯತಕ್ಕದ್ದು.

33.. ಇದರಮೇಲೆ ಪ್ರಶ್ನೆ ಬರುತ್ತೆ. ಹೇ ಕೃಷ್ಣಾ! ನಿನ್ನ ಮತವೇ ಸರ್ವೋತ್ತಮ ಮತವಾದರೆ, ನೀನು ಹೇಳಿದ ಮೋಕ್ಷೋಪಾಯವೇ ನಿಜವಾದ ಸಾಧನೆಯಾದರೆ ಇತರ ವಿದ್ವಾಂಸರೂ ಹೀಗೆ ಏಕೆ ಮೋಕ್ಷೋಪಾಯವನ್ನು ಹೇಳುವುದಿಲ್ಲ? ಎಲ್ಲಾ ಜನರೂ ಇದನ್ನೇ ಏಕೆ ಆಚರಿಸುವುದಿಲ್ಲ? ಮತ್ತೂ ಇದೇ ಮೋಕ್ಷೋಪಾಯವೆಂದು ತಿಳಿದವರೂ ಕೂಡ ಸರ್ವದಾ ಹಾಗೇಕೆ ಆಚರಿಸುವುದಿಲ್ಲ? ಎಂಬ ಮೂರುಪ್ರಶ್ನೆಗಳಿಗೂ ಸರ್ವಜ್ಞಚೂಡಾಮಣಿಯಾದ ಭಗವಂತನು ಉತ್ತರ ಕೊಡುತ್ತಾನೆ:-

ಸದೃಶಂ ಚೇಷ್ಟತೇ ಸ್ವಸ್ಯಾಃ ಪ್ರಕೃತೇರ್ಜ್ಞಾನವಾನಪಿ ।
ಪ್ರಕೃತಿಂ ಯಾಂತಿ ಭೂತಾನಿ ನಿಗ್ರಹಃ ಕಿಂ ಕರಿಷ್ಯತಿ ॥''

ಎಲೈ, ವೇದವೇದಾಂಗಗಳನ್ನು ತಿಳಿದ ಜ್ಞಾನಿಯೂ ಕೂಡ ತನ್ನ ಸ್ವಭಾವಕ್ಕನುಗುಣವಾಗಿ ಶಾಸ್ತ್ರರಚನಾದಿ ಕರ್ಮಗಳನ್ನು ಮಾಡುತ್ತಾನೆ. ಸರ್ವಪ್ರಾಣಿಗಳೂ ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಕರ್ಮವನ್ನು ಮಾಡುತ್ತಾರೆ. ಸ್ವರೂಪಸ್ವಭಾವಕ್ಕನುಸಾರವಾಗಿ ಫಲವನ್ನುಹೊಂದುತ್ತಾರೆ. ಸ್ವಭಾವವು ಅನಾದಿ ನಿತ್ಯವಾದ್ದರಿಂದ ಬಲವತ್ತರವಾದುದು. ಅದನ್ನು ನಿಗ್ರಹಿಸಲಾಗುವುದಿಲ್ಲ. ಆದ್ದರಿಂದಲೇ ಕಳಿಂಗಾದಿ ಮೂರ್ಖರು ನಾನು ಹೇಳಿದ್ದಕ್ಕೆ ವಿರುದ್ಧವಾಗಿ ದುಷ್ಟಶಾಸ್ತ್ರವನ್ನು ರಚಿಸಿದ್ದಾರೆ. (ಅವರು ಹೇಳಿದ್ದು ಮೋಕ್ಷೋಪಾಯವಲ್ಲ. ನಾನು ಹೇಳಿದ್ದೇ ಮೋಕ್ಷೋಪಾಯವೆಂದು ಒಂದರ್ಥ)

2ನೇ ಅರ್ಥ:- ಇತರವಿಷಯಗಳಲ್ಲಿ ಎಂಥಾಜ್ಞಾನವುಳ್ಳವನಾಗಿದ್ದರೂ ಕೂಡ ಮೋಕ್ಷೋಪಯೋಗಿಕರ್ಮಮಾಡುವ ವಿಷಯದಲ್ಲಿ ಅಧಿಕಾರಿಯು ತನ್ನ ನಿಜಸ್ವಭಾವಕ್ಕನುಗುಣವಾಗಿಯೇ ಆಚರಿಸುವನು. ಸರ್ವಪ್ರಾಣಿಗಳೂ (ಐಹಿಕ ವಿಷಯಗಳಲ್ಲಿ ಏಕರೀತಿಯಾಗಿ ನಡೆದುಕೊಂಡರೂ) ಮೋಕ್ಷೋಪಾಯವನ್ನು ಅನುಷ್ಠಾನಮಾಡುವ ವಿಷಯದಲ್ಲಿ ತಮ್ಮ ಅನಾದಿಸ್ವಭಾವವನ್ನು ಅನುಸರಿಸಿ ಅದಕ್ಕನುಗುಣವಾದಂಥಾ ಕರ್ಮಗಳನ್ನೇ ಅನುಷ್ಠಾನಮಾಡುತ್ತಾರೆ ಎಂದು ಅರ್ಥ.

(ಆದ್ದರಿಂದಲೇ ದುರ್ಯೋಧನನು ಶುದ್ಧಕಾಮ್ಯಧರ್ಮಗಳಲ್ಲಿ ರತನಾಗಿ ದ್ವೇಷದಿಂದ ಯಜ್ಞಾದಿಗಳನ್ನು ಮಾಡಿ, ದೂರ್ವಾಸರನ್ನು ಸೇವಿಸಿದರೂ ನಿಷ್ಕಾಮವಾಗಿ ಅತಿಥಿಪೂಜೆ ಎಂದು ತಿಳಿಯದೇ ವೈರತೀರಿಸಿಕೊಳ್ಳುವುದಕ್ಕೆ ಬೇಕಾದ ಮಂತ್ರದಾನವನ್ನು ಬೇಡಿದನು. ಇತರವಿಷಯಗಳಲ್ಲಿ ಪಾಂಡವರಂತೆ ಜ್ಞಾನವನ್ನು ತೋರಿಸಿದರೂ ಭೋಜನ, ಶಯನ, ಆಸನ, ಯಾನ, ಗಮನಾಗಮನ, ರಾಜ್ಯಪರಿಪಾಲನೆ, ಕೋಶರಕ್ಷಣೆ ಇತರ ಲೌಕಿಕನೀತಿಗಳಲ್ಲಿ ಅವನಿಗೂ ಪಾಂಡವರಿಗೂ ಭೇದಕಾಣಲಿಲ್ಲ. ಧರ್ಮಾನುಷ್ಠಾನವಿಷಯದಲ್ಲಿ ಪಾಂಡವರಿಗೂ ಅವನಿಗೂ ಆನೆಗೂ ಆಡಿಗೂ ಇರುವಷ್ಟು ಭೇದ. ಇವರು ನಿಷ್ಕಾಮಿಗಳು. ಅವನು ತುಚ್ಛಕಾಮಿ).

3ನೇ ಅರ್ಥ:- ನಿಷ್ಕಾಮಧರ್ಮವೇ ಪರಮಮೋಕ್ಷೋಪಾಯವೆಂದು ತಿಳಿದಿದ್ದರೂ ಕೂಡ ಅಂಥಾ ವಿದ್ವಾಂಸನೂ ತನ್ನ ಪ್ರಬಲಪ್ರಾಚೀನ ಸಂಸ್ಕಾರಗಳಿಗೆ ವಶನಾಗಿ ಅವುಗಳಿಗನುಗುಣವಾಗಿ ಕರ್ಮ ಮಾಡುತ್ತಾನೆ. ಹಿಂದಿನ ದುಷ್ಟಸಂಸ್ಕಾರವು ಪ್ರಬಲವಾಗಿದ್ದರೆ ಸಕಲಪ್ರಾಣಿಗಳೂ ಅದಕ್ಕೆ ವಶರಾಗುತ್ತಾರೆ. ಆ ವಿಷಯದಲ್ಲಿ ಶಾಸ್ತ್ರಜ್ಞಾನದಿಂದ ಮಾಡುವ ಮನೋನಿಗ್ರಹವು ದುರ್ಬಲವಾಗಿ ವ್ಯರ್ಥವಾಗುತ್ತೆ.( ಪ್ರಬಲಪ್ರಾಚೀನ ಸಂಸ್ಕಾರವು ಆನೆಯಂತೆ. ಅದು ಜೀವನನ್ನು ಹಿಂದಿನಿಂದ ತಳ್ಳುತ್ತಿದ್ದರೆ ಮೊಲದಷ್ಟು ಅಲ್ಪಬಲವುಳ್ಳ ಈಗಿನ ಸಾತ್ವಿಕಜ್ಞಾನವು ಅದನ್ನು ದಬಾಯಿಸುವುದು ಹೇಗೆ? ಬಹುವೇಗದಿಂದ ರೈಲು ಓಡಿಬರುತ್ತಿರುವಾಗ ಒಂದು ಮಾರಿನಲ್ಲಿ ಒಂದು ದೊಡ್ಡ ಮರದ ತುಂಡನ್ನು ನೋಡಿ ಡ್ರೈವರು ವಾಕ್ಯೂಂ ಬ್ರೇಕ್ ಸಹ ಹಾಕಿದರೂ ರೈಲು ನಿಲ್ಲುವುದಿಲ್ಲ. 10-20 ಮಾರು ಮುಂದೇ ಹೋಗೇ ನಿಲ್ಲುತ್ತೆ. ಅಷ್ಟರೊಳಗೆ ಮರದ ತುಂಡಿದ್ದು ಬಿಟ್ಟರೆ ರೈಲು ಮಗುಚಿಕೊಳ್ಳುವುದೇ ನಿಜ. ಇದಕ್ಕೆ ಕೋಶಕಾರನ ಪುತ್ರ ನಿಶಾಕರನ ಕಥೆಯೇ ಸಾಕ್ಷಿ. ಹೀಗೆ ಹಿಂದಿನ ಜನ್ಮದ ಪೂರ್ವಪ್ರಜ್ಞೆಯು (★★★★ ಇಲ್ಲಿ ಒಂದು ಪೇಜು ಇಲ್ಲ)

ಎನಗೆ ನೀನೆ ಗತಿಯೆಂದು ದೃಢವಾಗಿ ನಂಬಿರಲು । ಎನ್ನ ನಡುನೀರಿನೊಳು ಕೈ ಬಿಡುವರೆ ಕೃಷ್ಣ॥

ನಡೆವುದಕೆ ಕಾಲಿಲ್ಲ ಕೊಡುವುದಕೆ ಧನವಿಲ್ಲ। ನುಡಿವ ನಾಲಿಗೆಯು ಹರಣವು ಗುಂದಿತು । ಬಡವಾರಾಧಾರಿ ಶ್ರೀ ಪುರಂದರವಿಠಲನ ಚರಣವನು ನೆರೆ ನಂಬಿ ಸುಖಿಯಾಗುಮನವೇ ॥ 5 ॥

★★34) ಅವ:- ಹೇ ಹರೇ! ಮಧುಸೂದನಾ! ಈಗ ನನಗೂ ಹಾಗೇ ಆಗಿದೆ. ಪೂರ್ವಜನ್ಮದ ಸಂಸ್ಕಾರದಿಂದಲೂ , ಈ ಜನ್ಮದ ದುಃಸಂಗದ ಪ್ರಭಾವದಿಂದಲೂ ಧರ್ಮಯುದ್ಧವನ್ನು ಮಾಡಬಾರದೆಂಬ ದುಷ್ಟ ಆಸಕ್ತಿಯು ಪ್ರಬಲವಾಗಿದೆ. ತಡೆಯಲಿಕ್ಕೆ ಅಶಕ್ಯವಾದ ಪೂರ್ವಸಂಸ್ಕಾರವಿರುವಾಗ ನಾನೇನು ಮಾಡಲಿ? ಹೀಗಿರುವಾಗ ನಾನೇನು ಮಾಡಲಿ? ಹೀಗಿರುವಾಗ ನೀನು ಮನಸ್ಸನ್ನು ನಿಗ್ರಹಿಸು, ಅಭಿಮಾನವನ್ನು ಬಿಟ್ಟು ಯುದ್ಧಮಾಡು ಎಂದು ಹೇಳುವುದು ಸರಿಯೇ? ಎಂದರೆ ಶ್ರೀಕೃಷ್ಣಪ್ರಭು ಹೇಳುತ್ತಾನೆ.

''ಇಂದ್ರಿಯಸ್ಯೇಂದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ ।
ತಯೋರ್ನವಶಮಾಗಚ್ಛೇತ್ತೌಹ್ಯಸ್ಯ ಪರಿಪಂಥಿನಾ ॥''

ಅರ್ಜುನಾ! ಚಕ್ಷುರಾದಿ ಇಂದ್ರಿಯಗಳಿಗೆ ರೂಪಾದಿ ತತ್ತತ್ ವಿಷಯಗಳಲ್ಲಿ ರಾಗದ್ವೇಷಗಳು ಎಂದರೆ ದುರ್ವಿಷಯಗಳಾದರೂ ಅವುಗಳು ಸುಖವನ್ನು ಕೊಡತಕ್ಕವುಗಳಾದರೆ ಅವುಗಳಲ್ಲಿ ರಾಗದಿಂದ ಪ್ರವೃತ್ತಿಯೂ, ಸದ್ವಿಷಯಗಳಾದರೂ ಅವು ದುಃಖಕೊಡತಕ್ಕವುಗಳಾದರೆ ದ್ವೇಷದಿಂದ ನಿವೃತ್ತಿಯೂ ಸ್ವಭಾವಸಿದ್ಧವಾಗಿದೆ. (ಮನಸ್ಸಿಗೂ ಅರಿಷಡ್ವರ್ಗಬಾಧೆಯು ಹುಟ್ಟಿದ ಕಾಲದಿಂದಲೂ ಬಂದಿದೆ. ಆ ಇಂದ್ರಿಯಗಳೂ ಮನಸ್ಸೂ ಪೂರ್ವಸಂಸ್ಕಾರವಶದಿಂದ ರಾಗದ್ವೇಷಗಳಿಗೆ ವಶವಾಗಿ ದುಷ್ಕರ್ಮಗಳಿಗೆ ಎಳೆದುಕೊಂಡು ಹೋಗುತ್ತವೆ). ಹಾಗಾದರೂ ಎಂದರೆ ಅವುಗಳನ್ನು ನಿಗ್ರಹಿಸುವುದು ಕಷ್ಟವಾದರೂ ವಿವೇಕಿಯು ಮನೋಗತವಾದ ರಾಗದ್ವೇಷಗಳಿಗೆ ಮತ್ತು ಅರಿಷಡ್ವರ್ಗಕ್ಕೂ ವಶನಾಗಬಾರದು. ರಾಗಮತ್ತು ದ್ವೇಷ ಇವೆರಡೂ ಇವನಿಗೆ ಮೋಕ್ಷಸಾಧನೆಯಲ್ಲಿ ಮುಖ್ಯಶತ್ರುಗಳು.

ವಿಶೇಷ:- ಯದ್ಯಪಿ ಅನಾದಿ ಸಂಸ್ಕಾರದಿಂದಲೂ ದುರ್ಜನಸಂಗದಿಂದಲೂ, ಇಂದ್ರಿಯಗಳು ಮೋಕ್ಷವಿರೋಧಿಯಾದ ದುರ್ವಿಷಯದಲ್ಲಿ ಪ್ರವೃತ್ತಿಸುತ್ತವೆ. ಅವುಗಳನ್ನು ತಡೆಯುವುದು ಕಷ್ಟ ಹಾಗಿದ್ದರೂ ಪ್ರಬಲಶಾಸ್ತ್ರಜ್ಞಾನವುಳ್ಳ ಯೋಗ್ಯ ಅಧಿಕಾರಿಯು ರಾಗದ್ವೇಷಗಳನ್ನು ಕೊಂದು ಆ ಇಂದ್ರಿಯಗಳನ್ನು ನಿಗ್ರಹಿಸಬಲ್ಲನು. ಒಮ್ಮೆಲೇ ಹಠಾತ್ತಾಗಿ ದುರ್ವಿಷಯಗಳಲ್ಲಿ ಹೋಗದಂತೆ ಮನಸ್ಸನ್ನು ತಡೆಯಲು ಆಗದಿದ್ದರೂ ಕೆಲವು ದುರ್ಜನರಿಗೆ ಅಸಾಧ್ಯವೇ. ಆದರೂ ಅತಿಪ್ರಯತ್ನಮಾಡಿದರೆ ಯೋಗ್ಯನಾದವನು ಪ್ರಾಚೀನಸಂಸ್ಕಾರದಿಂದ ವಿಷಯಗಳನ್ನು ಕುರಿತು ನೋಡಲ್ಪಟ್ಟ ಇಂದ್ರಿಯಗಳನ್ನು ತಡೆಯಬಲ್ಲನು. (ಯೋಗ್ಯನಿಗೆ ಅಸಾಧ್ಯದುಷ್ಟಸಂಸ್ಕಾರವು ಎಂದೂ ಹುಟ್ಟುವುದಿಲ್ಲ). ಸದ್ಗುರುಗಳ ಸಂಗ, ಪ್ರಬಲವಾದ ಶಾಸ್ತ್ರಜ್ಞಾನ, ವಿಷಯಗಳ ಸನ್ನಿಧಾನವನ್ನು ಬಿಟ್ಟು ದೂರ ಇರೋಣ, ಓದಿದ ಶಾಸ್ತ್ರದ ವಿಮರ್ಶೆ ಇತ್ಯಾದಿ

ಉಪಾಯಗಳಿಂದ ಎಂಥಾ ಸಂಸ್ಕಾರವನ್ನಾದರೂ ವಿವೇಕಿಯು ಬುದ್ಧಿಯನ್ನು ಕೆಡಿಸದಂತೆ ತಡೆಯಬಲ್ಲನು. ಉದಾ: ಯೋಗಿಯ ಕಥೆ. ''ಗತೋ ಬಹುತರಃ ಕಾಲಃ ಕಂಚಿದೇವಾವಶಿಷ್ಯತೇ। ಸಾವಧಾನಮನಾಭೂತ್ವಾ ಸುಖಮಕ್ಷಯ್ಯಮಾಪ್ನು ಹಿ॥''

ಅರ್ಜುನನೂ ಇದಕ್ಕೆ ದೃಷ್ಟಾಂತವಾಗಿಯೇ ಇದ್ದಾನೆ. ಹೇಗೆಂದರೆ:- ಬಂಧುಗಳಲ್ಲಿ ರಾಗದಿಂದ ಪ್ರವೃತ್ತವಾದ ಇಂದ್ರಿಯಗಳನ್ನು ನಿಗ್ರಹಿಸಿ ಯುದ್ಧಮಾಡಿದನಷ್ಟೇ. ಆದ್ದರಿಂದ ಸಮೀಚೀನ ಮೋಕ್ಷೋಪಾಯದ ಅನುಷ್ಠಾನವು ದುರ್ಜನರಿಗೆ ಪೂರ್ವಸಂಸ್ಕಾರ ಮತ್ತು ಅನಾದಿ ದುಃಸ್ವಭಾವದ ಪ್ರಭಾವದಿಂದ ಅಸಾಧ್ಯವಾದರೂ ಸಜ್ಜನರು ಕಠಿಣವೂ ಸಂತತವೂ ಆದ ಪ್ರಯತ್ನವನ್ನು ಮಾಡಿದರೆ ಅವರು ಇಂದ್ರಿಯಗಳನ್ನು ಜಯಿಸಲೂ ಬಲ್ಲರು. ಕೃಷ್ಣನು ಹೇಳಿದ ನಿಜ ಮೋಕ್ಷೋಪಾಯವನ್ನು ಅನುಷ್ಠಾನಮಾಡಲೂ ಬಲ್ಲರು ಎಂದು ಭಾವ.

★★35. ಹೇ ಕೃಷ್ಣಾ! ಸ್ವಧರ್ಮವನ್ನು ನಿಷ್ಕಾಮವಾಗಿ ಮಾಡಿ ನಿನಗೆ (ಪರಮಾತ್ಮನಿಗೆ) ಪ್ರೀತಿಯಿಂದ ಸಮರ್ಪಿಸಬೇಕೆಂದು ಇದುವರೆಗಿನ ನಿನ್ನ ಉಪದೇಶದ ಸಾರ. ಆದರೆ ಇದು ಯಾರವಿಷಯ? ಎಲ್ಲರಿಗೂ ನಿನ್ನಮಾತು ಅನ್ವಯಿಸುವುದೇ? ಹುಟ್ಟಿದಲಾಗಾಯ್ತು ತಕ್ಕಡಿಯ ಮುಖವನ್ನೇ ನೋಡದ ಒಬ್ಬ ವೈಶ್ಯಪುತ್ರನು ರಾಜಮಂದಿರದಲ್ಲಿ ಬೆಳೆದು ಶಸ್ತ್ರಯುದ್ಧವನ್ನು ಅಭ್ಯಾಸ ಮಾಡಿದ್ದಾನೆ. ಅಂಥವನು ರಣರಂಗಕ್ಕೆ ಹೋದರೆ ರಾಜನಿಗೆ ರಾಜ್ಯಲಕ್ಷ್ಮಿಯನ್ನು ತಂದುಕೊಡಬಲ್ಲನು. ವ್ಯಾಪಾರಿಯಾದರೆ ಅದನ್ನು ಅವನು ಅಭ್ಯಾಸಮಾಡದಿದ್ದುದರಿಂದ ದಿವಾಳಿಯಾಗುವನು. ಅಂಥವನಿಗೆ ನೀನು ಸ್ವಧರ್ಮ ಮಾಡೆಂದು ಹೇಳುವುದು ನ್ಯಾಯವೇ? ಯಾರಿಗೆ ಯಾವ ವಿದ್ಯೆ, ಯಾವ ಕಲೆಯು ಚೆನ್ನಾಗಿ ಬರುತ್ತೋ ಅವರು ಅದನ್ನು ಅನುಷ್ಠಾನಮಾಡಲಿ. ಸೊಗಸಾದ ಬಡಗಿಯ ಕೆಲಸ ಬರುವ ಬ್ರಾಹ್ಮಣನಿಗೆ ಮನೆಕಟ್ಟುವುದನ್ನು ಬಿಟ್ಟು ಅವನು ಅದುವರೆಗೂ ಕೇಳದ ವೇದವನ್ನು ಅಭ್ಯಾಸಮಾಡೆಂದು ಹೇಳುವುದೂ, ಚೆನ್ನಾಗಿ ಉಳುವುದಕ್ಕೆ ಬರುವ ಬ್ರಾಹ್ಮಣನಿಗೆ ಅದನ್ನು ಬಿಡೆಂದು ಹೇಳುವುದೂ, ಗಿಣಿಯಂತೆ ಹೇಳಿದ್ದನ್ನು ಬಾಯಿಪಾಠಮಾಡುವ ಸಾಮರ್ಥ್ಯವುಳ್ಳ ಶೂದ್ರನಿಗೆ ''ವೇದವನ್ನು ಓದಬೇಡ, ಕೇವಲ ಸೇವಾವೃತ್ತಿಮಾಡು'' ಎನ್ನುವುದು ಇದೆಲ್ಲಾ ಹೇಗೆ ನ್ಯಾಯ? ಅಂಥವರು ತಮಗೆ ಚೆನ್ನಾಗಿ ಬರುವ ಕಲೆಯನ್ನು ಬಿಟ್ಟರೆ ನೂರು ರೂಪಾಯಿನಷ್ಟು ಪುಣ್ಯನಷ್ಟವಾಗುತ್ತೆ. ಕಲಿಯದ, ಬರದ ಸ್ವವೃತ್ತಿಯನ್ನು ಅನುಷ್ಠಾನ ಮಾಡಿದರೆ ಹತ್ತುರೂಪಾಯಿಯಷ್ಟು ಪುಣ್ಯ ಬರುತ್ತೆ. (ಉದಾ:- ವೆಂಕಣ್ಣಪಂಥನು ಹುಡುಗನಾಗಿದ್ದಾಗ ದನಕಾದಿದ್ದರೆ ಹೊಟ್ಟೆಗೆಬಟ್ಟೆಗೆ ತಾಪತ್ರಯವಿರಲಿಲ್ಲ. ಸ್ವವೃತ್ತಿ ಓದುಬರೆಯುವುದು ಕಲಿಯದ ಓದನ್ನು ನವಾಬ ಓದೆಂದದ್ದು ಪ್ರಾಣಕ್ಕೆ ಅಪಾಯ ಬಂತು.) ಇದಕ್ಕೇನು ಹೇಳುವಿ? ಎಂದರೆ ಧರ್ಮಸಾಮ್ರಾಜ್ಯಕ್ಕೆ ದೊರೆಯಾದ ಶ್ರೀಕೃಷ್ಣನು ಹೇಳುತ್ತಾನೆ.

''ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋಭಯಾವಹಃ॥ ''

ಹೇ ಪಾರ್ಥ ! ಸರ್ವಾಂಗ ಸಮೃದ್ಧಿಪೂರ್ವಕವಾಗಿ ಉತ್ಕೃಷ್ಟರೀತಿಯಿಂದ ಅನುಷ್ಠಿತವಾದ, ಪರಧರ್ಮಾತ್=ಎಂದರೆ ಅನ್ಯವರ್ಣಾಶ್ರಮೋಚಿತವಾದ ಧರ್ಮಕ್ಕಿಂತಲೂ ಅಂಗವೈಕಲ್ಯದಿಂದ (ಅಂಗಕೊರತೆಯಿಂದ) ಯುಕ್ತವಾಗಿದ್ದರೂ ಸ್ವವರ್ಣಾಶ್ರಮೋಚಿತವಾದ ಧರ್ಮವು ಶ್ರೇಯಸ್ಕರವು. (ಸಾಂಗವಾಗಿ ಆಚರಿಸಲ್ಪಟ್ಟರೂ ಪರಧರ್ಮವು ನರಕಪ್ರದವು. ಅಂಗನ್ಯೂನತೆಯಿಂದ ಸಹಿತವಾಗಿದ್ದರೂ ಸ್ವಧರ್ಮವು ಶ್ರೇಯಸ್ಕರವು ಎಂದು ಭಾವವು. ಈ ಅರ್ಥವನ್ನೇ ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳುತ್ತಾನೆ.)- ಸ್ವಧರ್ಮಾನುಷ್ಠಾನದಲ್ಲಿ ಮರಣವನ್ನು ಹೊಂದಿದರೂ ಶ್ರೇಯಸ್ಕರವು. ಅನ್ಯವರ್ಣಾಶ್ರಮೋಚಿತವಾದ ಕರ್ಮಾನುಷ್ಠಾನವು ಭಯಂಕರವು. (ಎಂದರೆ ನರಕಪ್ರದವಾಗುವುದೆಂದು ಭಾವ।)

ವಿಶೇಷ:- 1) ಸಾಂಗವಾಗಿ ಆಚರಿಸ್ಪಟ್ಟ ಪರಧರ್ಮಕ್ಕಿಂತ ಅಂಗವಿಕಲವಾದ ಸ್ವಧರ್ಮವು ಶ್ರೇಷ್ಠವು ಎಂಬ ವಾಕ್ಯಾರ್ಥದಿಂದ ಸಾಂಗವಾದ ಪರಧರ್ಮಾಚರಣೆಯು ಸ್ವಲ್ಪ ಶುಭಕರವು, ಅಂಗವಿಕಲವಾದರೂ ಸ್ವಧರ್ಮಾಚರಣೆಯು ಹೆಚ್ಚು ಶುಭಕರವು ಎಂಬ ಭ್ರಮ ಹುಟ್ಟುತ್ತೆ. ಇದು ದುರರ್ಥವು. ತಲೆಯೊಡೆಯುವುದಕ್ಕಿಂತ ಕಾಳು ಅಕ್ಕಿ ಭಿಕ್ಷುಕನಿಗೆ ಹಾಕಿ ಕಳುಹಿಸುವುದು ಉತ್ತಮ ಎಂಬಂತೆ. ವಿನೋದ ಮುದ್ರೆ. ಅಂಗಪೂರ್ಣವಾದರೂ ಪರಧರ್ಮಾಚರಣೆಯು ಪಾಪಕರವೇ. ಆದ್ದರಿಂದ ಅದನ್ನು ಪರಿತ್ಯಾಗಮಾಡಿ ಅಂಗವೈಕಲ್ಯವಾದರೂ ಸ್ವಧರ್ಮವನ್ನೇ ಆಚರಿಸಬೇಕೆಂಬುದೇ ಶ್ರೀಕೃಷ್ಣನ ಅಭಿಪ್ರಾಯವು.

2) ಈ ರೀತಿ ಶ್ರೀಕೃಷ್ಣನ ವಾಕ್ಯಗಳಿಂದ ಸ್ವಧರ್ಮವು, ಪರಧರ್ಮವು ಎಂಬ ಎರಡು ಪ್ರಕಾರವಾದ ವ್ಯವಸ್ಥೆಯು ಇರುವುದೆಂದು ನಿಶ್ಚಿತವಾಗುವುದು. ಉಪನಯನಾದಿ ಸಂಸ್ಕಾರಮಾತ್ರದಿಂದ ಬ್ರಾಹ್ಮಣ್ಯ ಬರುವುದಾಗಿದ್ದರೆ, ಮತ್ತೂ ಗಾಯತ್ರೀ ಜಪಾದಿಗಳನ್ನು ಮಾಡುವವನು ಬ್ರಾಹ್ಮಣನು, ಯುದ್ಧಾದಿಗಳನ್ನು ಮಾಡುವವನು ಕ್ಷತ್ರಿಯನು, ಕೃಷ್ಯಾದಿಗಳಲ್ಲಿ ಆಸಕ್ತನಾದವನು ವೈಶ್ಯನು, ಸೇವಾವೃತ್ತಿಯಲ್ಲಿ ರತನಾದವನು

ಶೂದ್ರನು ಎಂಬ ವ್ಯವಸ್ಥೆಯೇ ವೇದಾದಿ ಶಾಸ್ತ್ರಸಮ್ಮತವಾಗಿದ್ದರೆ ಇದು ಸ್ವಧರ್ಮವು, ಇದು ಪರಧರ್ಮವು ಎಂಬ ಭೇದದೃಷ್ಟಿಗೇ ಅವಕಾಶವಿರಲಿಲ್ಲ. ನಾಲ್ಕುವಿಧವಾದ ಆಚರಣೆಗಳೂ ಧರ್ಮರೂಪವಾಗಿಯೇ ಇರುತ್ತಿದ್ದವು. ಯಾರಿಗೆ ಯಾವ ಧರ್ಮದಲ್ಲಿ ಮನಃ ಪ್ರವೃತ್ತಿಯು ಅಧಿಕವೋ ಅಂಥವನು ಆ ಧರ್ಮಾನುಷ್ಠಾನವನ್ನು ಮಾಡಿ ಸುಖವನ್ನು ಹೊಂದಬಹುದಾಗಿತ್ತು. ಶ್ರೀಕೃಷ್ಣನಾದರೋ ಇಂಥಾ ಭ್ರಮೋತ್ಪತ್ತಿಗೇ ಅವಕಾಶಕೊಡದೆ (ಚತುರ್ವರ್ಣವೂ ತನ್ನಿಂದಲೇ ಸೃಷ್ಟಿಸಲ್ಪಟ್ಟು ಅನಾದಿಕಾಲದಿಂದ ಭಿನ್ನವಾಗಿರುವುದು ಎಂದು ಹೇಳಿ ನಾಲ್ಕು ವರ್ಣಗಳಿಗೂ ಭಿನ್ನಧರ್ಮಗಳು ವೇದವಿಹಿತವಾಗಿರುವುದೆಂದು ತಿಳಿಸಿ) ಇದು ಸ್ವಧರ್ಮವು, ಇದು ಪರಧರ್ಮವು ಎಂಬ ವ್ಯವಸ್ಥೆಯನ್ನು ಮಾಡಿ ಸ್ವಧರ್ಮಾನುಷ್ಠಾನದಿಂದ ಪುರುಷಾರ್ಥಪ್ರಾಪ್ತಿಯನ್ನೂ , ಪರಧರ್ಮಾಚರಣೆಯಿಂದ ನರಕಾದಿ ಅನರ್ಥಫಲಪ್ರಾಪ್ತಿಯನ್ನೂ ನಿರೂಪಿಸಿರುತ್ತಾನೆ. ಆದ್ದರಿಂದ ಶೂದ್ರನು ಎಷ್ಟೇ ಬುದ್ಧಿವಂತನಾದರೂ ಪ್ರವಚನವೇದಾಧ್ಯಯನಗಳನ್ನು ಮಾಡಿದರೆ ಶೂದ್ರನಿಗಿಂತಲೂ ನೀಚತೆಯನ್ನು ಹೊಂದಿ ಘೋರವಾದ ನರಕಗಳಿಗೆ ಬೀಳುವನು. ಬ್ರಾಹ್ಮಣನು ಎಷ್ಟೇ ಶಸ್ತ್ರಜ್ಞನಾದರೂ ನಾಪಿತವೃತ್ತಿಯನ್ನೂ, ಚರ್ಮದ ವ್ಯಾಪಾರವನ್ನೂ ಮಾಡಿದರೆ ಪತಿತನಾಗುವನು. ವೈಶ್ಯನು ಯುದ್ಧವನ್ನು ಮಾಡಿ ಕೋಟಿ ರೂಪಾಯಿಯನ್ನು ಸಂಪಾದನೆ ಮಾಡಿ ದಾನಮಾಡಿದರೆ ಏನು ಫಲವೋ ಅದಕ್ಕೂ ಅಧಿಕಫಲವನ್ನು ಚಿಲ್ಲರೆ ಅಂಗಡಿಯಲ್ಲಿ ಹತ್ತುರೂ ಸಂಪಾದನೆ ಮಾಡಿ ದಾನಮಾಡಿದರೆ ಹೊಂದುವನು. ಆದ್ದರಿಂದ ಅರ್ಜುನಾ ! ನೀನೇನೋ ಸಂನ್ಯಾಸ ಧರ್ಮವನ್ನು ಅಂಗವೈಕಲ್ಯವಿಲ್ಲದಂತೆ ನಡೆಸಲು ಸಮರ್ಥನೆಂಬುದನ್ನು ದ್ವಾರಕಿಯಲ್ಲೇ ತೋರಿಸಿಕೊಂಡಿದ್ದಿ. ಆದರೂ ನೀನು ಕ್ಷತ್ರಿಯನಿಗೆ ವಿಹಿತವಾದ ಯುದ್ಧವನ್ನು ಮಾಡಬೇಕೇ ಹೊರತು ಸಂನ್ಯಾಸಿಗಳಿಗೆ ವಿಹಿತವಾದ ಭಿಕ್ಷಾಟನಾದಿಗಳನ್ನು ಮಾಡಕೂಡದು. ಜನ್ಮಾಂತರದಲ್ಲಿ ಬ್ರಾಹ್ಮಣನಾಗಿ ಹುಟ್ಟಿದರೆ ಅದನ್ನು ಅವಶ್ಯಮಾಡಬಹುದು ಎಂದು ಭಾವ. ( ಉದಾ:- ಅಗಸರಕತ್ತೆ ಕಿರುಚಿ ದೊಣ್ಣೆ ಪೆಟ್ಟು ತಿಂದಿತು.)

36.. ಅವತಾರಿಕೆ:- ಇಷ್ಟರಿಂದ ''ಜ್ಞಾನಮಾರ್ಗವನ್ನು ಬಿಡಿಸಿ ನನ್ನನ್ನು ಕರ್ಮಮಾರ್ಗಕ್ಕೆ ಏಕೆ ಸೆಳೆದೆ?'' ಎಂಬ ಎರಡು ಅರ್ಥವುಳ್ಳ ಅರ್ಜುನನ ಪ್ರಶ್ನೆಗೆ ಶ್ರೀಕೃಷ್ಣನು ಉತ್ತರ ಹೇಳಿದಂತಾಯಿತು. ಏನೆಂದರೆ ಕರ್ಮಾಕರಣವು ತಪ್ಪು, ವಿಧ್ಯುಕ್ತಕರ್ಮವನ್ನೇ ಆಚರಿಸಬೇಕು. ಅದನ್ನು ನಿಷ್ಕಾಮವಾಗಿ ಆಚರಿಸಬೇಕು. ಅಂತಹ ನಿಷ್ಕಾಮಧರ್ಮಾನುಷ್ಠಾನಮಾಡುವಾಗ ಅಧಿಕಾರಿಯನ್ನು ಪೂರ್ವಸಂಸ್ಕಾರಗಳು ಬಲವಾಗಿ ದುರ್ವಿಷಯಗಳಿಗೆ ತಳ್ಳಿದರೆ ಆತನು ವಿವೇಕವನ್ನು ಉಪಯೋಗಿಸಿ ರಾಗದ್ವೇಷಾದಿ ಅರಿಷಡ್ವರ್ಗಗಳನ್ನು ನಿಗ್ರಹಿಸಿ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ನಿಷ್ಕಾಮಧರ್ಮವನ್ನು ಆಚರಿಸಬೇಕೆಂದು ಸಾರ. ಇಷ್ಟರಿಂದ ಅರ್ಜುನನ ಮನಸ್ಸಿನಲ್ಲಿ ಹೊಸಪ್ರಶ್ನೆಯುಂಟಾಯಿತು. ಧರ್ಮಮಾಡತಕ್ಕವನ ಮನಸ್ಸನ್ನು ಕೆಡಿಸತಕ್ಕವುಗಳು ರಾಗದ್ವೇಷಾದಿಗಳೆಂದಾದರೆ ಇವು ಎಷ್ಟು ದೋಷಗಳು- ಈ ದೋಷಗಳಲ್ಲಿ ಯಾವುದು ಪ್ರಬಲ? ಜಡವಾದ ಈ ದೋಷಕ್ಕೆ ಇಷ್ಟು ಸಾಮರ್ಥ್ಯವೇ? ಯಾವ ಚೇತನನಿಂದ ಮನುಷ್ಯನು ಪಾಪಕರ್ಮಗಳಲ್ಲಿ ಪ್ರೇರಿಸಲ್ಪಡುತ್ತಾನೆ? ಎಂಬ ವಿಷಯದಲ್ಲಿ ಅರ್ಜುನನು ಪ್ರಶ್ನೆ ಮಾಡುತ್ತಾನೆ.

ಅರ್ಜುನ ಉವಾಚ:-

ಶ್ಲೋಕ '' ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥''

ಹೇ ಕೃಷ್ಣ! ಜಗತ್ಪ್ರೇರಕನಾದ ಹರಿಯನ್ನು ಮತ್ತು ತತ್ವಾಭಿಮಾನಿದೇವತೆಗಳು ಇವರನ್ನು ಬಿಟ್ಟು ಯಾವ ಪಾಪಾತ್ಮನಿಂದ ಪ್ರೇರಿತನಾಗಿ, ರಾಗದ್ವೇಷಗಳ ಪೈಕಿ ಬಲಿಷ್ಠವಾದ ಯಾವ ಒಂದರಿಂದ ಪ್ರೇರಿತನಾಗಿ ಅಧಿಕಾರಿ ಸಾಧಕಪುರುಷನು ಪಾಪಾಚಾರವನ್ನು ಮಾಡಕೂಡದೆಂದು ಇಚ್ಛೆಯುಳ್ಳವನಾಗಿದ್ದರೂ ಬಲಾತ್ಕಾರದಿಂದ ಸೆಳೆಯಲ್ಪಟ್ಟವನಂತೆ ಪಾಪಕರ್ಮವನ್ನು ಮಾಡಿಬಿಡುತ್ತಾನೆ.

ವಿಶೇಷ:- (1) ರಾಗದ್ವೇಷಾದಿಗಳಲ್ಲಿ ಶ್ರೇಷ್ಠದೋಷಯಾವುದು. (2)ಅದಕ್ಕೆ ದೇಹದಲ್ಲಿ ಪ್ರವರ್ತಕನಾದ ಪಾಪಪುರುಷನಾರು ಎಂದು ಎರಡು ಪ್ರಶ್ನೆಗಳು.

★★37 ಅವತಾರಿಕೆ:- ಶ್ರೀ ಕೃಷ್ಣನು ಉತ್ತರ ಹೇಳುತ್ತಾನೆ.

ಶ್ರೀ ಭಗವಾನುವಾಚ

''ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ ।
ಮಹಾಶನೋ ಮಹಾಪಾಪ್ಮಾವಿದ್ಧ್ಯೇನಮಿಹವೈರಿಣಂ ॥ ''

ಅರ್ಜುನ! ಮೋಕ್ಷಾರ್ಥವಾಗಿ ಸಾಧನಮಾಡುವ ಅಧಿಕಾರಿಯನ್ನು ದುಷ್ಟಕಾರ್ಯಗಳಲ್ಲಿ ಪ್ರವರ್ತಿಸುವಂತೆ ಮಾಡುವುದು ಕಾಮ ನಾಮಕನಾದ ಕಾಲನೇಮಿಯಿಂದ ಅಭಿಮನ್ಯವಾದ ವಿಷಯಕಾಮವು. ಕಾಮವು ಪ್ರಬಲದೋಷವು. ಇತರದೋಷಗಳಿಗೂ ಮೂಲಕಾರಣವು. ಈ ಕಾಮವೇ ಕ್ರೋಧಕ್ಕೆ

ಕಾರಣವಾದ್ದರಿಂದ ಕ್ರೋಧವೆಂದು ಕರೆಯಲ್ಪಡುವುದು. (ತನ್ನಿಂದಿಷ್ಟವಾದ ವಿಷಯ- ಪ್ರಾಪ್ತಿಯು ಪ್ರತಿರುದ್ಧವಾದರೆ ಪ್ರತಿರೋಧಮಾಡಿದವನ ವಿಷಯದಲ್ಲಿ ಕ್ರೋಧವು ಉಂಟಾಗುವುದು.) ಕಾಮದಿಂದ ಹುಟ್ಟಿದ ಈ ಕ್ರೋಧವು ರಜೋಗುಣಮೂಲಕವಾಗಿ ಪರಿಣಾಮಹೊಂದಿ ಉಲ್ಬಣವಾಗುವುದು. ಇಂಥಾ ಕಾಮವು ಎಷ್ಟುಭೋಗದ್ರವ್ಯಗಳನ್ನು ಕೊಟ್ಟರೂ ತೃಪ್ತಿಹೊಂದತಕ್ಕದ್ದಲ್ಲ. ಬ್ರಹ್ಮಹತ್ಯಾದಿ ಮಹಾಪಾಪಗಳಿಗೆ ಕಾರಣವು. ಕಾಲನೇಮಿಯಿಂದ ಅಭಿಮನ್ಯವಾದ ಈ ಕಾಮವೇ ಮೋಕ್ಷಮಾರ್ಗಕ್ಕೆ ಮುಖ್ಯಶತ್ರುವೆಂದು ತಿಳಿ.

ವಿಶೇಷ:- 1. ಮೋಕ್ಷಸಾಧಕನಿಗೆ ಮುಖ್ಯಶತ್ರುವು ದುರ್ವಿಷಯೇಚ್ಛೆಯು. ಇವು ಕ್ರೋಧಾದಿ ಸಕಲ ಮನೋದೋಷಗಳಿಗೂ ಮೂಲಕಾರಣವು. (ಸುಳಾದಿ : ಧ್ರುವತಾಳ ವ್ಯಾಸರಾಜರು:- ಕಾಮವೆಂಬ ಹೆಚ್ಚಿನ ಕಾಡುಗಿಚ್ಚೊಂದು ಕಡೆಯಲೆನ್ನ ಸುಡುತಲಿದೆ।) ಆದ್ದರಿಂದ ದುಷ್ಟಕಾಮವನ್ನು ತ್ಯಜಿಸಿಬಿಟ್ಟರೆ ಇತರಕ್ರೋಧಲೋಭಾದಿ ದೋಷಗಳು ತಾವಾಗಿಯೇ ಸಾಯುವುವು. ಆದ್ದರಿಂದ ನೀನು ದುಷ್ಟಕಾಮವನ್ನು ಎಂದರೆ ''ನನ್ನ ಬಂಧುಗಳು ಸಾಯಬಾರದು''ಎಂಬ ದುಷ್ಟ ಇಚ್ಛೆಯನ್ನು ತ್ಯಜಿಸಿಬಿಟ್ಟರೆ ಕ್ರೋಧಾದಿಗಳ ಉತ್ಪತ್ತಿಗೇ ಅವಕಾಶವಿರುವುದಿಲ್ಲ. ಅದು ಬಿಟ್ಟು ನಿನ್ನ ನೆಂಟರೊಂದಿಗೆ ನೀನು ನೆಮ್ಮದಿಯಾಗಿರಬೇಕೆಂದಿದ್ದರೆ ಕೃಷ್ಣನು ಅವರನ್ನೆಲ್ಲಾ ಕೊಲ್ಲಬೇಕೆಂದು ಹೇಳುತ್ತಾನಲ್ಲಾ ಎಂದು ನನ್ನಮೇಲೆ ಕ್ರೋಧಬರುತ್ತೆ. ಆ ಕಾಮವೇ ಇಲ್ಲದಿದ್ದರೆ ನನ್ನ ಮೇಲೆ ಕೋಪವೂ ಹೋಗುತ್ತದೆಂದು ಭಾವ.

2. ಕಾಮವನ್ನು ಏತಕ್ಕೆ ನಾಶಮಾಡಬೇಕು. ಕಾಮಿತದ್ರವ್ಯವನ್ನು ಒದಗಿಸಿಕೊಟ್ಟು ಅದರಿಂದಾಗುವ ಉಪದ್ರವವನ್ನು ತಪ್ಪಿಸಿ ಕೊಳ್ಳಬಾರದೇ? ಎಂದರೆ:- ''ಮಹಾಶನಃ''= ಆ ಕಾಮವು(ಇಷ್ಟು ದೊರೆತರೆ ಮತ್ತೆ ಇಷ್ಟುಬೇಕೆಂಬಂತೆ) ಅಷ್ಟು ದೊರೆತರೆ ಮತ್ತೆ ಅಷ್ಟರಾಶೆ) ಈ ಕ್ರಮದಿಂದ ಹೆಚ್ಚುತ್ತೇ ಹೊರತು ಕಮ್ಮಿಯಾಗುವುದಿಲ್ಲ. ಶ್ಲೋಕ:- ''ಇಚ್ಛತಿ ಶತೀ ಸಹಸ್ರಂ ಸ ಸಹಸ್ರಃ ಕೋಟಿಮೀಹತೇ ಕರ್ತುಂ । ಕೋಟಿಯುತೋऽಪಿ ನೃಪತ್ವಂ ನೃಪೋऽಪಿ ಬತ ಚಕ್ರವರ್ತೀತ್ವಂ । ಚಕ್ರಧರೋऽಪಿ ಸುರತ್ವಂ ಸುರೋऽಪಿ ಸುರರಾಜ್ಯಮೀಹತೇ ಕರ್ತುಂ ಸುರರಾಜೋऽಪ್ಯೂರ್ಧ್ವಗತಿಂ ತಥಾಪಿ ನ ನಿವರ್ತತೇ ತೃಷ್ಣಾ ॥

ಆದ್ದರಿಂದ ಅಷ್ಟು ಪ್ರಬಲವಾಗಲು ಕಾರಣವೇನೆಂದರೆ, ಮಹಾಪಾಪಿಯೂ ವಿಷ್ಣುದ್ವೇಷಿಯೂ ಆದ ಕಾಲನೇಮಿಯೇ ಅದಕ್ಕೆ ಅಭಿಮಾನಿಯು. ಆತನಿಗೆ ಬ್ರಹ್ಮದೇವರ ವರಬಲ. ಸಮಸ್ತದೇವತೆಗಳಿಂದಲೂ ಅವನು ಅವಧ್ಯನು. ಆತನು ವಿಷ್ಣುವಿನಿಂದಲೇ ವಧ್ಯನು. ಜೀವರು ಮೋಕ್ಷೋಪಾಯವನ್ನು ಆಚರಿಸುವುದಕ್ಕೆ ವಿಘ್ನಮಾಡುವವನು ಇಂಥಾಪಾಪಿಯು ಎಂದು ಶ್ರೀಕೃಷ್ಣನ ಭಾವ.

''ಮನೆಯೆಂಬ ಆಸೆಯು ಎನ್ನ ಮುಂದುಗೆಡಿಸುತಿದೆ । ಮನೆವಾರುತೆಯು ಎನ್ನ ಭಂಗಪಡಿಸುತಿದೆ । ಸುತರಾಸೆಯು ಎನ್ನ ದೈನ್ಯ ಪಡಿಸುತಿದೆ । ಇನಿತಾಸೆಯುಳಿದು ಬುದ್ಧಿ ನಿನ್ನಲ್ಲಿ। ನಿಲುವಂತೆ ಮಾಡೋ ಸಿರಿಪುರಂದರವಿಠಲರಾಯ ॥''

★★38) ಅವತಾರಿಕೆ:- ಈ ಕಾಮವು ಅಧಿಕಾರಿಯನ್ನು ಹೇಗೆ ಕೆಡಿಸುವುದು ? ಅನೇಕ ಪಾಪಪ್ರೇರಕ ಅಸುರರಿರುವಾಗ ಈ ಕಾಲನೇಮಿಗೇ ವಿಶೇಷಬಲವಿದೆ ಎಂದು ಹೇಗೆ ತಿಳಿಯುವುದು? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ:-

''ಧೂಮೇನಾವ್ರಿಯತೇ ವಹ್ನಿರ್ಯಥಾऽऽದರ್ಶೋ ಮಲೇನ ಚ ।
ಯಥೋಲ್ಬೇನಾವೃತೋ ಗರ್ಭಸ್ತಥಾ ತೇನೇದಮಾವೃತಂ ॥''

ಅರ್ಜುನ! ಅಗ್ನಿಯು ಹೇಗೆ ಹೊಗೆಯಿಂದ ಮುಚ್ಚಲ್ಪಡುತ್ತದೆಯೋ ಹಾಗೆಯೇ ಸಾತ್ವಿಕಜೀವಸಮುದಾಯವು ಕಾಲನೇಮಿ ಸಹಿತವಾದ ದುಷ್ಟಕಾಮದಿಂದ ಮುಚ್ಚಲ್ಪಟ್ಟಿದೆ. ಮತ್ತೂ ಹೇಗೆ ಕನ್ನಡಿಯು ಧೂಳಿನಿಂದ ಮುಚ್ಚಲ್ಪಡುತ್ತದೆಯೋ ಹಾಗೆ ರಾಜಸಸಂಸಾರಿ
ಜೀವಸಮುದಾಯವು ಈ ದುಷ್ಟಕಾಮದಿಂದ ಮುಚ್ಚಲ್ಪಟ್ಟಿದೆ. ಮತ್ತು ಹೇಗೆ ಗರ್ಭವು ಗರ್ಭಚೀಲದಿಂದ ಮುಚ್ಚಲ್ಪಟ್ಟಿದೆಯೋ ಹಾಗೆ ತಾಮಸ ಜೀವಸಮುದಾಯವು ದುಷ್ಟಕಾಮದಿಂದ ಮುಚ್ಚಲ್ಪಟ್ಟಿದೆ.

ವಿಶೇಷ:- 1. ಕಾಲನೇಮಿಯೆಂಬ ಪಾಪಿಯು, ತನಗೆ ವರಕೊಟ್ಟ ಬ್ರಹ್ಮದೇವರನ್ನು ಬಿಟ್ಟು ಉತ್ತಮ ಮಧ್ಯಮ ಅಧಮಜೀವ-ಸಮುದಾಯವನ್ನು ಪ್ರವೇಶಿಸಿ ಅವರ ಮನಸ್ಸಿನಲ್ಲಿ ಜ್ಞಾನವು ಹುಟ್ಟದಂತೆ ಮಾಡಿಬಿಡುತ್ತಾನೆ. ಆ ತತ್ವಜ್ಞಾನದ ಕಾರ್ಯವು ಆಗದಂತೆ ಮಾಡಿ ಅವರು ಅಕಾರ್ಯವನ್ನು ಮಾಡುವಂತೆ ಮಾಡಿಬಿಡುತ್ತಾನೆ ಎಂದು ಭಾವ. ಮದ್ಯವು ದೇಹಪ್ರವೇಶಮಾಡಿದರೆ ಜೀವನನ್ನು ಪರವಶನನ್ನಾಗಿ ಮಾಡಿ ಅವನಿಂದ ಅಕಾರ್ಯವನ್ನು ಮಾಡಿಸಿಬಿಡುವಂತೆ ದುಷ್ಟಕಾಮವು ಜೀವನ ಮನಸ್ಸನ್ನು ಕೆಡಿಸಿ ಅವನಿಂದ ಅನ್ಯಾಯಗಳನ್ನು (★★ ಇಲ್ಲಿ ಒಂದು ಪೇಜು ಇಲ್ಲ.++++ ಹೊಳೆಯುವಂತೆ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಂಡು ದುರ್ವಿಷ- ಯೇಚ್ಛೆಯನ್ನು ಸ್ವಲ್ಪ ಅಧಿಕಪ್ರಯತ್ನದಿಂದ ಕಳೆದುಕೊಂಡರೆ ಪುನಃ ಸ್ವಕಾರ್ಯದಲ್ಲಿ ಶಕ್ತವಾಗುತ್ತದೆ. )

ಅಧಮರಜ್ಞಾನವು ದುಷ್ಟಕಾಮದಿಂದ ಬದ್ಧವಾಗಿರುವ ನಿಮಿತ್ತ ಅವರು ದುಷ್ಟಕಾಮವನ್ನು ಬಿಡಬೇಕಾದರೆ ಗರ್ಭಚೀಲವನ್ನು ಕತ್ತರಿಸಿ ತೆಗೆಯುವಂತೆ ತುಂಬಕಷ್ಟಪಡಬೇಕು. ಹೀಗೆ ತ್ರಿವಿಧಜೀವರಲ್ಲೂ ಜ್ಞಾನಹುಟ್ಟುವುದಕ್ಕೇ ಅವಕಾಶಕೊಡದಂತೆ ಪ್ರತಿಬಂಧಕ- ವಾದ್ದರಿಂದ ಈ ಕಾಮ ಮುಮುಕ್ಷುಗಳಿಗೆ ಮಹಾವೈರಿಯು ಎಂದು ಭಾವ.

★★ 39 ಅವತಾರಿಕೆ:- ಕೃಷ್ಣಾ ! ಶಾಸ್ತ್ರಜ್ಞಾನವು ಹುಟ್ಟದಂತೆ ಈ ಕಾಮವು ಮಾಡಿಬಿಡುತ್ತದೆ ಎಂದು ಹೇಳಿದಿ. ಶಾಸ್ತ್ರಜ್ಞಾನವು ಹುಟ್ಟಿದ ಮೇಲೆ ಅಧಿಕಾರಿಯ ಮನಸ್ಸಿನಲ್ಲಿ ಕಾಮವು ಪ್ರವೇಶಿಸಿದರೆ, ಅವನಿಗೇನಾಗುತ್ತೆ? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ:-

''ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯವೈರಿಣಾ ।
ಕಾಮರೂಪೇಣ ಕೌಂತೇಯ ದುಷ್ಪೂರೇಣಾऽನಲೇನ ಚ ॥''

ಅರ್ಜುನ ! ಮಹಾಪಂಡಿತನ ಶಾಸ್ತ್ರಜನ್ಯಜ್ಞಾನವಾದರೂ, ತೃಪ್ತಿಪಡಿಸುವುದಕ್ಕೆ ಬಹುಕಷ್ಟವಾದ, ಎಷ್ಟುಕೊಟ್ಟರೂ ಮತ್ತಷ್ಟು ಕೇಳುವ, ಯಾವಾಗಲೂ ಮೋಕ್ಷಸಾಧನೆಗೆ ನಿಯಮೇನ ವಿರುದ್ಧವನ್ನೇ ಮಾಡುವ ಈ ಕಾಮದಿಂದ ಮುಚ್ಚಲ್ಪಟ್ಟು ಹೋಗುತ್ತದೆ. ಎಂದರೆ ಅಪರೋಕ್ಷಜ್ಞಾನವನ್ನು ಹುಟ್ಟಿಸುವುದಕ್ಕೆ ಅಸಮರ್ಥವಾಗಿ ಹೋಗುತ್ತೆ.

ವಿಶೇಷ:- 1. ''ಜ್ಞಾನಿನಃ ಜ್ಞಾನಂ ಆವೃತಂ'' ಎಂಬ ಕೃಷ್ಣೋಕ್ತಿಯು ಕೈಮುತ್ಯಯುಕ್ತಿಸೂಚಕವು. ಕಾಮದಿಂದ ಗ್ರಸ್ತವಾದಾಗ ಶಾಸ್ತ್ರಜ್ಞಾನಪೂರ್ಣನಾದವನ ಜ್ಞಾನವೂ ಕೂಡ ಅದರಕಾರ್ಯವಾದ ಅಪರೋಕ್ಷಜ್ಞಾನವನ್ನು ಹುಟ್ಟಿಸಲಾರದು. ಹೀಗಿರುವಲ್ಲಿ ಅಜ್ಞಾನಿಯ ಜ್ಞಾನವು ಎಂದರೆ ಶಾಸ್ತ್ರಿದದೇ ಹರಿಕಥೆ, ಪುರಾಣಶ್ರವಣಾದಿಗಳಿಂದ ತತ್ವಜ್ಞಾನವನ್ನು ಹೊಂದಿದವನ ಜ್ಞಾನವನ್ನು ಕಾಮವು ನಾಶಮಾಡಿಬಿಡುತ್ತೆ ಎಂದು ಹೇಳಬೇಕಾದ್ದೇನು? ಆ ಜ್ಞಾನವು ಆ ಅಧಿಕಾರಿಗೆ ಪುಣ್ಯತಂದು ಕೊಡದಂತೆ ಹಾಳು ಕಾಮವು ಪ್ರಬಲಲೋಭ, ವೇಶ್ಯಾಸಂಗ, ಉತ್ತಮದ್ರೋಹ, ಗಂಟುಹೊಡೆಯುವಂತೆ ನ್ಯಾಸಾಪಹಾರಾದಿಗಳನ್ನು ಆ ಅಧಿಕಾರಿಯಿಂದ ಮಾಡಿಸಿ ಜ್ಞಾನಸಂಪಾದಿಸಿದವನನ್ನೂ ನರಕಕ್ಕೆ ಹಾಕಿಬಿಡುತ್ತೆ ಎಂದು ತಾತ್ಪರ್ಯ.

ದೃಷ್ಟಾಂತ:- ಗುರುವು ತನ್ನ ಶಿಷ್ಯನ ಹೆಂಡತಿಯನ್ನು ಕಾಮಿಸಿ ಆಕೆಯಿಂದ ''ನಿಮ್ಮ ಶಾಸ್ತ್ರಜ್ಞಾನಯುಕ್ತ ಮನಸ್ಸು ಏಕೆ ಕೊಳೆಯುತ್ತಿದೆ. (...) ಎಂದೆನಿಸಿಕೊಂಡ ಕಥೆ.

2. ಈ ಕಾಮವು ದುಷ್ಪೂರವು. ಏಕೆಂದರೆ, ಇದಕ್ಕೆ ವಿಷಯವಾದ ವಸ್ತು ಕೆಲವು ವೇಳೆ ಸಿಕ್ಕತಕ್ಕದ್ದೇ ಅಲ್ಲ. ಉದಾ:- ಎಲ್. ಎಸ್ ಪಾಸಾಗಿದೆ. ದಿವಾನಗಿರಿ ಬಯಕೆ ಇಟ್ಟಿರುತ್ತಾನೆ. ಕಷ್ಟಪಟ್ಟು ದಿವಾನಗಿರಿಗೆ ಬಂದರೂ ತಿರುಗಿ ರಾಜಪದವಿಯನ್ನು ಕೋರುತ್ತಾನೆ. ಸಾಕೆಂದು ಹೇಳಿದವನೇ ಅಲ್ಲ. ಹೀಗೆ ವಿಷ್ಣುವೈರಿಯಾದ ಕಾಲನೇಮಿಯಿಂದ ಪ್ರೇರಿತವಾದ ದುಷ್ಟಕಾಮವು ತತ್ವಜ್ಞಾನವು ಹುಟ್ಟದಂತೆ ಜೀವರಿಗೆ ಮೋಕ್ಷಮಾರ್ಗದಲ್ಲಿ ಅಡ್ಡಿಮಾಡುತ್ತೆ.

ಅಟ ತಾಳ:-

ಭೋಗಿಯಾಗಿ ಬಲು ಸುಖಪಟ್ಟ ಕಾಲಕ್ಕು । ಯೋಗಿಯಾಗಿ ಮಂಡೆ ಬೋಳಿಸಿದಕಾಲಕ್ಕು । ರೋಗಿಯಾಗಿ ಮನ ಶೇರಿದ ಕಾಲಕ್ಕು ವಾಗರವುಂಡು ತೃಪ್ತಿಯಾದ ಕಾಲಕ್ಕೂ । ತಾಗಿಕೊಂಡು ನಿತ್ಯದುಃಖಿಯಾದಕಾಲಕ್ಕು । ತೂಗುವ ತಕ್ಕಡಿವಳಗಿಟ್ಟಕಾಲಕ್ಕು । ಜೋಗಿಯಾಗಿ ಪೋಗಿ ತಿರಿತಿಂದ ಕಾಲಕ್ಕು । ಲೋಗಾರಕೆಂದಾಧಿಕವಾದ ಕಾಲಕ್ಕು । ಸಾಗರದಗಲ ಹೊನ್ನಿನ ಹಾಸಿಗೆ ಹಾಸಿ । ಜಾಗುಗೊಳಿಸದಲೆ ಹೊರಳಿದ ಕಾಲಕ್ಕು । ಈ ಗುಣಬಿಡದಯ್ಯ ಅನಂತಕಾಲಕ್ಕೆ । ಭೂಗೋಳದೊಳಗಿಂಥಾ ಆಶೆಬಡಕನಾನು । ಸಾಗರಸುತಪತಿ ವಿಜಯವಿಠಲ ಭವರೋಗ ಮಾನವಗೆ ಅಪಥ್ಯವು ಇದು ॥ 4 ॥

ಪೂರ್ವಪುಣ್ಯದಿಂದ ತತ್ವಜ್ಞಾನಹುಟ್ಟಿದರೂ ಅಪರೋಕ್ಷಜ್ಞಾನವು ಹುಟ್ಟದಂತೆ ದೋಷವನ್ನು ತಂದುಹಾಕಿಬಿಡುತ್ತೆ. ಆದ್ದರಿಂದ ಇದು ಮುಮುಕ್ಷುಗಳಿಗೆ ನಿಯಮೇನ ವೈರಿಯು. ಇದನ್ನು ಸಂಹರಿಸಲೇ ಬೇಕು ಎಂದು ಭಾವ. ದೃಷ್ಟಾಂತ : ಅಂಧಕಾಸುರ.

★★40:- ಅವತಾರಿಕೆ:-ಇದರಮೇಲೆ ಪ್ರಶ್ನೆ:- ಹೇ ಕೃಷ್ಣ ! ಈ ಚೇತನಾಚೇತನಕಾಮವು ಎಲ್ಲಿರುತ್ತೆ. ಶತ್ರುವನ್ನು ಕೊಲ್ಲಬೇಕಾದರೆ ಅವರು ಇರುವಸ್ಥಳವನ್ನು ತಿಳಿಯಬೇಕಲ್ಲವೇ? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ:-

''ಇಂದ್ರಿಯಾಣಿ ಮನೋಬುದ್ಧಿರಸ್ಯಾಧಿಷ್ಠಾನಮುಚ್ಯತೇ ।
ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಂ ॥''

ಈ ಕಾಮಾಖ್ಯ ಶತ್ರುವಿಗೆ ಇಂದ್ರಿಯಗಳೂ, ಮನಸ್ಸೂ, ಬುದ್ಧಿಯೂ ವಾಸಸ್ಥಾನಗಳು. ಈ ಕಾಮವು ಇವುಗಳಿಂದ(ಇಂದ್ರಿಯ ಮನೋಬುದ್ಧಿಗಳಿಂದ) ಜ್ಞಾನವನ್ನು ತಿರೋಧಾನ ಹೊಂದಿಸಿ ಎಂದರೆ ಕ್ವಚಿತ್ ಜ್ಞಾನವನ್ನೇ ಹುಟ್ಟಗೊಡಿಸದೇ, ಕ್ವಚಿತ್ ಜ್ಞಾನವು ಹುಟ್ಟಿದರೂ ಅದು ಧ್ಯಾನೋಪಯೋಗಿಯಾಗದಂತೆ

ವ್ಯರ್ಥಗೊಳಿಸಿ ಜೀವನನ್ನು ಮೋಹಿತನನ್ನಾಗಿ ಮಾಡುತ್ತೆ ಎಂದರೆ ವಿಷಯ ಪ್ರಪಂಚದಲ್ಲೇ ಬಂಧಿಸುತ್ತೆ.

★★41 ಅವತಾರಿಕೆ:-ಹಾಗಾದರೆ ನಾನು ಅದನ್ನು ಹೇಗೆ ಕೊಲ್ಲಬೇಕು? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ:-

''ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ।

ಪಾಪ್ಮಾನಂ ಪ್ರಜಹಿಹ್ಯೇನಂ ಜ್ಞಾನವಿಜ್ಞಾನನಾಶನಂ ॥''

ಭರತಶ್ರೇಷ್ಠಾ ! ಇಂದ್ರಿಯದ್ವಾರಾ ಕಾಮವು ಬುದ್ಧಿಯನ್ನು ಕೆಡಿಸುವುದರಿಂದ, ನೀನು ಮೊದಲು ಇಂದ್ರಿಯಗಳನ್ನು ನಿಗ್ರಹಿಸಿ (ನಿಷಿದ್ಧವಿಷಯಸುಖ ಸನ್ನಿಕರ್ಷವಾಗದಂತೆ ಮಾಡಿ) ಕ್ರಮವಾಗಿ ಪರೋಕ್ಷಜ್ಞಾನವನ್ನೂ ಅಪರೋಕ್ಷಜ್ಞಾನವನ್ನೂ ಸಹ ನಾಶಮಾಡುವಂಥಾ ಈ ಪಾಪಿಯನ್ನು ಸಂಹರಿಸು .

ವಿಶೇಷ: ಕಾಮನಾಶಕ್ಕೆ ಪ್ರಥಮಸೋಪಾನವು ಇಂದ್ರಿಯಜಯವು. ಇಂದ್ರಿಯಜಯವುಳ್ಳವರಲ್ಲಿ ಕಾಮವು ಪ್ರವೇಶಿಸಲಾರದು. ಪ್ರವಿಷ್ಟಕಾಮವೂ ಸುಟ್ಟುಹೋಗುತ್ತೆ ಎಂದು ಭಾವ.

★★42/43. ಅವತಾರಿಕೆ:- ಸ್ವಾಮಿ ! ಇದು ಹೇಗೆ ಶಕ್ಯವಾಗುತ್ತೆ? ದುಷ್ಟಕಾಮವು ಶರೀರವನ್ನೂ ಇಂದ್ರಿಯಗಳನ್ನೂ ಮನಸ್ಸನ್ನೂ ಬುದ್ಧಿಯನ್ನೂ ಪ್ರವೇಶಿಸಿ ಕುಲಗೆಡಿಸಿರುವಾಗ ಇಂದ್ರಿಯಗಳನ್ನು ಸರಿಪಡಿಸಿಕೊಳ್ಳುವುದು ಹೇಗೆ? ಶತ್ರುವು ತೋಟವನ್ನು ಪ್ರವೇಶಿಸಿ ತೋಟಗಾರನನ್ನು ಬಂಧಿಸಿರುವಾಗ ಆ ತೋಟಗಾರನು ತನ್ನ ಶತ್ರುವನ್ನು ಹೇಗೆ ನೂಕುವುದಕ್ಕಾದೀತು? ಕಾಮದಿಂದ ಕೆಟ್ಟು ಹೋದ ಮನಸ್ಸು ಮತ್ತು ಇಂದ್ರಿಯಗಳಿಂದ ಇಂದ್ರಿಯನಿಗ್ರಹವನ್ನು ಮಾಡುವುದು ಹೇಗೆ? ಎಂದರೆ ಶ್ರೀಕೃಷ್ಣನು ಹೇಳುತ್ತಾನೆ.

''ಇಂದ್ರಿಯಾಣಿ ಪರಾಣ್ಯಾಹುರಿಂದ್ರಿಯೇಭ್ಯಃ ಪರಂ ಮನಃ।

ಮನಸಸ್ತು ಪರಾಬುದ್ಧಿಃ ಯೋ ಬುದ್ಧೇಃ ಪರತಸ್ತು ಸಃ ॥

ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ।

ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ॥

ಅರ್ಥ:- ಶರೀರಮಾನಿದೇವತೆಗಳಿಂದ ಇಂದ್ರಿಯದೇವತೆಗಳು ಶ್ರೇಷ್ಠರು. ಇಂದ್ರಿಯಾಭಿಮಾನಿದೇವತೆಗಳಿಗಿಂತ ಮನೋಭಿಮಾನಿ ದೇವತೆಗಳು(ಗರುಡಶೇಷರುದ್ರರು) ಶ್ರೇಷ್ಠರು. ಮನೋಭಿಮಾನಿದೇವತೆಗಳಿಗಿಂತ ಬುದ್ಧಿದೇವತೆಗಳು (ಭಾರತೀಸರಸ್ವತೀಗಳು) ಶ್ರೇಷ್ಠರು. ಬುದ್ಧಿಮಾನಿ ದೇವತೆಗಳಿಗಿಂತಲೂ ವಿಶೇಷ ಉತ್ತಮನಾಗಿ ಅತ್ಯಂತವಿಲಕ್ಷಣನಾದವನು ಸಃ= ನಿಖಿಲಸಾರಭೂತನಾದ ಸರ್ವೋತ್ತಮನಾದ ಪರಮಾತ್ಮನು.

ಎಲೈ ಮಹಾಬಾಹೋ ! ಬುದ್ಧ್ಯಾದಿ ಸಕಲತತ್ವನಿಯಾಮಕರಾದ ಲಕ್ಷ್ಮ್ಯಾದಿ ದೇವತೆಗಳಿಗೂ ಉತ್ತಮನಾದ ಪರಮಾತ್ಮನನ್ನು ತಿಳಿದು ಮನಸ್ಸನ್ನು ಬುದ್ಧಿಯಿಂದ ನಿಗ್ರಹಿಸಿ ಎಂದರೆ ವಿಷಯಗಳಿಗೆ ಹೋಗದಂತೆ ನಿಶ್ಚಲವನ್ನಾಗಿ ಮಾಡಿ, ಬಹುಕಷ್ಟದಿಂದ ನಿವರ್ತನೀಯನಾದ ಈ ಕಾಮಾಖ್ಯ ಶತ್ರುವನ್ನು ಸಂಹರಿಸು.

ನಾರಾಯಣನನ್ನು ಸರ್ವೋತ್ತಮನಾದ ನೀನು ನನ್ನನ್ನು ಜಿತೇಂದ್ರಿಯನನ್ನಾಗಿ ಮನೋಬುದ್ಧಿಗಳಲ್ಲಿ ಪ್ರವಿಷ್ಟನಾದ ಕಾಲನೇಮಿ ಯನ್ನು ಕೊಂದು ಆಯಾಯಾ ದೇವತೆಗಳಿಂದಲೂ ಜೀವನಿಗೆ ಅನುಗ್ರಹಮಾಡಿಸಿ ದುಷ್ಟಕಾಮವು ಅಧಿಕಾರಿಯನ್ನು ಬಾಧಿಸದಂತೆ ಮಾಡುವನು. ಹೀಗೆ ಮಾಡಿ ಸಾಮಾನ್ಯ ಉಪಾಯಗಳಿಂದ ಇಂದ್ರಿಯಜಯವು ಕಷ್ಟವಾದರೂ ಪರಮಾತ್ಮನ ಉಪಾಸನೆಯನ್ನು ಮಾಡಿದರೆ ಅದು ಸಾಧ್ಯವಾಗುವುದೆಂದು ಭಾವ.

2. ಇಂದ್ರಿಯಜಯಕ್ಕಾಗಿ ಪರಮಾತ್ಮನನ್ನು ಶರಣುಹೊಂದು ಎಂದು ಅಷ್ಟೇ ಹೇಳದೇ ಶರೀರದೇವತೆಗಳಿಗಿಂತ ಇಂದ್ರಿಯ ದೇವತೆಗಳು ಅವರಿಗಿಂತ ಮನೋಮಾನಿಗಳು, ಮನೋಮಾನಿಗಳಿಗಿಂತ ಬುದ್ಧಿಮಾನಿಗಳು, ಬುದ್ಧ್ಯಭಿಮಾನಿಗಳಿಗಿಂತ, ತು=ಪರ ಮಾತ್ಮನು ಶ್ರೇಷ್ಠನು ಮತ್ತು ವಿಲಕ್ಷಣನು. ಅಂಥವನನ್ನು ನೀನು ಭಜಿಸು ಎಂದು ಏಕೆ ಹೇಳಿದನೆಂದರೆ:-

ಇತರ ದೇವತೆಗಳೂ ವಿಷ್ಣೂಪಾಸನೆಯಿಂದಲೇ ಕಾಲನೇಮಿಯ ಬಾಧೆಯನ್ನು ತಪ್ಪಿಸಿಕೊಂಡು ಇಂದ್ರಿಯಜಯವನ್ನು ಹೊಂದಿ ಇಂದ್ರಿಯಾದಿಗಳಿಗೆ ನಿಯಾಮಕರಾಗಿರುತ್ತಾರೆ. ಆದ್ದರಿಂದ ಅವರ ಉಪಾಸನೆಯೇ ಒಮ್ಮೊಮ್ಮೆ ಇಂದ್ರಿಯಜಯಕ್ಕೆ ಸಾಕಾಗುತ್ತೆ ಎಂದು ಅವರನ್ನು ಧ್ಯಾನಮಾಡುವ ಕ್ರಮವನ್ನು ತೋರಿಸುವುದಕ್ಕಾಗಿ ಅವರನ್ನು ತಾರತಮ್ಯಾನುಸಾರ ಶ್ರೀಕೃಷ್ಣನು ನಿರ್ದೇಶಮಾಡಿದ್ದಾನೆ. ಮತ್ತು ಪರಮಾತ್ಮನನ್ನು ಸ್ಮರಿಸುವಾಗಲೂ ಅವನು ತಾರತಮ್ಯಕ್ಕೆ ಸೀಮಾಭೂತನು. ಅವನಿಗಿಂತ ಉತ್ತಮರಿಲ್ಲ. ಕಾಮನು ದುರಾಸದನಾದರೂ ಅವನ ಎದುರಿನಲ್ಲಿ ಇವನು ನಿಲ್ಲಲಾರ. ಅಂಥಾ ಪರಮಾತ್ಮನನ್ನು ಸರ್ವೋಚ್ಚನೆಂದು ಉಪಾಸನೆ ಮಾಡಿ ಕಾಮಾಖ್ಯಶತ್ರುವನ್ನು ನಿಗ್ರಹಿಸಬೇಕು ಎಂದು ಸೂಚಿಸುವುದಕ್ಕಾಗಿಯೂ ಈ ತಾರತಮ್ಯ ವರ್ಣನೆ ಮಾಡಿದ್ದಾನೆ.

3. ಮಹಾಬಾಹೋ! ಎಂದು ಹೇಳಿದ್ದರಿಂದ, ನಿನಗೂ ಇತರ ಸಾತ್ವಿಕಜೀವರಿಗೂ ಕಾಮಜಯವು ಶಕ್ಯವು ಎಂದು ತೋರಿಸಿದ್ದಾನೆ. ಶತ್ರುವು ಎಷ್ಟು ಭಯಂಕರನಾದರೇನು ? ಭಯಕ್ಕೂ ಭೀತಿಜನಕನಾದ ಶ್ರೀನಾಥನಪಾದವನ್ನು ನಂಬಿದವರಿಗೆ ಯಾತರ ಭಯ. ಆದ್ದರಿಂದ ನೀನು ಹೃದ್ಗತ ಪರಮಾತ್ಮನನ್ನು ಸರ್ವೋತ್ತಮನೆಂದು ಆರಾಧಿಸಿ, ಇಂದ್ರಿಯಗಳನ್ನು ನಿಗ್ರಹಿಸಿ ದುರಾಸದನಾದ ಕಾಮನನ್ನು ಕೊಂದು ''ನನ್ನ ಬಂಧುಗಳು ಸ್ವಾಮಿದ್ರೋಹಿಗಳಾದರೂ ಸುಖಿಯಾಗಿರಲಿ'' ಎಂಬ ಇಚ್ಛೆಯನ್ನು ತ್ಯಜಿಸಿ ಯುದ್ಧಮಾಡು ಎಂದು ಭಾವ.

ಇತಿ ಶ್ರೀಮಹಾಭಾರತೇ ಶತಸಾಹಸ್ರ್ಯಾಂ ಸಂಹಿತಾಯಾಂ , ವೈಯಾಸಿಕ್ಯಾಂ ಭೀಷ್ಮಪರ್ವಣಿ

ಶ್ರೀಮದ್ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಕರ್ಮಯೋಗೋ ನಾಮ

ತೃತೀಯಾಧ್ಯಾಯಃ ಸಂಪೂರ್ಣಂ ॥ ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು ॥